UNIVERSAL LIBRARY

OU_198155

UNIVERSAL LIBRARY

ಮೂರನೆಯ ವರುಷದ ಎರಡನೆಯ ಪ್ರಕಟನೆ

# ಅವರು ಮತ್ತು ದೇವಕ್ಕ

ಐರಣಿ ಶ್ರೀನಿವಾಸ
ಬಿ. ಎ. ( *Ist Class* )

ಪರ್ಣಕುಟಿ ಗ್ರಂಥಮಾಲೆ
ಗೋಕರ್ಣ

೧೯೪೮ ೧-೮-೦

ಸಂಪಾದಕರು:
ವಿ. ಜಿ. ಭಟ್ಟ, ಎಂ. ಎ.
ಗೌರೀಶ ಕೈಕಿಣಿ

ಸಂಚಾಲಕರು:
ಶಾ. ಗ. ಗೋಪಿ

ಮಾರಾಟಗಾರರು:

ಸಮಾಜ ಪುಸ್ತಕಾಲಯ

ಗಾಂಧೀ ಚೌಕ, ಧಾರವಾಡ

( *All rights reserved by the author* )

ಬೆಲೆ: ಒಂದೂವರೆ ರೂಪಾಯಿ

ಮುದ್ರಕರು:
ಎಂ. ಜಿ. ಪಾಲೇಕರ
ವಿಶಾಲ ಕರ್ನಾಟಕ ಪ್ರೆಸ್
ಧಾರವಾಡ.

ಪ್ರಕಾಶಕರು:
ಬಾಲಚಂದ್ರ ವೆಂಕಟೇಶ ಘಾಣೇಕರ
ಸಮಾಜ ಬುಕ್ ಡಿಪೊ, ಧಾರವಾಡ
( ಪರ್ಣಕುಟಿ ಗ್ರಂಥಮಾಲೆಯ ಪರವಾಗಿ)

# ನಮ್ಮ ಮಾತು

ಮೂರನೆಯ ವರುಷದಿಂದ ಮಾಲೆಗೊಂದು ಹೊಸ ಕಳೆ ಬಂದಿದೆ. ಇದಕ್ಕೆ ಜಿಲ್ಹೆಯ ಒಳಗಿನ, ಹೊರಗಿನ ಗೆಳೆಯರ ಸಹಕಾರ ಸಹಾಯಗಳೇ ಕಾರಣ. ಹಲವರು ಹಲವು ವಿಧವಾಗಿ ನೆರವಾಗಿದ್ದಾರೆ. ನಮ್ಮ ಬಿನ್ನಹಕೆ ಮನ್ನಣೆಯಿತ್ತು ಉದಾರ ಹಸ್ತದಿಂದ ಧನಸಹಾಯ ಮಾಡಿದ,

ಶ್ರೀ. ಜಗದ್ಗುರು ಕರಿಬಸವ ರಾಜೇಂದ್ರ ಸಂಸ್ಥಾನ (ಆಶ್ರಯದಾತರು)
ಗವಿಮಠ, ಉರವಕೊಂಡ

ಶ್ರೀ. ಎಸ್. ಸಿ, ಜವಳಿ, ಬಿ. ಎ. ಎಲ್ ಎಲ್. ಬಿ. (ಪೋಷಕರು)
ವಕೀಲ ಧಾರವಾಡ.

ಶ್ರೀ. ಆರ್. ವಿ. ಬಲವಳ್ಳಿ, ಹೊನ್ನಾವರ. (ಪೋಷಕರು)

ಶ್ರೀ. ಡಿ. ವಿ. ಚಿತ್ತಾಲ, ಬಿ. ಎ., ಎಲ್ಎಲ್. ಬಿ. (ಪೋಷಕರು)

ಶ್ರೀ. ಸಿ. ಕೆ. ಮೂಡಿ, ಸಿರ್ಸಿ (ಸಹಾಯಕರು

ಇವರೆಲ್ಲರಿಗೆ ನಾವು ಅತ್ಯಂತ ಕೃತಜ್ಞರಾಗಿದ್ದೇವೆ. ಶ್ರೀ. ಚಿತ್ತಾಲರ ಪ್ರೇರಣೆ–ಪೋಷಣೆ ಇಲ್ಲದಿದ್ದರೆ ಮಾಲೆಗೆ ಕಳೆದ ಎರಡು ವರುಷಗಳದೇ ಗತಿಯಾಗುತ್ತಿತ್ತು. ಅವರು ನಮ್ಮೊಳಗಿನ ಒಬ್ಬರಾಗಿದ್ದರೂ ಇಲ್ಲಿ ಅವರಿಗೆ ಕೃತಜ್ಞತೆ ಸಲ್ಲಿಸುವದು ಅಗತ್ಯ

ಇದರಂತೆ ಹೊಸ ಹೊಸ ಲೇಖಕರು ಉತ್ಸಾಹದಿಂದ ಮುಂದೆ ಬಂದಿದ್ದಾರೆ. ಸಣ್ಣಕತೆಗಳ ಬರೆಹದಿಂದ ಕರ್ನಾಟಕಕ್ಕೆ ಸಾಕಷ್ಟು ಪರಿಚಿತರಾದ ಶ್ರೀ. ಐರಣಿ ಶ್ರೀನಿವಾಸರಾಯರು ತಮ್ಮ ಎರಡು ನೀಳ್ಗತೆಗಳನ್ನು ಇಲ್ಲಿ ನೀಡಿದ್ದಾರೆ. ಅವರ ಕತೆಗಳ ವಿಷಯವಾಗಿ ಮುನ್ನುಡಿಕಾರರು ಬರೆದಿದ್ದಾರೆ; ನಾವು ಮತ್ತೆ ಹೇಳುವದು ಅನಾವಶ್ಯಕ.

ಈ ವರ್ಷದಿಂದ ಲೇಖಕರಿಗೆ ಸ್ವಲ್ಪವಾದರೂ ಸಂಭಾವನೆ ಸಲ್ಲಿಸುವದು ಸಾಧ್ಯವಾಗಿದೆ. ತರುಣ ಲೇಖಕರಿಗೆ ಕುಟಿಯ ಬಾಗಿಲು ತೆರೆದಿದೆ. ಎಲ್ಲ ಬಗೆಯ ಬರೆಹಗಾರರಿಗೆ ಸ್ವಾಗತ.

ಅಂದವಾಗಿ ಅಚ್ಚು ಹಾಕಿಕೊಟ್ಟ 'ವಿಶಾಲ ಕರ್ನಾಟಕ' ಪ್ರೆಸ್ಸಿನ ವ್ಯವಸ್ಥಾಪಕರಿಗೆ ನಮ್ಮ ಕೃತಜ್ಞತೆಗಳು.

# ಮುನ್ನುಡಿ

ಐರಣಿ ಶ್ರೀನಿವಾಸರ ಎರಡು ನೀಳ್ಗತೆಗಳಿಗೆ ಈ ಮುನ್ನುಡಿಯನ್ನು ಒರೆಯಲು ನನಗೆ ತುಂಬಾ ಧನ್ಯತೆ ಎನಿಸುತ್ತದೆ. ಕನ್ನಡ ಸಾಹಿತ್ಯದಲ್ಲಿ ಹೊಸ ಹೆಜ್ಜೆಯನ್ನು ಇಡಲು ಮುಂದರಿಯುವವರು ಹಿರಿಸಾಹಿತಿಗಳ ಹರಕೆಯನ್ನೋ ಪ್ರಸ್ತಾವನೆಯನ್ನೋ, ಈಜುಗುಂಬಳದಂತೆ ಕಟ್ಟಿಕೊಂಡೇ ಸಾಹಿತ್ಯಸಾಗರದಲ್ಲಿ ಬೀಳುವ ಸಂಪ್ರದಾಯ ಇತ್ತೀಚೆಗೆ ರೂಢವಾಗಿತ್ತು. ಲಂಕೆಗೆ ಸೇತುವನ್ನು ಕಟ್ಟುವಾಗ ಕಡಲಿಗೆ ಇಳಿಬಿಟ್ಟ ಬಂಡೆಗಳನ್ನು ತೇಲಿಸಲು ರಾಮನಾಮದ ಮೇಲ್ಬರಹ ಬೇಕಾಗಿತ್ತಂತೆ. ಆ ದೃಷ್ಟಾಂತ, ಬಂಡೆಯ ಜಡತ್ವಕ್ಕೂ, ರಾಮನಾಮದ ಮಹಿಮೆಗೂ ಶೋಭಿಸಿರಬಹುದಾದರೂ ಹೊಸಗನ್ನಡ ವಾಙ್ಮಯ ವಾಹಿನಿಯಲ್ಲಿ ತೇಲಿಬಿಟ್ಟ ನವಕೃತಿಗಳ ಕಾಗದದ ನಾವೆಗಳಿಗೆ ಹೀಗೆ ಹಿರಿಯರ ಭಾರವಾದ 'ನರದಹಸ್ತ'ಗಳನ್ನು ಇಡಲುಕೊಟ್ಟರೆ ಅಷ್ಟೊಂದು ಪ್ರಶಸ್ತವಲ್ಲವೆಂದು ನನಗೆ ಅನಿಸತೊಡಗಿತ್ತು.

ಆತುರಣರಲ್ಲಿ ಹೊಸಹರೆಯ ಹುರುಪು, ಹುಮ್ಮಸದ ಶ್ರೀ ಐರಣಿಯವರ ಕತೆಗಳಿಗೆ ನನ್ನದೊಂದು ಮುನ್ನುಡಿ ಇರಲಿಯೆಂದು ಉಭಯ ಮಿತ್ರರಾದ ಶ್ರೀ. ವ್ಹಿ. ಜಿ. ಭಟ್ಟರು ನನ್ನನ್ನು ಒತ್ತಾಯಪಡಿಸಿದರು, ನಾನೂ ಒಪ್ಪಿಕೊಂಡೆ. ಇದಕ್ಕೆ ಕಾರಣ ಇಷ್ಟೇ. ನಾವು ಯಾರೂ ಹಿರಿಯರಲ್ಲ. ಪರಸ್ಪರರ ಹೊಸಕೃತಿಗಳ ರಸವನ್ನು ಅನ್ಯೋನ್ಯವಾಗಿ ಸವಿಯುವ "ಸೊಗಸುಗಾರಿಕೆ" ಯವರು. ನಾನು ಈ ಕತೆಗಳಲ್ಲಿ ಸವಿದ ಸೊಗಸನ್ನು ತುಸುಮಟ್ಟಿಗೆ ಇತರರಿಗೂ ಉಣಿಸಲು ಈ ನಾಲ್ಕುಮಾತುಗಳು ನೆರವಾಗಲೆಂದೇ ಈ ಮುನ್ನುಡಿಗೆ ಒಪ್ಪಿದೆನು.

'ನೀಳ್ಗತೆ'ಯೆಂದರೇನು? ಪುಟಗಟ್ಲೆ ಬೆಳೆದು ಹರಿದ 'ಸಣ್ಣಕತೆ'ಯೋ ಅಥವಾ ಪುಟ್ಟದಾಗಿ ಮೈವೆತ್ತ ಕಾದಂಬರಿಯೋ? ನನ್ನ ಮಟ್ಟಿಗೆ ಸಂಕ್ಷಿಪ್ತವಾದ ಕಾದಂಬರಿಯೆಂದೇ ನೀಳ್ಗತೆಯನ್ನು ಕರೆಯುವದು ಲೇಸೆನಿಸುವದು. ಏಕೆಂದರೆ ನಿಡಿದಾಗಿ ಬೆಳೆದ 'ಸಣ್ಣಕತೆ'ಯೆಂದರೆ ಆ ಬೆಳವಣಿಗೆ ಒಂದು

ಹದಗೆಟ್ಟ ಹರಟೆಯಂತೆ ಅನಿಸಬಹುದು. ಮುಖ್ಯವಾಗಿ ಬೇಕಾದುದು ಜೀವಾಳದ ಸ್ವಾರಸ್ಯ. ಕತೆಹರಿದ ಉದ್ದಕ್ಕೂ ಈ ವೇಧಕತೆ, ಸತತವಾದ ಆಸಕ್ತಿಸೆಳೆದಿಡುವಗುಣ ಯಾವ ಕತೆಗೂ,-ಸಣ್ಣದಿರಲಿ 'ನೀಳ್' ಇರಲಿ-ಜೀವಸತ್ವ. ಪ್ರಟ್ಟಕಾದಂಬರಿಯೆಂದುಕೊಂಡರೇ ತನ್ನ ವಸ್ತುವಿನ್ಯಾಸ-ಸಂವಾದ-ಸಂವಿಧಾನಗಳಲ್ಲಿ ಉತ್ತರೋತ್ತರ ಉತ್ಕರ್ಷ ಉತ್ಕಟತ್ವವನ್ನು ಹರಿದಾಡಿಸಲು ಬರಹಗಾರನು ಅವಧಾನವಿಡುವದು ಸುಲಭ.

ಇಂತಹ ಉತ್ಕರ್ಷ 'ಅವರು" ಈ ಕತೆಯಲ್ಲಿ ಸಾಧಿಸಿದೆ. ಇದು ಯಾವ ಭಾಷೆಗೂ ಭೂಷಣವಾಗಬಲ್ಲ ಒಂದು ಒಳ್ಳೇ ಕತೆ. ಇದೊಂದೇ ಬರೆದರೂ ಐರಣಿಯವರು ಲಲಿತಸಾಹಿತ್ಯದಲ್ಲಿ ಸಿದ್ಧಹಸ್ತರೆನಿಸುತ್ತಿದ್ದರು. ಕತೆಯು ವಿವರವಾದ ರಸವಿಮರ್ಶೆಯ ಮೋಹ ನಾನಿಲ್ಲಿ ಬಲವಾಗಿ ಹತ್ತಿಕ್ಕಿದ್ದೇನೆ. ಕಥನ ಕೌಶಲ್ಯದಲ್ಲಿಯ ಅವರ ಹಿಡಿತ ಪ್ರೇಕ್ಷಣೀಯವಿದೆ. 'ದೇವಕ್ಕ' ಕತೆಯೇನೋ ಚನ್ನಾಗಿದೆ. ತಂತ್ರವೂ ಹದಗೆಟ್ಟಿಲ್ಲ. ಸಾವಕಾಶವಾಗಿ ಪ್ರತಿಲೋಮ ಪದ್ಧತಿಯಿಂದ ಕಥೆಯ ಆನುಪೂರ್ವಿಯನ್ನು ಅಲ್ಲಲ್ಲಿ ಹೆಣೆದು ಒಂದು ತುಂಬ ತಥ್ಯದ ಚಿತ್ರವನ್ನು ಐರಣಿಯವರು ಬಿಂಬಿಸಿದ್ದಾರೆ ಆದರೆ ಅದೇಕೋ ಕತೆಯ ವೇಗ ತೀರ ಮಂದವೆನಿಸುವದು. ಹುರಿಕಟ್ಟು ಕೆಲವೆಡೆಗೆ ಸಡಿಲುಬಿದ್ದಂತಾಗಿ ನಮ್ಮ ಆಸಕ್ತಿಯ ಕಾವು ಇಳಿಯುವದು. ಉತ್ತಮ ಕತೆಗಾರಿಕೆಯ ಎಲ್ಲ ಲಕ್ಷಣಗಳು ಅಲ್ಲಿ ಕಂಡುಬರುವಂತಿದ್ದರೂ ಆ ಕತೆ ಉತ್ತಮವಾಗಿಲ್ಲ.

ಆದರೂ ಎರಡೂ ಕತೆಗಳಲ್ಲಿಯ ಮನೋಧರ್ಮದ ಆವಿಷ್ಕಾರ ಮನೋಜ್ಞವಾಗಿದೆ. ದೇವಡು ಅವರ "ಅಂತರಂಗ"ದನಂತರ ಸಹೇತುಕವಾಗಿ ಹೀಗೆ ಅಂತರಂಗದ ತೆರೆತೆರೆಗಳನ್ನು ಪರೆಪರೆಯಾಗಿ ಬಿಡಿಸಿ, ಅರಳಿಸಿ ತೋರಿಸಲು ಹೊರಟ ಕತೆಗಾರರು ಐರಣಿಯವರೇ ಎಂದು ಹೇಳಿಬಿಡಬೇಕೆಂದೆನಿಸುವದು! ಇಲ್ಲವಾದರೆ "ಏನೂ ಇಲ್ಲದ ಜಗಳ ಕ್ರಿಮಿನಲ್ ಕೇಸಾಗಿ ಮಾರ್ಪಟ್ಟ" ಒಂದು ಸಂದರ್ಭವೆತ್ತಿಕೊಂಡು ಅದರಲ್ಲಿ ವಿದ್ಧವೂ, ಅವಿದ್ಧವೂ ಆದ ಮಾತೃಹೃದಯದ ಹೊಯ್ದಾಟ ಹೋರಾಟಗಳ ಕರುಣ

ದಾರುಣವಾದ ಚಿತ್ರವನ್ನು ಕುಸುರಾಗಿ ಕಳೆಗೊಳಿಸಿದ ಐರಣಿಯವರ ಕತೆಯ ಕೈಗಾರಿಕೆ ನಿಜವಾಗಿಯೂ ಸ್ತುತ್ಯ. ಇವೆರಡೂ ಕತೆಗಳನ್ನು ಓದಿಯೇ ಸವಿಯಬೇಕು ಆ ಕುರಿತು ಓದುವದರಲ್ಲಿ ವಾಚಕರ ತಾಳ್ಮೆ ಸವೆಯಿಸುವದು ಸರಿಯಲ್ಲ.

ಇಂಥ ಉತ್ಕೃಷ್ಟ ಕತೆಗಳ ಫಲಭಾರವು ಹೀಗೆಯೇ ಐರಣಿಯವರ ಪ್ರಸನ್ನ ಪ್ರತಿಭೆಯ ವಾಙ್ಮಯವೆಲ್ಲರಿಗೆ ಹೆಚ್ಚು ಹೆಚ್ಚಾಗಿ ಬರಲಿ, ಅದರಿಂದ ಕನ್ನಡದ ರಸದೋಂಟ ಸಂಪನ್ನವಾಗಲಿ. ಇದೇ ನನ್ನ ಹಾರೈಕೆ.

**ಗೌರೀಶ ಕಾಯ್ಕಿಣಿ**

# ‘ ಅವರು ’

ಕೊನೆಗೂ ಮಾಮಾನ ಮನಸ್ಸಿನಂತೆಯೇ ಆಯಿತು. ಸರಸಕ್ಕನು ಬಹಳಷ್ಟು ಒತ್ತಾಯಪಡಿಸಿದಳೆಂದು, ಅವನು ನಮ್ಮಿಬ್ಬರನ್ನು ಸ್ಟೇಶನ್ನಿನ ವರೆಗೆ ಕಳಿಸಲು, ಅರೆಮನಸ್ಸಿನಿಂದ ಮೊದಲಿಗೆ ಒಪ್ಪಿದ್ದನು. ಆದರೆ ಅಕಸ್ಮಾತ್ತಾಗಿ ಮೇಲಿನ ಆಫೀಸರರು ಅವನಿಗೆ ಹೇಳಿಕಳುಹಿಸಿದರೆಂದು ನಾನೂ ಸುರೇಶನೂ ಇಬ್ಬರೇ ಹೊರಡಬೇಕಾಯಿತು.

ಟಿಕೀಟೊಂದನ್ನು ತೆಗೆಯಿಸಬೇಕಲ್ಲ. ಪ್ಲ್ಯಾಟಫಾರ್ಮನ ಮೇಲೆಯೇ ಸಾಮಾನನ್ನಿಟ್ಟುಕೊಂಡು ನಾನು ಅಲ್ಲೇ ನಿಂತೆ. ಸುರೇಶನು ಟಿಕೀಟನ್ನು ತೆಗೆಯಿಸಲು ಹೋದನು

ಮಾವಾನ ಮೇಲೆ ನನಗೆ ಬಹಳಷ್ಟು ಬೇಸರ ಬಂದಿತು. ಹೆಂಡತಿಯ ಬಾಣಂತಿತನಕ್ಕೆ ನಾನು ಬೇಕಾಯಿತು. ಐದು ತಿಂಗಳ ಹಿಂದೆ ಇದೇ ಪುಣೆಗೆ ಬಂದಾಗ, ಸ್ಟೇಶನ್ನಿನ ವರೆಗೂ ಬಂದು ಮನೆಗೆ ಕರೆದೊಯ್ದ. ಆಗ ಆದರವಿತ್ತು. ಕೆಲಸ ತೀರಿದ ಮೇಲೆ ಈಗೇನು? ನಾವಿಬ್ಬರೇ ಹುಡುಗರು ಹೇಗೆ ಹೋದೇವು ಎಂಬುದರ ಕಲ್ಪನೆ ಬರಬಾರದೆ? ಅವನ ಇಂತಹ ಸ್ವಭಾವವನ್ನರಿತೇ ಅಪ್ಪನು ಇಲ್ಲಿಗೆ ನನ್ನನ್ನು ಕಳುಹಿಸಲು ಮೊದಲು ಒಪ್ಪಿರಲಿಲ್ಲ. ಆದರೂ ತಂಗಿಯೆಂಬ ಅಭಿಮಾನ ಬೇರೆ ಇರುತ್ತದಲ್ಲ; ಅಲ್ಲದೆ ನನಗೂ ಸರಸಬಚಿಯನ್ನು ನೋಡದೆ ಬಹಳ ದಿನಗಳಾದುದರಿಂದ ಹೊರಟು ಬಂದೆ........ ಸರಸಕ್ಕ ನಮ್ಮವಳಾದರೆ ಮಾಮಾನಿಗೇನು? ತನ್ನ ಕಾರ್ಯವಾಯಿತು, ಮುಗಿಯಿತು........ ಗಂಡಸರೆಂಬವರೇ ಹೀಗೇನೊ!

ನನಗೆ ಸ್ವಲ್ಪ ದೂರದಲ್ಲಿ ಒಬ್ಬ ತರುಣನು ಕೂಲಿಯವನ ಕೈಯಿಂದ ಸಾಮಾನನ್ನು ಇಳಿಸಿದನು. ಅತಿ ದೊಡ್ಡದಾದ ಒಂದು ಟ್ರಂಕು, ಹೋಲ್ಡಾಲು, ಮತ್ತೆ ಒಂದೆರಡು ಚಿಲ್ಲರೆ ಸಾಮಾನುಗಳು. ಮೊದಲಿಗೆ ಗೊತ್ತುಮಾಡಿದಷ್ಟು

ಹಣವನ್ನು ಅವನಿಗೆ ಕೊಟ್ಟಿರಬೇಕು. ಆದರೆ ಆ ಕೂಲಿಯವನು ದೈನ್ಯದಿಂದ ಮತ್ತೆ ಹಣ ಕೇಳಿದನು. ಇವನು ಮೊದಲು ಇಲ್ಲವೆಂದ. ಕೂಲಿಯವನು ಕನ್ನಡದಲ್ಲಿ ಮಾತನಾಡತೊಡಗಿದ ಕೂಡಲೆ ಗುರುಮಾತೆತ್ತದೆ ಆತನು ಸ್ವಲ್ಪ ಹಣ ಹೆಚ್ಚಿಗೆ ಕೊಡುವುದು ಕಂಡಿತು. ಆ ಕೂಲಿಯವನು ವಿಜಾಪೂರ ತಾಲೂಕಿನವನಂತೆ. ಬರಗಾಲದ ಮೂಲಕ ಕೂಲಿ ಮಾಡುತ್ತಿರುವುದಾಗಿಯೂ ಪುಣೆಯಲ್ಲಿ ತನ್ನ ಸಂಸಾರ ಈಗ ನಡೆದಿರುವ ಸ್ಥಿತಿಯನ್ನು ಸ್ವಲ್ಪ ಮಾತಿನಲ್ಲಿ ಇದ್ದಂತೆ ಹೇಳಿದ. ಆದರೂ ಅದು ಎಷ್ಟು ಮನ ಹಿಡಿಯುವಂತಹದಾಗಿತ್ತು! ತರುಣನು ಅವನ ಹೆಗಲನ್ನು ತಟ್ಟುತ್ತ "ಗಾಡೀ ಬಂದ ಕೂಡಲೇ ನೀನೇ ಬಂದು ಸಾಮಾನು ಹಾಕು, ಇನ್ನಷ್ಟು ಹಣ ಕೊಡತೇನಿ" ಎಂದು ಹೇಳಿದನು.

ಆ ತರುಣನು ಇತ್ತ ಕಡೆ ಹೊರಳಿ ಮುಖವನ್ನೊರಸಿಕೊಳ್ಳುತ್ತಿದ್ದ. ನೋಡಿದೆ. ಅಬಬ! ಏನು ಆ ಸ್ವರೂಪ! ಮುಖದ ಅಂದಗೇಡಿತನ ಒಮ್ಮೆ ನೋಡುವುದಕ್ಕೆ ಕೂಡಾ ಜಿಗುಪ್ಸೆ ತರುವಂತಿದ್ದಿತು. ತೀರ ಕಪ್ಪು ಬಣ್ಣ, ಮೊಂಡವಾದ ಮೂಗು, ಅಗಲವಾದ ಬಾಯಿ, ಅಂತಹದರಲ್ಲೂ ತುಸು ಉಬ್ಬಿದ ಒಸಡೆ, ಕಣ್ಣಿನಲ್ಲಿ ಮಾತ್ರ ಒಂದು ಬಗೆಯ ನಿಚ್ಚಳತೆ ಕಾಣುತ್ತಿತ್ತು.

ನನಗೆ ಇದೇ ಆಶ್ಚರ್ಯ. ಆ ಪ್ರಾಣಿ ತನ್ನ ಸಾಮಾನಿನ ಪರಿವೆಯಿಲ್ಲದೆ, ಬಡಬಡನೆ ಹೊರಗೆ ಹೋಗಿಬಿಟ್ಟನು.

ನಾನು ಅತ್ತ ಇತ್ತ ನೋಡುತ್ತ ಸುಮ್ಮನೆ ವೇಳೆ ಕಳೆಯುತಲಿದ್ದೆ. ಟಿಕೀಟನ್ನು ತರಲು ಹೋದ ಸುರೇಶನು ಇನ್ನೂ ಬಂದಿರಲಿಲ್ಲ. ಪುಣೆಯಲ್ಲಿ ಟಕೀಟು ತಗಿಸುವ ಗೋಳನ್ನು ಕೇಳಿದ್ದೆ. ಆದರೂ ನಿರ್ವಾಹವಿಲ್ಲವಲ್ಲ. ಅಷ್ಟರಲ್ಲಿ ಧಾರವಾಡದ ಕಡೆ ಹೋಗಬೇಕಾದ ನಮ್ಮ ಗಾಡಿ ಬಂದಿತು. ಪ್ಲ್ಯಾಟಫಾರ್ಮಿನ ಮೇಲಿದ್ದ ಪ್ರಯಾಣಿಕರು ಸ್ವಲ್ಪ ಜನ. ಏಕೆಂದರೆ ಗಾಡಿ ಬಿಡುವುದಕ್ಕೆ ಇನ್ನೂ ಒಂದು ತಾಸು ಅವಧಿಯಿತ್ತು. ಪುಣೆಯಿಂದಲೇ ಹೊರಡುವುದಷ್ಟೆ. ಗಾಡಿಯಂತೂ ತೆರವೇ ಇದ್ದಿತು. ಇದ್ದವರಷ್ಟು ಜನ ಹತ್ತಿದರು.

ಸುರೇಶನು ಆಗೂ ಬರಲಿಲ್ಲ. ಇವನು ಬೇಗ ಬಂದರೆ ಸಾಮಾನನ್ನಿಡಿಸಿ ಜಾಗ ಹಿಡಿದು, ಪ್ರಶಸ್ತವಾಗಿ ಕೂಡಬಹುದಲ್ಲ ಎಂದು ಆತುರವಾಯಿತು. ಕೆಲ

ಅಂತರದಲ್ಲಿ ಸಾಮಾನನ್ನಿಟ್ಟು ಹೋದ ಆ ತರುಣನೂ ಬಂದಿರಲಿಲ್ಲ. ಕನ್ನಡಿಗರೆಂದರೇ ಹೀಗೆಯೊ? ಸಾಮಾನನ್ನು ಯಾರಾದರೂ ಕೈಯಲ್ಲಿ ಹಿಡಕೊಂಡು ಹೋದರೆ ಗತಿಯೇನು? ನಾನು ನನ್ನ ಸಾಮಾನಿನ ಹತ್ತಿರವೇ ಇದ್ದರೂ, ತುಸು ಅಂಜುತ್ತೇನೆ. ಅಂತಹದು.... ಹುಂಬತನ ಬಹಳ ನಮ್ಮ ಜನರಲ್ಲಿ—ಎಂದುಕೊಂಡೆ. ಆದರೆ ಅದನ್ನು ಕಾಯುವ ಹೊಣೆ ನನ್ನ ಮೇಲೂ ತುಸು ಇದ್ದಂತೆನಿಸಿತು. ಒಮ್ಮೆಲೆ ಅವನ ಅಸಹ್ಯ ಮುಖ ಕಣ್ಣಮುಂದೆ ಬಂದು, ಹಾಳಾಗಿ ಹೋಗಲಿ ಎಂದುಕೊಂಡೆ.

ನನ್ನ ಮನಸ್ಸು ಇಪತ್ತು ಬಂದ ಮಾಯುರಿನ ಕಡೆಗೆ ಹರಿಯಿತು. 'ತೋರಿಸುವದದೆ; ಈ ಗಾಡಿಗೆ ಹೊರಟು ಬರಬೇಕು' ಎಂದಿಷ್ಟೆ ಅಪ್ಪನು ತಿಳಿಸಿದ್ದಾನೆ. ನನ್ನನ್ನೀಗ ತೋರಿಸುವುದು ಯಾರಿಗೆ ಎಂಬುದನ್ನು ತುಸು ಕಾಣಿಸಬಾರದಿತ್ತೆ? ಅಥವಾ 'ಇಲ್ಲಿ ನನಗೆ ಬೇಸರ ಬರುತ್ತದೆ, ಊರಿಗೆ ಬರಬೇಕೆನ್ನುತ್ತೇನೆ' ಎಂದು ಮೊನ್ನೆ ಸಹಜವಾಗಿ ಪತ್ರದಲ್ಲಿ ಬರೆದಿದ್ದೆ. ಅದಕ್ಕೆಯೆ ಬೇಕಾಗಿ ಸುಮ್ಮನೆ 'ತೋರಿಸುವ' ನೆವಮಾಡಿ ಕರಸಿರಬಹುದೆ? ಎಂಬ ಸಂಶಯವೂ ಮೂಡದಿರಲಿಲ್ಲ. ಬೇಗ ಊರು ಸೇರಿಬಿಟ್ಟರೆ ನೆಟ್ಟಗೆ, ಎಂದೂ ಅಂದುಕೊಂಡೆ.

ಸುರೇಶನು ಇನ್ನೂ ಬರಲಿಲ್ಲ. ವೇಳೆ ನೋಡಿದೆ. ಒಂಬತ್ತು ಹೊಡೆಯ ಬಂದಿತ್ತು. ಈಗ ಆ ಕುರೂಪಿಯು ಬಂದನು. ಒಂದು ಸಲ ಪ್ಲ್ಯಾಟಫಾರ್ಮಿನ ಗುಂಟ ಓಡಾಡಿ, ಆ ಕೂಲಿಯುವನನ್ನು ಹುಡುಕಿ ತಂದನು. ಪೋಸ್ಟಿನ ಡಬ್ಬಿಗೆ ಹೊಂದಿ ಇದ್ದ ಡಬ್ಬಿಯಲ್ಲಿ ತನ್ನ ಸಾಮಾನನ್ನು ಹಾಕಹೇಳಿದನು ಅದಕ್ಕೆ ಕೂಲಿಯುವನು "ಯುಪಾ ಬ್ಯಾಡ್ರಿ ಇಲ್ಲೆ, ಟಪಾಲು ಚೀಲಾ ಹಾಕತಾರು" ಎಂದ. ಅದಕ್ಕೆ ಅವನು "ನಾ ಸಾವಿರ ಊರು ತಿರಗ್ಯಾಡೇನೊ, ನನಗ ಹೇಳತೀ? ಟಪಾಲ ಚೀಲ ಹಾಕೋ ಡಬ್ಬಿ ಆ ಮುಗ್ಗಲು ಅದ. ಅದರ ಮ್ಯಾಲೆ ಹಿಂಗs ಅಂತ ಬರದಾರ; ಇಲ್ಲೇನು ಬರೆದದ್ದು ಇಲ್ಲಾ" ಎಂದು ಹೇಳಿದನು.

ನಾನಿನ್ನೂ ಹಾಗೆಯೇ ಕುಳಿತಿದ್ದೆ. ಪ್ರತಿಕ್ಷಣಕ್ಕೆ ಸುರೇಶನಿಗಾಗಿ ಹೊರಳಿ ನೋಡುತ್ತಿದ್ದೆ. ಇವನೂ ಟಿಕೀಟನ್ನು ತಗಿಸಲು ಹೋಗಿದ್ದುದಾದರೆ ಎಷ್ಟು ಬೇಗ ಬಂದ! ಸುರೇಶನ ಗುರುತನ್ನು ಹೇಳಿ ಅವನ ಬಗ್ಗೆ ವಿಚಾರಿಸಲೆ?

ಎಂದು ಕೇಳಿಕೊಂಡೆ. ಮರುಕ್ಷಣವೇ ಅವನ ಅಸಹ್ಯ ಮುಖ, ನೆನಸದಿದ್ದರೂ ಕಣ್ಮುಂದೆ ಬಂದಂತಾಗಿ, ಕೇಳುವುದು ಸರ್ವಥಾ ಬೇಡವೆನಿಸಿತು.

ಅವನು ತನ್ನ ಸಾಮಾನನ್ನು ಒಯ್ದು ಹಾಕಿಸುವಾಗ, ನನ್ನ ಮುಂದೆಯೇ ಹಾದುಹೋದನು. ನನ್ನ ಕಡೆ ನೋಡುವನೆ, ಎಂದು ಅವನ ಕಡೆ ನನ್ನ ನೋಟ ತಿರುಗಿಸಿದ್ದೆ. ಅವನ ಕುರೂಪ ಮುಖ ನೋಡಲೆಂದಲ್ಲ, ಸಹಾಯಕ್ಕೆ ಕೇಳಿಯಾನೆ—ಎಂದು. ಸಾಮಾನ್ಯವಾಗಿ ಯುವಕರ ಮನಸ್ಸು ಹೆಣ್ಣುಮಕ್ಕಳಿಗೆ ಸಹಾಯ ಮಾಡಲು ತಾವಾಗಿ ಮುಂದುವರಿಯುತ್ತದೆ. ಆದರೆ ಈತನು ಹೊರಳಿ ಕೂಡಾ ನೋಡಲಿಲ್ಲ. ಅಂತೂ ಈ ಪ್ರಾಣಿಗೆ ಗರ್ವವೂ ಇದೆ ಎಂದು ನನ್ನ ಕಲ್ಪನೆಯಾಯಿತು.

ಸುರೇಶನು ಇನ್ನೂ ಬರಲಿಲ್ಲ. ಹದಿನೈದು-ಇಪ್ಪತ್ತು ನಿಮಿಷಕ್ಕೆಯೆ ಗಾಡಿ ಬಿಡಬಹುದು. ಮುಂದೆ ಗತಿಯೇನು?

ಒಂಬತ್ತು ಹೊಡೆದು ಬಿಟ್ಟಿತು. ಆಗಲೆ ಮುಂಬೈಯಿಂದ ಮೇಲುಗಾಡಿ ಬಂದಿತು. ತಡವಿಲ್ಲದೆ, ಆ ಗಾಡಿಗೆ ಬಂದ ಜನರು ತಂತಮ್ಮ ಸಾಮಾನು ಗಳೊಂದಿಗೆ ನಮ್ಮ ಗಾಡಿಗೆ ನುಗ್ಗಿದರು. ಬರಿದೆಂದು ಕಾಣುತ್ತಿದ್ದ ಗಾಡಿಯು ನೋಡನೋಡುವಷ್ಟರಲ್ಲಿ ತುಂಬಿಹೋಯಿತು. ಇನ್ನು ಕೆಲವರು ಸಾಮಾನು ಗಳನ್ನು ಹೊರಿಸಿಕೊಂಡೇ, ಜಾಗ ಎಲ್ಲಿದೆ—ಎಂದು ಓಡಾಡುತ್ತಿದ್ದರು.

ಕಾತರತೆಯಿಂದ ಮನಸ್ಸು ನುಗ್ಗಾಯಿತು. ಮಾಮಾನನ್ನು ಮನಸ್ಸಿನಲ್ಲಿ ಬಹಳಷ್ಟು ಬೈದೆ.

೯–೨೦ ಆಗಿತ್ತು. ಇನ್ನು ತುಸು ವೇಳೆಯಲ್ಲೇ ಗಾಡಿ ಬಿಟ್ಟುಬಿಡುವದು; ಈಗಾದರೂ ಸಾಮಾನನ್ನು ಹಾಕಿಸಲೇ ಎಂದು ಯೋಚನೆ ಬಂತು. ಆದರೆ ನನ್ನ ಕಡೆ ರೊಕ್ಕವಿಲ್ಲ, ಮೇಲಾಗಿ ಮರಾಠಿ ಬರುವುದಿಲ್ಲ. ಹಮಾಲನಿಗೆ ಏನೆಂದು ಹೇಳಲಿ? ಇಷ್ಟನ್ನು ಮಾಡಿ ಸಾಮಾನನ್ನು ಹಾಕಿಸಿದೆನಾದರೆ ಸುರೇಶನು ನನ್ನನ್ನು ಹುಡುಕಬಾರದು. ಹುಡುಕಿದ ಮೇಲೂ ನಾನು ಸಿಕ್ಕೇನು. ಆದರೆ ಗಾಡಿಯ ವೇಳೆಗೆ ಟಿಕೀಟೇ ದೊರೆಯದೆ ಹೋದರೆ? ಅಥವಾ ಈ ಗದ್ದಲದಲ್ಲಿ ನಾನೊಬ್ಬಳೆ ಹತ್ತುವುದಾದರೆ ಹೇಗೆ?

ಇದು ತಪ್ಪಿದರೆ ರಾತ್ರಿ ಒಂದು ಗಂಟೆಯ ಗಾಡಿಗೆ ಹೋಗಿರಿ, ಎಂದಿದ್ದ ಮಾಮಾ. ನನ್ನ ಹೃದಯ ಇನ್ನಷ್ಟು ಪರಿತಪಿಸಿತು ನಾನು ಬೇಗ

ಬರಬೇಕೆಂದು ಅಪ್ಪನು ಮುದ್ದಾಂ ವಾಯರ ಮಾಡಿದ್ದಾನೆ. ಹುಡುಗಿಯನ್ನು ಕೊಳ್ಳುವವರ ಅಂಕೆಯಲ್ಲಿ ಎಷ್ಟೆಂದರೂ ಹೆಣ್ಣು ಹೆತ್ತ ತಂದೆ ಇರಬೇಕಲ್ಲವೆ? ಈ ಗಾಡಿಗಾಗಿ ಧಾರವಾಡ ಸ್ಟೇಶನ್ನಿಗೆ ಬಂದಿರುವುದಾಗಿಯೂ ಅಪ್ಪ ತಿಳಿಸಿದ್ದಾನೆ.... ಇದೇ ಗಾಡಿಗೆ ಹೊರಡಲೇಬೇಕು.

ಸುರೇಶನು ಇನ್ನೂ ಬರಲಿಲ್ಲ! ಒಂದೊಂದು ಕ್ಷಣ ಒಂದೊಂದು ಯುಗವಾಯಿತು. ಚಿಂತೆ ನನ್ನ ಜೀವವನ್ನು ಸುಡುತ್ತಿತ್ತು.

ಅಷ್ಟರಲ್ಲಿ ಸುರೇಶನು ಬಂದನು, "ಎಲ್ಲಿ ಹೋಗಿದ್ದ್ಯೋ ಎಷ್ಟೊತ್ತದು?" ಎಂದು ಗದರಿಸಿದೆ. "ಇಲ್ಲೆ ನಡಿ. ಅಲ್ಲೇನು ನಾ ಮಲಕೊಂಡಿಲ್ಲಾ ಭಯಂಕರ ಗದ್ದಲ ಇತ್ತು. ಟಿಕೇಟು ಕೊಡೋದೆ ತಡಾಮಾಡಿ ಕೊಡಲಿಕ್ಕೆ ಹತ್ತಿದರು" ಎನ್ನುತ್ತ ಹಮಾಲನಿಗಾಗಿ ಹುಡುಕಾಡಿದನು. ಅಕಸ್ಮಾತ್ ಒಬ್ಬನು ಸಿಗಲು. ಕರತಂದು ಸಾಮಾನನ್ನು ತೋರಿಸಿದನು. ನಾನು ಸುರೇಶನಿಗೆ "ರೊಕ್ಕ ಗೊತ್ತುಮಾಡಿಬಿಡು. ಹಿಂದಾಗಡೆ ತಂಟೆ ಮಾಡಬಾರದು" ಎಂದೆ ಹಮಾಲನು ಮರಾಠಿಯಲ್ಲಿ "ಹನ್ನೆರಡಾಣೆ ಕೊಡ್ರಿ, ಬಾಯಿಸಾಹೇಬ" ಎಂದನು. ಅದಕ್ಕೆ ಸುರೇಶನು, "ಉಂಹು. ಇರೋವು ಮೂರs ದೊಡ್ಡ ಸಾಮಾನು, ಆರಣೆ ನಿನಗ ಕೊಡಬೇಕಾದ್ದು. ಆದರ ಎಂಟ ಆಣೆ ಕೊಡತೇನಿ ಬೇಕಾದರೆ ಬಾ" ಎಂದು ತಿಳಿಸಿದನು. ಮಾತನಾಡುವುದಕ್ಕೂ ವಿಶೇಷ ವೇಳೆಯಿರಲಿಲ್ಲ. ಹಮಾಲನು ಒಪ್ಪಿ, ಸಾಮಾನನ್ನು ಹೊತ್ತನು.

ಆದರೆ ವಿಪರೀತ ಗದ್ದಲ! ತುಂಬಿದ ಗಾಡಿಯಲ್ಲಿ ನಿಂತೇನೆಂದರೆ ಜಾಗವಿಲ್ಲ. ಯಾವ ಡಬ್ಬಿಯ ಬಾಗಿಲನ್ನೂ ತೆರೆಯುವುದಕ್ಕೂ ಗತಿಯಿಲ್ಲ. ಇಂಥದರಲ್ಲಿ ಇನ್ನೂ ಜನ ನುಗ್ಗುತ್ತಿದ್ದಾರೆ! ಹಮಾಲನು "ಇಲ್ಲಿ ಬರ್ರಿ" ಎಂದು ಗಾಡಿಯ ಹಿಂದಿನ ಮಗ್ಗಲು ಕರೆದುಕೊಂಡು ಹೋದನು.

ಹಿಂಬದಿಗೆ ಕೂಡಾ ನಮ್ಮ ಹಾಗೆ ಬಂದವರಿದ್ದರು. ನಮ್ಮ ಕೂಲಿಯವನು ಒಂದು ಡಬ್ಬಿಯ ಮುಂದೆ ನಿಂತು, ಸುರೇಶನಿಗೆ ಹತ್ತುವುದಕ್ಕೆ ಹೇಳಿದ. ಸುರೇಶನು ನನ್ನ ಕಡೆ ನೋಡಿದ. ಅದಕ್ಕೆ ಹಮಾಲನು "ನೀವು ಮ್ಯಾಲೆ ಹತ್ತಿ ಬಂದು, ಸಾಮಾನು ಇಸಕೋಳ್ರಿ, ಹಿಂದಾಗಡೆ ಇವರ್ನ ಹತ್ತಿಸತೇನಿ, ಖಿಡಿಕ್ಯಾಗಿಂದ" ಎಂದು ಹೇಳಿದನು. ನಮಗೂ ಹಾಗೆ ಮಾಡದ ಹೊರತು ಗತ್ಯಂತರವಿರಲಿಲ್ಲ.

ಸುರೇಶನು ನಮ್ಮಿಬ್ಬರ ಸಹಾಯದಿಂದ ಒಂದು ಕಿಡಿಕಿಯೊಳಗಿಂದ ಒಮ್ಮೆ ಒಳಗಿಳಿದನು. ಅಲ್ಲಿ ಕುಳಿತವರ ಕಡೆಯಿಂದ ಅವನು ಬೈಸಿಕೊಳ್ಳುವುದು ಕಾಣುತ್ತಿತ್ತು. ಪ್ರತಿ ಕ್ಷಣಕ್ಕೂ ಉದ್ವೇಗದಿಂದ ಹೊಯ್ದಾಡುತ್ತಿದ್ದೆ—ಒಮ್ಮೆ ಹೇಗೆ ಸುಸೂತ್ರ ಒಳಗೆ ಕುಳಿತೇವೊ ಎಂದು. ಇನ್ನು ಒಂದು ಹ್ಯಾಂಡಬ್ಯಾಗು ಉಳಿದಿತ್ತು.

ಕೂಡಲೇ ಆ ಹಮಾಲನು "ಏ ತಮ್ಮಾ, ನಾಕ ರೂಪಾಯಿ ತಗಿ" ಎಂದನು. ನಾಕು ರೂಪಾಯಿ, ಎಂದದ್ದರ ಅರ್ಥ ಆಗ ನಮಗಾಗಲಿಲ್ಲ.

"ಸಾಮಾನ ಕೊಡು, ಅವರ್ನ ಹತ್ತಿಸು; ಕೊಡತೇನಲ್ಲ" ಎಂದು ಸುರೇಶನು ಹೇಳಿದ.

"ಇಲ್ಲಿಲ್ಲ. ನಾಲ್ಕ ರುಪಾಯಿ ಇಡು ಕೈಯಾಗ. ಅಂದ್ರ ಈ ಬ್ಯಾಗ ಕೊಡತೇನಿ, ಇವರ್ನ ಹತ್ತಿಸತೇನಿ, ಇಲ್ಲಾದ್ರಿಲ್ಲ" ಎಂದು ಮರಾಠಿಯಲ್ಲಿ ಒದರಿದನು.

ಅವನ ಮಾತನ್ನು ಕೇಳಿ ನಮಗೆ ಸಿಡಿಲು ಬಡಿದಂತಾಯಿತು. ಇಂತಹದೇನನ್ನೂ ನಾವು ಊಹಿಸಿರಲಿಲ್ಲ. ನಾವೀಗ ಅವನ ಕೈಯಲ್ಲಿ ಸಿಕ್ಕಿಬಿದ್ದೇವೆಂಬುದರ ಅರಿವಾಯಿತು. ರೊಕ್ಕದ ಆಸೆಯಿಂದ ಎಷ್ಟು ನೀಚತನಕ್ಕಿಳಿಸಿದನಲ್ಲ ಎಂದು ಕೋಪದಿಂದ ಕುದಿದೆ. ಅದನ್ನು ದಾಟಿ ಹೆದರಿಕೆಯಿಂದ ಗದಗದ ನಡುಗಿದೆ.

ಸುರೇಶನು ಇದ್ದುದರಲ್ಲೇ ಧೈರ್ಯ ತಂದುಕೊಂಡು ಗದರಿಸಿದನು. ಆದರೆ ಅವನು ಅದಕ್ಕೆ ಎಷ್ಟೂ ಕಿವಿಗೊಡಲಿಲ್ಲ. ನಾ ಹೇಳಿದೆ "ಒಂದು ರುಪಾಯಿ ಕೊಟ್ಟು ಕಳಿಸಿ ಬಿಡು." ಅದರಂತೆ ಸುರೇಶನು ರೂಪಾಯಿ ಕೊಡ ಹೋದಾಗ, ಅದನ್ನು ಅವನು ಕಣ್ಣೆತ್ತಿ ನೋಡಲಿಲ್ಲ ಕೂಡ. "ನಾಕು ರುಪಾಯಿ. ಹೂಂ. ಇಲ್ಲಾದ್ರ ಇಲ್ಲ" ಎಂದು ಗಟ್ಟಿಸ್ವರದಲ್ಲಿ ಹೇಳಿದನು.

ಎಂತಹ ವಿಪತ್ತು! ಸಹಾಯಕ್ಕಾರೂ ಇಲ್ಲವೆ? ಹಿಂದಿನ ಮಗ್ಗಲು ಕತ್ತಲೆ. ಮುಂದಿಯ ಸುಳಿವಿಲ್ಲ ಅದಕ್ಕೇ ಈ ಕಡೆ ಕರಕೊಂಡು ಬಂದ.—ಈಗ ನೆನಪಾಯಿತು. ನಾವು ಹತ್ತಬೇಕಾದ ಡಬ್ಬಿಯಲ್ಲೆ ಆ ಕುರೂಪಿ ತರುಣನು ಹತ್ತಿದ್ದುದು. ಅವನಿಗಾಗಿ ಅಲ್ಲಿ ನೋಡಿದೆ. ಆದರೆ ಆತನು ಕಾಣಲಿಲ್ಲ. 'ಯಾರೂ ಈ ಸಮಯದಲ್ಲಿ ರಕ್ಷಿಸುವವರಿಲ್ಲ. ಎಲ್ಲರೂ ಸ್ವಾರ್ಥಿಗಳೆ!' ಎಂದು ಬೈದೆ.

ಸುರೇಶನು ಮಗ್ಗುಲಲ್ಲಿ ಕುಳಿತವರಿಗೆ ಕೇಳಿಕೊಂಡನು. ಅವರು 'ಪುಣೇದೊಳಗ ಹಿಂಗ್ಯರಿ. ಇಷ್ಟು ಜಾಗಾ ನಿಮಗ ದೊರಕಿಸಿ ಕೊಟ್ಟಾರ, ಅದೊಂದು ನಿಮ್ಮ್ಯಾಲೆ ಉಪಕಾರ ಅಂತೇ ತಿಳೀರಿ. ಪೋಲೀಸರೂ ಸಹಿತ ಇತ್ಲಾಗ ಸುಳಿಯೂದಿಲ್ಲ'' ಎಂದರು. ಬಾಗಿಲ ಬಳಿಯಲ್ಲಿ ಇದೇ ಬಗ್ಗೆ ತಂಟೆ ನಡೆದಿದ್ದುದು, ನನಗೆ ಆಗ ಲಕ್ಷ್ಯಕ್ಕೆ ಬಂತು

ನನ್ನ ಕಾಲು ಥರಥರ ನಡುಗತೊಡಗಿದವು. ಭಯದಿಂದ ಕಣ್ಣು ಕತ್ತಲೆ ಗುಡಿಸಿತು. ಸುರೇಶನು '' ನನ್ನ ಕಡೆ ಅಷ್ಟು ರೊಕ್ಕನ್ಯ ಇಲ್ಲಲೇ. ಟಿಕೀಟಿಗೆ ಖರ್ಚಾಗ್ಯಾವು'' ಎಂದು ಕನ್ನಡದಲ್ಲೇ ಚೀರಿದನು. ಅದು ನಿಜವೂ ಇತ್ತು. ತಿಂಗಳ ಕೊನೆಯಾದುದರಿಂದ ಮಾಮಾ ಗಾಡಿ ಖರ್ಚಿನ ಮಟ್ಟಿಗಾಗುವಷ್ಟು ಕೊಟ್ಟಿದ್ದ. ಇದೂ ಒಂದು ತಿಳಿದು ನನಗೆ ಮತ್ತಷ್ಟು ಗಾಬರಿಯಾಯಿತು. ಹಮಾಲನಿಗೆ ಸುರೇಶನ ಮಾತಿನ ಕಡೆ ಲಕ್ಷ್ಯವಿಲ್ಲ. '' ಹೂಂ, ಲಗೂ ರೊಕ್ಕಾ ತಗೀರಿ, ಹೊತ್ತಾಗತ್ಯದ'' ಎಂದು ನಮ್ಮನ್ನೇ ಗದರಿಸಿದನು.

ಬ್ಯಾಗನ್ನು ಅವನು ತನ್ನ ಕೈಯಲ್ಲೇ ಹಿಡಿದಿದ್ದ. ಅದರಲ್ಲಿ ಸರಸಕ್ಕನು ಬರುವ ಮುಂದ ಉಡಿತುಂಬಿದ ಹೊಸ ಸೀರೆಯಿತ್ತು. ನನ್ನ ಬಿಲವಾರಗಳನ್ನೂ, ಸುರೇಶನ ಫೌಂಟನ ಪೆನ್ನನ್ನೂ ಅದರಲ್ಲಿಯೇ ಹಾಕಿದ್ದೆ ಗಾಡಿಯಲ್ಲಿ ಕಳೆದು ಹೋಗಬಾರದೆಂದು ಇನ್ನೇನು ಗತಿ ಎಂದು ಸಮಸ್ಯೆ ನಿಂತಿತ್ತು. ಪಾರಾಗುವ ದಾರಿಯೆ ಇಲ್ಲವೆಂಬ ಅಂಜಿಕೆಯಿಂದ ಆ ಕ್ಷಣ ನನ್ನಲ್ಲಿ ಪ್ರಜ್ಞೆಯೆ ಉಳಿದಿರಲಿಲ್ಲ.

ಅಷ್ಟರಲ್ಲಿ ಆ ಕುರೂಪಿ ತರುಣನು ಬಂದವನೇ, ಹಮಾಲನ ಅಂಗಿಯನ್ನು ಹಿಡಿದು ಥಳೀರನೆ ಕೆನ್ನೆಗೆ ನಾಲ್ಕೈದು ಏಟು ಬಿಗಿದನು. '' ಬದ್ಮಾಷ್, ಹುಡುಗರ್ನ ಕಂಡು ಇಂಥಾ ಧಂದೆ ಮಾಡತೀ? ಬಾ ನಿನ್ನ ಪೋಲೀಸರ ತಾಬಾ ಮಾಡತೇನಿ'' ಎಂದು ಮರಾಠಿಯಲ್ಲಿ ಅಬ್ಬರಿಸಿದರು

ದೇವರು ಬಂದ ಹಾಗೆ ಬಂದರಲ್ಲ, ಎಂದು ನನ್ನ ಮನಸ್ಸು ಆಗ ಎಷ್ಟು ಆನಂದದಿಂದ ಕುಣಿದಾಡಿತು! ಮನಸ್ಸಿಗೆ ಎಂತಹ ನೆಮ್ಮದಿ ಬಂದಿತು! ಹೋದ ಜೀವ ಮರಳಿ ಬಂದಷ್ಟು ಸಮಾಧಾನಗೊಂಡೆ.

ಅವರು ಅವನ ಕೈಯಲ್ಲಿದ್ದ ಬ್ಯಾಗನ್ನು ಕಸಿದು ಸುರೇಶನ ಕೈಗೆ ಇತ್ತರು. ಅದಕ್ಕವನು ಬಹಳಷ್ಟು ಗುದ್ದಾಡಿದ. ಇಬ್ಬರೂ ಸಶಕ್ತ ಮೈಕಟ್ಟಿನವರೇ. ಆದರೂ ಅವರ ಮುಂದೆ ಅವನು ಈಡಾಗಲಿಲ್ಲ.

" ನೀವ್ಯಾರು ನಡುವ ಬರಲಿಕ್ಕೆ ? ನಾವೇನರೆ ಮಾಡಕೀವಿ " ಎಂದು ಮುಂತಾಗಿ ಹಮಾಲನು ಒದರಾಡತೊಡಗಿದನು.

" ಜಾಸ್ತ ಮಾತಾಡಿದೆಂದ್ರ, ಇಲ್ಲೇ ಜೇಲಿನ್ಯಾಗ ಕೂಡಿಸೇನು ಹುಶಾರಿಂದ ಇರು, " ಎಂದರವರು. ಆ ಮಾತಿನಲ್ಲಿ ಎಂತಹ ಎದೆಗಾರಿಕೆ !

" ಕರಾರ ಮಾಡಿದ ಒಂದು ರುಪಾಯರೆ ಕೊಡ್ರಿ. " ನಿಸ್ಸಹಾಯವಾಗಿ ಆತ ನುಡಿದನು.

ಅವನ ಮಾತಿಗೆ ಕಿವಿಗೊಡದೆ ಅವರು ನನ್ನ ಕಡೆ ತಿರುಗಿ " ಹೆಂಗಸರ ಡಬ್ಯಾಗ ಹತ್ತ್ಯೋದೊ, ಏನು ಇಲ್ಲೇನೊ " ಎಂದು ಕೇಳಿದರು. ನಾನು ತುಸು ತಡೆದು ' ಇಲ್ಲೇ ' ಎಂದೆ.

ಅವರು ಬಾಗಿಲ ಬಳಿಗೆ ಬಂದು, ಅಲ್ಲಿ ನಿಂತವರನ್ನು ಸರಿಸಿದರು. ಬಾಗಿಲು ತಗಿಯಲು ಬರದಂತೆ ಇಡಲಾಗಿದ್ದ ಸಾಮಾನುಗಳನ್ನು ತಗಿಸಿದರು. ಒಬ್ಬ ಹೆಣ್ಣುಮಗಳು ಹತ್ತಿ ಬರುವಳೆಂದೊ, ಅವರ ಮಾತಿನ ಶಕ್ತಿಗೊ, ಜನ ಅಂತಹದರಲ್ಲೇ ಅನುವುಗೊಟ್ಟಿತು. ಬಾಗಿಲು ತುಸು ತೆರೆಯಬಂತು. ನಾನು ಮೇಲೆ ಹತ್ತಿದೆ.

ಇತ್ತ ಹಮಾಲನು ಸುರೇಶನು ನಿಂತಿದ್ದ ಬದಿಯಲ್ಲಿನ ಕಿಡಿಕಿಗೆ ಬಂದು, ಸುರೇಶಗೆ ಒಂದು ರೂಪಾಯಿ ಕೊಡಲು ಕೇಳಿದನು. ಅಂತೂ ನಾವು ಪಾರಾದೆವಲ್ಲ ಎಂಬ ಆನಂದದಿಂದ, ಸುರೇಶನು ಪಾಕೀಟನ್ನು ತೆರೆದು ಕೊಡಹೋದನು. ಅದೇ ಮೇಲಕ್ಕೆ ಹತ್ತಿ ಬಂದ ಅವರ ಕಣ್ಣಿಗೆ ಅದು ಕಂಡು, ಸುರೇಶನ ಕೈಯಿಂದ ಆ ನೋಟನ್ನು ಇಸಕೊಂಡರು. " ಏ ತಮ್ಮಾ, ಏನೂ ತಿಳಿಯೂದಿಲ್ಲ ನಿನಗ. ಕೊಡಬ್ಯಾಡ, ಸುಮ್ನಿರು. ಒಮ್ಮೆ ಬುದ್ಧಿ ಬರಲಿ ಈ ಸೂಳೇಮಕ್ಕಳಿಗೆ " ಎಂದರು.

ಹಮಾಲನು ಗಟ್ಟಿಯಾಗಿ ಒದರಾಡತೊಡಗಿದನು. ಅವರು ಒಂದೇ ಮಾತಿನಿಂದ ' ಕೊಡೂದಿಲ್ಲ ' ಎಂದರು. ಅದಕ್ಕೆ ಅವನು ಕಿಟಕಿಯಲ್ಲೇ ಹಣಿಕಿ ಹಾಕಿ, ಸುರೇಶನ ಅಂಗಿ ಹಿಡಿದು ಜಗ್ಗಿದ. ಅವರು ಬಡಬಡನೆ ಸುರೇಶನನ್ನು ಆಚೆಗೆ ಸರಿಸಿ, ಹಮಾಲನಿಗೆ ' ಇಲ್ಲ ' ಎಂದರು.

" ಯಾಕ ಕೊಡೂದಿಲ್ಲ ? ನೀ ಯಾರು ಹೇಳ್ಳಿಕ್ಕೆ " ಎಂದು ಮರಾಠಿಯಲ್ಲೇ ಅವನು ಆಡಿದನು. ಒಂಟಿ ಹೆಸರಿನಲ್ಲಿ ಕರೆಯುತ್ತಲೂ ಇವರಿಗೆ ಸಿಟ್ಟು

ಬಂತೇನೊ. ಏನನ್ನೂ ಗಣಿಸದೆ ಅವನನ್ನು ಬಲವಾಗಿ ದೂಡಿದರು. ನಮಗೆ ಹುಲಿಯಾಗಿ ಪರಿಣಮಿಸಿದ್ದ ಹಮಾಲನು ಅವರ ಕೈಯಲ್ಲಿ ಇಲಿಯಾದನು. ಅವನು ಮತ್ತೆ ಏರಿ ಬಂದು ಗುಣಗುಟ್ಟತೊಡಗಿದನು. ಕಡೆಗೆ ಅವರು ಇತ್ತ ತಿರುಗಿ "ಎಷ್ಟು ನಿಮ್ಮ ಸಾಮಾನು" ಎಂದರು. ಸುರೇಶನು ಮೂರು ಸಾಮಾನನ್ನು ತೋರಿಸಿದನು. ಸುರೇಶನ ಕೈಯಿಂದಲೆ ಆರಾಣೆ ಇಸಿದು ಕೊಂಡು ಅವಗೆ ಕೊಡುತ್ತ "ಇನ್ನೇನರೆ ಗದ್ದಲಾ ಹಾಕಿದರ ಜೀವಾನೇ ಹೋದೀತು, ಹೋಗಿನ್ನ" ಎಂದು ಇನ್ನೊಮ್ಮೆ ದೂಡಿದರು.

ನನಗೆ ಇದೇ ಆಶ್ಚರ್ಯ. ಅಷ್ಟು ಜನ ಹೊರಗೆ ನಿಂತು 'ಜಾಗ ಜಾಗ' ಎಂದು ಮಿಡುಕಾಡುವಾಗ ಇವರು ತಮ್ಮ ಹೋಲ್ಡಾಲನ್ನು ಬಿಚ್ಚಿ ಪ್ರಶಸ್ತ ಜಾಗ ಹಿಡಿದಿದ್ದರು. ನಮಗೆ ಎಂದಾಗಲಿ ಅವರು ಹೋಲ್ಡಾಲನ್ನು ತೆಗೆಯು ಲಿಲ್ಲ. ಅದನ್ನೇ ತುಸು ಸರಿಸಿ ಇಬ್ಬರಿಗೂ ಕೂಡಹೇಳಿದರು.

ನಾನೊಮ್ಮೆ ಸಹಜವಾಗಿ ಅವರ ಮುಖ ನೋಡಿದೆ. ಅದೇ ವಿಕೃತ ರೂಪ. ನೋಡಲು ತುಂಬ ಜಿಗುಪ್ಸೆ ಬಂದುಬಿಟ್ಟಿತು. ಅಲ್ಲಿಂದ ಸಟ್ಟನೆ ದೃಷ್ಟಿಯನ್ನು ಹೊರಳಿಸಿದೆ.—ಆದರೆ, ಅವರು ಕೂಲಿಯವನಿಗೆ ಎರಡೇಟು ಬಿಗಿಯುತ್ತಿರುವುದೂ, ಆಗ ನಾನು ಎಷ್ಟೊಂದು ಆನಂದದಲ್ಲಿದ್ದುದೂ, ಹಾಗೂ ದೂಡಿಸಿಕೊಂಡ ಹಮಾಲನ ದೈನಾಸದ ಚಿತ್ರವೂ, ಕಣ್ಣಮುಂದೆ ಸುಳಿದು, ಮನಸ್ಸು ವ್ಯಥೆಗೊಂಡಿತು.

ಆದರೆ ಆಗ ನಮಗಾಗಿ ಇನ್ನೊಂದು ವಿಪತ್ತು ಕಾದಿತ್ತು.

ಪೋಲೀಸರು ಬಂದು ಟಪಾಲಿನ ಚೀಲಗಳನ್ನು ಹಾಕುವುದಿದೆಯೆಂದು ನಮ್ಮ ಡಬ್ಬಿಯಲ್ಲಿನ ಜನರಿಗೆ ಏಳಲಿಕ್ಕೆ ಹೇಳತೊಡಗಿದರು. 'ಇನ್ನು ಏಳಲೇ ಬೇಕಾಯಿತಲ್ಲ, ಮೊದಲೇ ತುಂಬಿ ಹೋಗಿದ್ದು, ಗಾಡಿ ಬಿಡುವ ಈ ವೇಳೆಯಲ್ಲಿ ಯಾವ ಡಬ್ಬಿ ಹತ್ತುವುದು, ಏನು ಗತಿ? ಎಂದುಕೊಂಡು ಅವರ ಕಡೆ ನೋಡಿದೆ. ಅವರು ಸಿಗರೇಟನ್ನು ಆರಿಸುತ್ತಿದ್ದವರು, ಕೂಡಲೇ ಮೇಲಕ್ಕೆದ್ದು ಅಲ್ಲಿಗೆ ನಡೆದರು.

"ನಮಗ ಮುಂಚಿತವಾಗಿ ತಿಳಿಸಿಲ್ಲ. ನಾವಿಲ್ಲೆ ಬಂದ ಕೂತೇವಿ, ಏಳೂದಿಲ್ಲ" ಎಂದು ಪೋಲೀಸರಿಗೆ ಹೇಳಿದರು.

“ ಏಳೂದಿಲ್ಲs ? ಚಂಡು ಹಿಡಿದು ಹೊರಗ ಹಾಕತೇವಿ ” ಎಂದನು ಅವರಲ್ಲೊಬ್ಬ.

ಅಲ್ಲಿದ್ದ ಮಂದಿಯೆಲ್ಲ ತುಂಬ ಯೋಚನೆಗೊಳಗಾಗಿದ್ದರು. ಪೋಲೀಸರ ಈ ಮಾತು ಕೇಳಿ, ಇನ್ನು ಏಳಲೇಬೇಕಾಗುವದಲ್ಲ ಎಂದು ಎಲ್ಲರೂ ಚಿಂತೆಗೊಳಗಾದರು.

“ ಏ, ಸ್ವಲ್ಪ ನೋಡಿ ಮಾತಾಡ್ರಿ. ನಿಮಕಿಂತಾ ಹೆಚ್ಚು ಕಾಯದೆ ಗೊತ್ತದ. ಇದು ಟಪಾಲ ಡಬ್ಬಿ ಆಗಿದ್ರ, ‘ ಹಿಂಗs ’ ಅಂತ ಮ್ಯಾಲೆ ಬರೀಬೇಕಾಗಿತ್ತು ? ಅಂಥದು ಜಬರ ಮಾಡಕೀರಿ. ಹೆಂಗ ಚಂಡ ಹಿಡಿದು ದಬ್ಬಕೀರ್‍ಯೋ ನೋಡತೇಸಿ ? ” ಎಂದರು.

ಪೋಲೀಸರು ಇವರ ಮಾತನ್ನು ಲಕ್ಷ್ಯಗೊಟ್ಟು ಕೇಳಿದ್ದರೂ, “ ಹಾಂ ಇಳೀರಿ ಬೇಗ ” ಎಂದು ಅವಸರಪಡಿಸತೊಡಗಿದರು. ಮಂದಿ ಇಳಿಯುಲಿಲ್ಲ. ಇಳಿದು ಮುಂದೆಲ್ಲಿಗೆ ಹೋಗುವುದು ಎಂದು ತಿಳಿಯದೆ ಅಲ್ಲೇ ನಿಂತರು. ಇವರು ಇನ್ನೂ ಹಟದಿಂದ ಗರ್ಜಿಸಿದರು. “ ನಾವು ಯಾರೂ ಇಳಿಯೂದಿಲ್ಲಾ. ನಿಮಗ ಇಳಸಲಿಕ್ಕೆ ಏನೂ ಅಧಿಕಾರ ಇಲ್ಲ. ಲೇಬೀ ಏನರೆ ತಂದಿದ್ರ ತೋರಸರಿಬೇಕಾದರ. ಇಷ್ಟೂ ಮೀರಿ ಡಬ್ಬಿ ಒಳಗ ಹತ್ತಿ ಹೊರಗ ಹಾಕಲಿಕ್ಕೆ ಬಂದ್ರ ನಾವs ನಿಮ್ಮನ್ನ ಹೊರದೂಡತೇವಿ ” ಎಂದರು.

ಉಳಿದವರಿಗೆ ಕ್ರಮವಾಗಿ ಧೈರ್ಯ ಬರತೊಡಗಿತು. ಅವರಲ್ಲೊಬ್ಬ ‘ ಯಾರೂ ಇಳೀಬ್ಯಾಡ್ರಿ ’ ಎಂದು ಗಟ್ಟಿಯಾಗಿ ಹೇಳಿದನು. ಎಲ್ಲರಿಗೂ ಅವರ ವಿಷಯದಲ್ಲಿ ತುಂಬ ಆದರ ಹುಟ್ಟಿತು.

ಈಗ ಗಾರ್ಡನು ಧಾವಿಸಿದನು. ಅವರು ಇದಕ್ಕೆ ಸಿದ್ಧರಾಗಿಯೆ ಇದ್ದರು. ಗಾರ್ಡನು ಹೇಳಿದ : “ ನೀವು ಇಳೀಲಿಕ್ಕೇಬೇಕು. ಕಾಣೂದಿಲ್ಲಾ ಟಪಾಲ ಚೀಲಾ ” ಎಂದು ನಮ್ಮ ಡಬ್ಬಿಯ ಎದುರು ಒಟ್ಟಿದ್ದ ರಾಸಿಯನ್ನು ತೋರಿಸಿದನು.

“ಅದನ್ನ ತೊಗೊಂಡು ನಾಯೇನು ಮಾಡಲಿ? ನಾವು ಇಳಿಯೂದಿಲ್ಲಾ.”

“ ಸುಮ್ನೆ ನೀವು ತಂಟೆ ಮಾಡಬ್ಯಾಡ್ರಿ. ಇದು ಪೋಸ್ಟಲ ಡಬ್ಬಿ ಅದ.”

“ ಮುಖ್ಯ ಡಬ್ಬಿಗೆ ಹೊಂದಿ ಇದ್ದಾಕ್ಷಣಕ್ಕ ಪೋಸ್ಟಲ್ಲದ್ದೇ ಆಗ್ತsದೇನು ? ಹಂಗ ನಿಮಗ ಹೆಚ್ಚಿಗೆ ಬೇಕಾಗಿದ್ರ ಮ್ಯಾಲೆ ಬರೀಬೇಕಾಗಿತ್ತು. ”

" ಈಗ ವಾದಿಸಲಿಕ್ಕೆ ವ್ಯಾಳ್ಯಾ ಇಲ್ಲ. ನೀವು ಇಳೀದಿದ್ರ ಬಿಡ್ರಿ, ನೋಡತೇವಿ. ಉಳಿದವರ ಸಂಬಂಧಿ ಹೇಳ್ಳಿಕ್ಕೆ ನೀವ್ಯಾರು ? "

ಅವರು ಈ ಮಾತಿಗೆ ಗಡುಸಾಗಿಯೆ ಉತ್ತರಕೊಟ್ಟರು. " ನನ್ನ ಸಂಬಂಧಿ ಅಷ್ಟೆ ನಾಹೇಳಿದೆ. ಉಳಿದವರು ಇಳೀತಿದ್ರ ಇಳಸ್ರಿ "

" ಅವರು ನಮ್ಮ ಲೀಡರ. ಅವರೇನು ಹೇಳತಾರ ಅದೆಲ್ಲಾ ನಮ್ಮ ಪರವಾಗಿನ್ನು " ಎಂದು ಅಲ್ಲಿದ್ದವರು ಗಾರ್ಡನಿಗೆ ಹೇಳಿದರು.

ಯಾರಿಗೂ ಎದುರು ನಿಂತು ನ್ಯಾಯವಾದುದನ್ನು ಸಮರ್ಥಿಸುವ ಬಲವಿಲ್ಲ. ಅವರೊಬ್ಬರೆ ನಿಜವಾದ ಗಂಡಸರು ಎಂದುಕೊಂಡೆ. ಅವರ ವಿಷಯವಾಗಿ ನನ್ನಲ್ಲಿ ಹೆಮ್ಮೆ ಮೂಡಿತು. ಆದರೆ ಗಾರ್ಡನೂ ಹಟತೊಟ್ಟದ್ದನ್ನು ಕಂಡು ಮುಂದೇನಾಗವದೊ ಎಂಬ ಅಂಜಿಕೆಯೂ ಉಂಟಾಯಿತು. ಇಂಗ್ಲೀಶಿನಲ್ಲಿ ಅವರಿಬ್ಬರವಾದ ನಡೆದೇ ಇತ್ತು. ಗಾಡಿಯಲ್ಲಿದ್ದವನೊಬ್ಬನು "ಯಾರೂ ಇಳೀಬ್ಯಾಡ್ರಿ, ಆ ಮಕ್ಕಳಿಗೆ ಏನು ಮಾಡಲಿಕ್ಕೂ ಅಧಿಕಾರ ಇಲ್ಲಾ. ಇವರೆಲ್ಲಾ ನೋಡಿಕೋತಾರ " ಎಂದನು.

ಗಾರ್ಡನು ಅನ್ನುತ್ತಿದ್ದ " ಇದು ನೋಡ್ರಿ, ಪೋಸ್ಟಲ ಅಂದ್ರೂ ಅದು ಸರಕಾರೀ ಕೆಲಸ, ಇವನ್ನ ಸಾಗಿಸೋದು ನನ್ನ ಕರ್ತವ್ಯ ಅದ. ಪ್ರತಿ ದಿನಾನೂ ಹೆಚ್ಚು ಟಪಾಲಬೀಲ ಒಂದ್ರ, ಈ ಡಬ್ಯಾಗ ನಾವು ಹಾಕೇ ಹಾಕತೀವಿ ಈಗ ನೀವು ಇಳೀಲಿಕ್ಕೆ ಬೇಕು."

" ಮತ್ತೊಂದು ಡಬ್ಬಿ ಹಚ್ಚಿ ಅದರಲ್ಲಿ ಹಾಕರಿ. ಇಲ್ಲಾದರ ಬ್ರೇಕಿನೊಳಗ ತುಂಬಿರಿ. ಅಲ್ಲ, ಇದು ಪೋಸ್ಟಲ್ಲದ್ದೇ ಅಂತ ಗೊತ್ತಿದ್ರ ನಾವು ಬರತಿದ್ದಿವಿ ಯಾಕ ಹೇಳ್ರಿ, ಇಳಿಯೋದು ನಮ್ಮ ಕಡಿಂದ ಸಾಧ್ಯ ಇಲ್ಲ. ಮಂದಿ ಇಳಿದ್ರೂ ನಾ ಇಳಿಯೂದಿಲ್ಲ. ಜಾಗಾ ಸಿಗೂದಿಲ್ಲ ಅಂತ ತಿಳದು ಎರಡು ತಾಸು ಮೊದಲಿಗೇ ಬಂದೇನಿ. "

" ನಿಮ್ಮ ಆರಾಮು ನೋಡಿಕೋಳಿಕ್ಕೆ ಇದೇನು ನಿಮ್ಮ ಮನಿ ಅಲ್ಲಾ. ಬ್ಯಾರೆ ಬೋಗಿ ಹಚ್ಚೋದ ಸಾಧ್ಯ ಇದ್ರ, ಗಾಡಿ ಒಳಗ ಇಷ್ಟು ರಶ್ ಆಗತಿರಲೇ ಇಲ್ಲ. ನೀವು ಇಳೀಲಿಲ್ಲಾ ಅಂತಂದ್ರ ಹೆಚ್ಚು ಪೋಲೀಸರನ್ನ ಕರಸಿ ನನ್ನ ಡ್ಯೂಟಿ ನಾ ಮಾಡಬೇಕಾಗತ್ತದ. "

ಅದೇ ಕೆಚ್ಚಿನಿಂದ ಅವರು ಉತ್ತರವಿತ್ತರು. " ಇಷ್ಟು ನಿಮ್ಮ ಕಡಿಂದ

ಸಾಧ್ಯ ಇದ್ರ ಮಾಡ್ರಿ ನೋಡತೇನಿ.... ಇಲ್ನೋಡ್ರಿ, ನಮ್ಮದೂ ಸ್ವಲ್ಪ ಮಾತು ಕೇಳ್ರಿ. ಇಳೀಬಾರ್ದು ಅಂತ ನಮ್ಮದೇನು ಹಟಾ ಇಲ್ಲಾ, ಈಗ ಗಾಡಿ ಎಲ್ಲಾ ತುಂಬಿಹೋಗಿ, ನಿಂತೇನಂದ್ರ ಜಾಗ ಇಲ್ಲಾ. ಅಲ್ಲದ ಈಗ ಒಬ್ಬೊಬ್ಬರು ಮೂರು ನಾಲ್ಕು ರುಪಾಯಿ ಹಮಾಲರಿಗೆ ಕೊಟ್ಟು ಸಾಮಾನು ಹಾಕಿಸಿಕೊಂಡಾರ, ಈಗ ಒಂದೊಂದು ಸಾಮಾನಿಗೆ ಒಂದೊಂದು ರೂಪಾಯಿ ಕೇಳದ್ಹ ಬಿಟ್ಟಾರ? ನೀವೇನರ ಪುಕಟ ಹಾಕಿಸಿಕೊಡತೀರ? ಇಲ್ಲಿ ಐವತ್ತು ಮಂದೀದು ಒಟ್ಟೆನ್ಯಾಗ ಹಿಡದರ ಎಷ್ಟು ಲುಕ್ಸಾನ ಮಾಡತೀರಿ ಗೊತ್ತದನ?"

"ನನ್ನ ಮನೀ ಜನರ ಸಲುವಾಗಿ ಇಳೀ ಅಂದಿಲ್ಲಾ ಬೇಕಾದರ ಇನ್ನ ಮೂರು-ನಾಕ ತಾಸಿಗೇನs ಇನ್ನೊಂದ ಗಾಡೀ ಬಿಡತ್ತsಅ, ಆಗ ಬರ್ರಿ. ನಾವೇನು ಮಾಡಬೇಕು?"

"ಮತ್ತೂ ಅದ್ಹ ಮಾತು ಆಡತೀರಲ್ರಿ? ನಿಮಗ ಡಬ್ಬಿ ಬೇಕಾಗಿದ್ರ ಮ್ಯಾಲೆ ಬರೀಬೇಕಾಗಿತ್ತು. ಬರದಿಲ್ಲ. ಈಗ ಜಬರಮಾಡೋದು, ಪೂರ್ಣ ಗೈರಕಾಯದೇಶೀರ ಅದ. ಏನು ಮಾಡಿದರೂ ನಿಮಗ ಇಳಸೊ ಅಧಿಕಾರಿಲ್ಲ ಅಂಬೋದನ್ನ ಮರಿಬ್ಯಾಡ್ರಿ. ನಮಗ ಇನ್ನೊಂದು ಬೋಗಿ ಹಚ್ಚಿಕೊಟ್ರ ಮಾತ್ರ ನಾವು ಇಳಿಯೋದು ಸಾಧ್ಯ."

ಗಾರ್ಡನು ಈಗ ನಿರುತ್ತರನಾದನು. ಮತ್ತು ಅವನಂತೆ, ಅಲ್ಲಿದ್ದ ಪ್ರತಿಯೊಬ್ಬರೂ ಅವರ ಮಾತಿಗೆ ಬೆರಗಾದರು. ನಮಗೆ ನೆರವಾಗುವವರಿದ್ದಾರೆ ಎಂದು ಎಲ್ಲರಿಗೂ ಧೈರ್ಯಬಂತು. ಕೆಲವರಂತೂ ಗಟ್ಟಿಯಾಗಿಯೆ ಅವರನ್ನು ಹೊಗಳಿದರು.

ನನಗೆ ಮಾತ್ರ ಈ ಮೆಚ್ಚಿಕೆಯ ಜೊತೆಗೆ ತುಂಬ ಹೆದರಿಕೆ ಆಯಿತು. ಏನು ಆದರೂ ಇವರು ಹಿಡಿದಹಟ ಬಿಡುವವರಲ್ಲ. ಪೋಲಿಸರಿಂದ ಅಪಾಯ ವೇನಾದರೂ ಆದರೆ ಎಂಬುದೆ ನನ್ನ ಚಿಂತೆಗೆ ಕಾರಣವಾಗಿತ್ತು. ಬೇಡ ಎಂದು ಹೇಳಲೇ ಎನ್ನಿಸಿತು.

ಎಲ್ಲಿಯೊ ಹೋಗಿದ್ದ ಗಾರ್ಡನು ಮರಳಿ ಬಂದನು. "ಇಕಾ, ನಿಮ್ಮ ಸಲುವಾಗಿ ಮಿಲಿಟರಿಯವರಿಗೆ ಹೇಳಿ, ತಮ್ಮ ಡಬ್ಯಾಗ ಅರ್ಧಜಾಗಾ ಕೊಡಲಿಕ್ಕೆ ಹೇಳೇನಿ" ಎಂದನು.

ಜನರಿಗೆ ಸಂಶಯ, ನಿಲ್ಲಲಿಕ್ಕಾದರೂ ಜಾಗ ಆಗುವದೊ ಇಲ್ಲವೊ

ಎಂದು ಬಾಯಿಂದ ಕೆಲವರು ಅದನ್ನು ವ್ಯಕ್ತಪಡಿಸಿದರು. ಅವರಲ್ಲಿಯೇ ಒಬ್ಬಿಬ್ಬರು, “ ಸುಮ್ಮನಿರ್ರಿ, ನಮ್ಮ ಲೀಡರ ಎಲ್ಲಾ ವ್ಯವಸ್ಥಾ ಮಾಡೇ ಮಾಡತಾರ ” ಎಂದರು.

ಗಾರ್ಡನ ಮಾತಿಗೆ ಅವರು ಪೂರ್ಣ ಒಪ್ಪಿಯಾರೆ ? “ ಆ ಡಬ್ಬಿಯೊಳಗ ನಮ್ಮೆಲ್ಲರಿಗೂ ಜಾಗಾ ಆದ್ರ ಮಾತ್ರ ಇಳಿಯುವವರು. ನಮ್ಮ ಪೈಕಿ ಒಬ್ಬರು ಅಲ್ಲಿಹೋಗಿ ನೋಡಿಕೊಂಡು ಬರತಾರ. ಮತ್ತ ನಾ ನಿಮಗ ಆಗ ಳೇನs ಹೇಳೇನಿ. ನಿಮ್ಮ ಸಲುವಾಗಿ ಹಮಾಲಿ ಕೊಡಲಿಕ್ಕೆ ಯಾರೂ ತಯಾರಿಲ್ಲ. ಅದಕ್ಕೆ ನಿಮ್ಮ ಎಂಟು ಹತ್ತು ಪೋರ್ಟರರು ನಮಗ ಬೇಕು. ನೀವು ಈಗ ಹೇಳಿಕಳಿಸಿರಿ. ”

ಎಂತಹ ಧಿಟ್ಟತನ ! ಮನಸ್ಸಿನಲ್ಲಿ ಮೂಡಿದ ಪ್ರತಿಯೊಂದು ಮಾತನ್ನೂ ನಡೆಯಿಸಿಯೇ ತೀರಬಲ್ಲ ಅವರ ಸಾಮರ್ಥ್ಯವನ್ನು ನೆನೆದು, ನನ್ನ ಹೃದಯ ಆರ್ದ್ರವಾಯಿತು.

ಗಾರ್ಡನು ಸಿಟ್ಟುಬೆಂಕಿಯಾಗಿದ್ದ. “ ಮಿಸ್ಟರ, ನೀವು ಬಹಳ ಅಡ್ಡ ಮಾತಾಡಲಿಕ್ಕೆ ಹತ್ತೀರಿ. ನಾ ಅಂದ್ರ ನಿಮ್ಮ ಆಳಲ್ಲ. ಮಿಲಿಟರಿ ಆಫೀಸರಗ ಕೇಳಿಕೊಂಡು, ಇಷ್ಟು ಜಾಗಾಮಾಡಿ ಕೊಟ್ರೊ, ನಮಗ ಅದು ಬೇಕು, ಇದು ಬೇಕು ಅಂತೀರಿ. ಪೋಲಿಸರನ್ನ ಕರಸೋದೇ ಒಂದು ದಾರಿ. ಅಂದ್ರೇ ಬಗ್ಗತೀರಿ. ”

“ ಇಕಾ ಮತ್ತ ಅಡ್ಡದಾರಿಗೆ ಹೊಂಟ್ರ್ಯಾ ನೀವೇನು ಜನತೆಯ ಆಳಾಗದ ಅರಸಂತ ತಿಳಿದೀರೇನು ? ಒಟ್ಟಿಗೆ ಒಂದನೂರು ರುಪಾಯಿ ನಮ್ಮದು ಲುಕ್ಸಾನ ಮಾಡತೀರಿ. ನಿಮ್ಮ ಸಲುವಾಗಿ ನಾವೇನು ಹಮಾಲಿ ಕೊಡುವವರಲ್ಲ....ಪೋಲೀಸರನ್ನ ಕರಸ್ತೀರ ? ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟನ ಆರ್ಡರ ಇಲ್ಲದ ನಮ್ಮ ಮೈಗೆ ಕೈಹಚ್ಚಲಿ ನೋಡತೇನಿ, ನಾವು ಅರವತ್ತು ಮಂದಿ ಇದ್ದೀವಿ. ಇಲ್ನೋಡ್ರಿ, ಪೋಲೀಸರಿಗೆ ಹೆದರಿ ಉಳಿದವರೆಲ್ಲ ಇಳಿದರೂ ನನ್ನ ಜೀವ ಇರೋತನಕಾ ನಾಯೇನು ಈ ಡಬ್ಬಿ ಬಿಟ್ಟು ಇಳಿಯುವವನಲ್ಲ ” ಎಂದು ಇಂಗ್ಲೀಷಿನಲ್ಲಿ ಗಟ್ಟಿಸ್ವರದಲ್ಲಿ ನುಡಿದರು.

ಯಾರೊಬ್ಬರೂ ಅವರಷ್ಟು ಎದೆಗಾರರು ಅಲ್ಲಿ ಇರಲಿಲ್ಲ. ಗಾರ್ಡನು ದಂಗಾಗಿ ಹೋದನು.

ಗಾಡಿಯಲ್ಲಿನ ಒಬ್ಬರು ಆ ಡಬ್ಬಿಯಲ್ಲಿ ಸಾಕಷ್ಟು ಜಾಗ ಅದೆಯೋ ಇಲ್ಲವೊ ನೋಡಹೋದರು. ಅವರು ಸುರೇಶನನ್ನೂ ಥಟ್ಟನೆ ಇಳಿಸಿದರು. ಇನ್ನೊಬ್ಬರು ಜಾಗ ಇದೆ ಎಂಬ ಸುದ್ದಿ ತಂದರು. ಸುರೇಶ ಬಂದ "ಬಹಳ ಅಡಚಣಿ ಮಾತ್ರ ಆಗ್ತದೆ" ಎಂದು ಹೇಳಿದನು. ಅವರ ಮಾತಿನಿಂದ ಮೂಡಿದ ಧೈರ್ಯ ಅವನಿಗೆ ಹಾಗೆ ಹೇಳಹಚ್ಚಿತು. ಇನ್ನೊಬ್ಬನಂತೆ ಹಿಂಜರಿಯಲಿಲ್ಲ

ಅವರು ಅಂದರು: "ಇನ್ನ ಇದಕ್ಕೂ ಹೆಚ್ಚು ಹಟಾ ಬೇಡ. ಹೇಗಾದರೂ ಸುಧಾರಿಸಿಕೊಂಡು ಹೋಗೋಣ. ಈಗs ಗಾಡಿ ಮುಕ್ಕಾಲು ತಾಸು ತಡಾ ಆಗೇದ, ನಾವು ಒಲ್ಲೆ ಅಂದ್ರ, ಅಂವಾ ಮಾಡಬೇಕರೆ ಏನು?"

ಗಾರ್ಡನು ಪೋರ್ಟರರನ್ನು ಕರೆಕಳುಹಿದ್ದ. ಆದರೆ ನಾಲ್ಕೇ ಜನ ಬಂದರು. ಅವರು ಕೆಳಗೇ ನಿಂತಿದ್ದ ಸುರೇಶನ ಕೈಯಲ್ಲಿ ತಮ್ಮೆರಡು ಸಣ್ಣ ಸಾಮಾನು ಕೊಟ್ಟು, ಕಳಿಸಿ, ಜಾಗ ಹಿಡಿಯಲು ಓಡಿಸಿದರು. ಇಷ್ಟು ಸಣ್ಣ ವಿಷಯದಲ್ಲೂ ಜಾಗರೂಕತೆ!

ಅವರು ತಮ್ಮ ಸಾಮಾನಿನ ಕಡೆ ನೋಡಿದರು. ನನ್ನ ಕಡೆಯೂ ಒಮ್ಮೆ ನೋಡಿ ಸಿಗರೇಟನ್ನು ಹೊತ್ತಿಸಿದರು. ಅವರ ಹೋಲ್ಡಾಲು ಇನ್ನೂ ಹಾಗೆಯೇ ಇತ್ತು. ಅದನ್ನು ನಾ ಸುತ್ತಿ ಇಡಲೇ ಎಂಬ ವಿಚಾರ ಬಂತು. ಅದೇಕ್ಷಣ ಅಭಿಮಾನ-ಸಂಕೋಚ ಎರಡೂ ನನ್ನನ್ನು ತಡೆದುವು. ನಮಗಾಗಿ ಇಷ್ಟೊಂದು ಮಾಡಿದ್ದಾರೆ, ಏನು ದೊಡ್ಡ ತಪ್ಪು — ಎಂದು ಅದನ್ನು ಸುತ್ತಲು ಕೈ ಮುಂದುವರಿದವು, ಮತ್ತೆ ಬೇಡವೆನಿಸಿತು. ಅವರು ಸಿಗರೇಟನ್ನು ಹಿಡಿದುಕೊಂಡು ತಾವೇ ಸುತ್ತತೊಡಗಿದರು. ಆದರೆ ಸಿಗರೇಟು ತೊಂದರೆ ಕೊಟ್ಟಿತು. ಅದನ್ನೊಮ್ಮೆ ಹೊರಗೆ ಬೀಸಿದರು. ಈ ಪಟ್ಟು ನಿಜವಾಗಿಯೇ ಮುಂದುವರಿದೆ. 'ಬೇಡ' ಎಂದಿಷ್ಟೆ ನನ್ನನ್ನು ತಡೆದರು. ಅಷ್ಟು ಸಣ್ಣ ಮಾತನ್ನು ಒಳ್ಳೆಯದಕ್ಕಾಗಿಯಾದರೂ, ಅವರ ಮಾತನ್ನು ವಿರೋಧಿಸಲಿಕ್ಕಾಗಲಿಲ್ಲ.

ಸುರೇಶನು ಅವರ ಕಡೆಯಿಂದ ತುಸು ಬೈಸಿಕೊಳ್ಳಬೇಕಾಯಿತು. ಅವನು ಹಿಡಿದಿದ್ದ ಜಾಗವನ್ನು ಉಳಿದವರು ಅರ್ಧ ಆಕ್ರಮಿಸಿದ್ದರು. ಆದರೂ ಅವರು ಕೇಳಿದಮೇಲೆ ಇಲ್ಲೆಂದಾರೆಯೆ? ನಮ್ಮಿಬ್ಬರಿಗೂ ಜಾಗವಾಯಿತು.

ಮತ್ತೊಂದು ಸಿಗರೇಟನ್ನು ಹೊತ್ತಿಸಿ, ಹೊಗೆ ಬಿಡುತ್ತ ನನ್ನೆದುರು ಕುಳಿತ ಅವರನ್ನು ನೋಡಿದೆ. ಮನಸ್ಸಾಗದೆ ಸಟ್ಟನೆ ಮುಖತಿರುಗಿಸುವ ಮನಸಾಯಿತು. ಆದರೆ ಮರುಕ್ಷಣವೇ ಹಿಂದಿನ ಸಂಗತಿಗಳೂ, ಅವರ ಪ್ರತಿಯೊಂದು ಮಾತೂ ನನ್ನ ಕಿವಿಯಲ್ಲಿ ದನಿಗೈಯುತ್ತಿದ್ದವು. ಅವರ ರೂಪಕ್ಕೂ ವ್ಯಕ್ತಿತ್ವಕ್ಕೂ ಅದೆಂತಹ ದೊಡ್ಡ ಕೊರಕಲಿದೆಯಲ್ಲ— ಎಂಬುದು ತಾಗಿ ಏಕೊ ಕಳವಳಗೊಂಡೆ.

ಅಂತಹ ಗದ್ದಲದಲ್ಲಿ ಇನ್ನೂ ಮಂದಿ ಹತ್ತಲು ಹವಣಿಸುತ್ತಿತ್ತು. ನನ್ನ ಈಚೆಯ ಬದಿಗೆ ಒಬ್ಬ ಹಳ್ಳಿಯುವ. ಈ ಬದಿಗೆ ನಿದ್ದೆಹೋದ ಒಬ್ಬ ಸಣ್ಣ ಹುಡಗಿ ಇದು ಅಲ್ಲದೆ ಅವರ ಸಿಗರೇಟಿನ ಹೊಗೆ, ಉಸಿರುಗಟ್ಟುವಷ್ಟು ತ್ರಾಸವಾಯಿತು. ಆದರೂ ಅಂಥದರಲ್ಲೇ ಸಮಾಧಾನ—ಊರನ್ನಾದರೂ ಸುರಕ್ಷಿತ ಸೇರುತ್ತೇವಲ್ಲ! ಅದಕ್ಕೆ ಬಹುಮಟ್ಟಿಗೆ ಕಾರಣರಾದವರನ್ನು ಸಾದ ರದಿಂದ ಮತ್ತೊಮ್ಮೆ ನೋಡಲೆಂದೆ, ಆದರೆ ಜಿಗುಪ್ಸೆಯಿಂದ ಮುಖ ತಿರುಗಿಸಿದೆ.

ಗಾಡಿಯು ಅದೇ ಪ್ಲ್ಯಾಟಫಾರ್ಮಬಿಟ್ಟು ಮೆಲ್ಲಗೆ ತೂರಿಕೊಂಡು ನಡೆದಿದ್ದಿತು.

ಆ ಹುಡುಗಿ ನನ್ನ ಮೈಮೇಲೆ ಮೇಲಿಂದಮೇಲೆ ಬೀಳುತ್ತಿತ್ತು. ನನ್ನ ತೊಂದರೆ ಅವರಿಗೆ ಕಂಡಿತು. ಎದ್ದು ಆ ಹುಡುಗಿಯನ್ನು ಎತ್ತಿ ತಮ್ಮ ಬದಿ ಯಲ್ಲಿ ಕೂಡ್ರಿಸಿಕೊಂಡರು. ಸುರೇಶನು ನನ್ನ ಹತ್ತಿರ ಬಂದನು.

ಅದರೊಂದಿಗೆ ಸುರೇಶನು ಇದುವರೆಗಿನ ಘಟನೆಗಳನ್ನು ತನ್ನ ರೀತಿಯಲ್ಲಿ ವಿಮರ್ಶಿಸುತ್ತಿದ್ದನು. ಚಿಕ್ಕಮಗುವಿನ ಮಾತಿಗೆ ತಂದೆ ಕಿವಿಗೊಡುವ ಭಾವದಲ್ಲಿ ಅವರು ಸುಮ್ಮನೆ ಕೇಳುತ್ತಿದ್ದರು. ನಡುನಡುವೆ ಅವನು ಬಾಯಿದುಂಬಿ ಅವರ ಎದೆಗಾರಿಕೆಯನ್ನು ಹೊಗಳುತ್ತಿದ್ದನು. ಆಗೆಲ್ಲ ಅವರು ಮೆಲ್ಲನೆ ' ಹೂಂ ' ಎಂದು ನಗುತ್ತಿದ್ದರು.

ಇದು ಹೆಚ್ಚುಚ್ಚಾಗುವಂತೆ ಕಂಡಿತೊ ಏನೊ, ಅವನನ್ನು ಯಾರ ಮನೆಯವರು ? ಎಂಬುದನ್ನು ಕೇಳಿಕೊಂಡರು.

ನಾನು ಕಣ್ಣು ಮುಚ್ಚಿ ಅವರಿಬ್ಬರ ಮಾತನ್ನು ಆಲಿಸುತ್ತಿದ್ದೆ. ನನಗೆ ನಿದ್ದೆಹತ್ತಿತೆಂದು ಇಬ್ಬರೂ ತಿಳಿದಿದ್ದರೇನೊ, ಎಷ್ಟು ನಿದ್ರೆ ಬಂದಿರಲಿಲ್ಲ.

ಒಂದುಕಡೆ ಕಿವಿ ಕೇಳುತ್ತಿತ್ತು. ಇನ್ನೊಂದುಕಡೆ ವಿಚಾರಗಳ ತಾಕಲಾಟ ನಡೆದಿತ್ತು.

ಸುರೇಶನು ಕೇಳಿದನು "ನೀವು ಯಾವೂರಿಗೆ ಹೋಗ್ತೀರಿ?"

"ಹುಬ್ಬಳ್ಳಿ"

"ಹಿಂಗ? ಹಂಗರ ಧಾರವಾಡತನಕಾನೂ ನಮ್ಮ ಜತಿ ಅದ್ರಿ. ನೀವು ಮಿಲಟರಿ ಸರ್ವ್ಹೀಸಿನಲ್ಲಿ ಇದ್ದೀರೇನು?"

"ಇಲ್ಲಪಾ. ಇದು ಟ್ರ್ಯಾವಲಿಂಗ ಡೆಸ್ಸು. ಯಾಕ, ಇದರಿಂದಾ ಬಹಳ ಕೆಲಸ ಸಾದಸ್ತದಲ್ಲ?" ಎಂದು ಮುಗುಳ್ನಕ್ಕರು.

"ಪುಣೆಯಿಂದ್ಲೇ ಹತ್ತಿದಿರೇನು?"

"ಇಲ್ಲ. ಮುಂಬೈಯಿಂದ ಇಲ್ಲಿಗೆ ಮಧ್ಯಾನಕ್ಕೇ ಬಂದಿದ್ದೆ. ಈಗ ಹತ್ತಿದ್ದು ಇಲ್ಲಿಂದನ್ನೇ."

"ಮುಂಬೈಯೊಳಗ ನೌಕರೀಮಾಡ್ತಿರಿ ಕಾಣಸ್ತದ" ಎಂದನು ಸುರೇಶ. ನನಗೂ ಈ ಮುಂತಾದ್ದನ್ನೆಲ್ಲ ತಿಳಿಯಲು ಆತುರವಾಗಿತ್ತು.

"ನೌಕರೀನ್ನೇ ನನಗ ಕಾಯಂ ನೌಕರೀನೇ ಇಲ್ಲ. ಹಿಂಗೇ ಓಡಾಡತೀನಿ ನೋಡು. ಮುಂಬೈಯಿಂದ ಧಾರವಾಡ, ತಪ್ಪಿದರೆ ಹುಬ್ಬಳ್ಳಿ"

"ಬಿ. ಎ. ಆಗೇದ ಕಾಣಸ್ತದ"

ಅವರ ಬಾಯಿಂದ ಬೇಗ ಉತ್ತರ ಬರಲಿಲ್ಲ. ಅವರು ಸುಮ್ಮನಿರುವುದು ತಿಳಿದು ಎದುರಿಗೇ ಕುಳಿತಿದ್ದ ನನ್ನನ್ನು ತುಂಬುಗಣ್ಣಿನಿಂದ ನೋಡುತ್ತಿರ ಬಹುದೆ ಎಂಬ ಸಂಶಯ ಬಂದಿತು. ಫಕ್ಕನೆ ಕಣ್ಣು ತೆರೆದೆ....ಛೆ, ಇಲ್ಲ. ಅವರು ಸಿಗರೇಟನ್ನು ಹೊತ್ತಿಸುತ್ತಿದ್ದರು. ಮತ್ತೆ ಕಣ್ಣು ಮುಚ್ಚಿದೆ.

"ಬಿ. ಎ. ಯಾಕೊ ಮಹಾರಾಯ. ಎಂ. ಎ. ನೂ ಆಗೇದ. ಇದ್ದ ಡಿಗ್ರಿ ಕಳಕೊ ಅಂತೀಯೇನು?"

ಇವರ ಮದುವೆಯಾಗಿರಬಹುದೆ ಎಂಬ ಸಣ್ಣ ಸಂಶಯ ಸುಳಿಯಿತು. ಮದುವೆಯಾಗಿದ್ದರೆ ಕೈಹಿಡಿದವಳು ಹೀಗೆ ಇವರನ್ನು ಅಂಡಲೆಯ ಬಿಡುತ್ತಿರ ಲಿಲ್ಲವೆನಿಸಿತು. ಹಾಗೂ ನೌಕರಿಯ ಗಾಳಕ್ಕಿಂತ ಸ್ವತಂತ್ರ ವಾತಾವರಣಕ್ಕೇ ಹೆಚ್ಚು ಒಲಿದವರು, ಅದಕ್ಕೇ ನೌಕರಿ ಇಲ್ಲ ಎಂದು ಊಹಿಸಿದೆ.

ನಾನು ಓದಿದ ತುರಮುರಿ ಶಾಕುಂತಲದ ಮೊದಲಂಕಿನಲ್ಲಿ ದುಷ್ಯಂತನು ಮರೆಯಲ್ಲಿ ನಿಂತು ಶಕುಂತಲೆಯ ಬಗ್ಗೆ ಕ್ರಮವಾಗಿ ತಿಳಿದುಕೊಳ್ಳುತ್ತಿರುವ ಸ್ಥಿತಿಯಲ್ಲಿ ನಾನೀಗ ಇದ್ದೇನಲ್ಲ ಎಂಬ ವಿಚಾರ ಸುಳಿದು ಲಜ್ಜೆ ಮೂಡಿತು.

ಸುರೇಶನು ಆಕಳಿಸುತ್ತ "ನನಗ ನಿದ್ದಿ ಬಂತು" ಎಂದನು. "ಹೂಂ, ಹಿಂಗ?" ಎಂದು ಇನ್ನೊಮ್ಮೆ ನಗೆಯಲ್ಲಿ ತೇಲಿಸಿ ಹೇಳಿದರು. ಮುಂದೆ ಗಡಬಡ ಸಪ್ಪಳವಾಯಿತು ಮೆಲ್ಲನೆ ಕಣ್ಣು ತೆರೆದೆ; ಒಂದು ಟ್ರಂಕನ್ನು ನಡುವೆ ಇಡುತ್ತಿದ್ದರು. ನಾ ಮತ್ತೆ ಕಣ್ಣು ಮುಚ್ಚಿದೆ.

ಕೆಲವೇಳೆ ಕಳೆಯಿತು. ಸುರೇಶನ ಸೊಲ್ಲೇ ಇಲ್ಲ. ಮತ್ತೆ ಕಣ್ಣು ತೆರೆದೆ. ಸುರೇಶನು ಆ ಟ್ರಂಕಿನ ಮೇಲೆ ಕುಳಿತಿದ್ದಾನೆ ಬಾಗಿ ಅವರ ತೊಡೆಯ ಮೇಲೆ ನಿಶ್ಚಿಂತೆಯಿಂದ ನಿದ್ರೆ ಹೋಗಿದ್ದಾನೆ! ಅವರು ಕೈಯಲ್ಲಿ ಹಿಡಿದಿದ್ದ ಪತ್ರಿಕೆಯನ್ನು ಓದುತ್ತಿದ್ದಾರೆ.

ಅವರಿಗೆ ನಾನು ಕಾಣುವಂತಿಲ್ಲವಾದ್ದರಿಂದ ಸ್ವಚ್ಛವಾಗಿ ಕಣ್ಣುಬಿಟ್ಟು ನೋಡಿದೆ ಸುರೇಶನು ಅವರ ತೊಡೆಯ ಮೇಲೆ ಮಲಗಿದುದನ್ನೂ ಹಾಯಾಗಿ ನಿದ್ರೆಹೋದುದನ್ನೂ ಮತ್ತೆ ಮತ್ತೆ ನೋಡುವ ಆಸೆಯಾಯಿತು. ಅದನ್ನು ನೋಡಿ ಕಳವಳಗೊಂಡ ಮನಸ್ಸು ಹರಿದಾಡಿತು. 'ಹೆಣ್ಣು ಜೀವಕ್ಕೆ ಏನು ಬೇಕು?' ಎಂದು ಕೇಳಿಕೊಂಡೆ. 'ಒಂದು ಹೆಮ್ಮರದ ನೆರಳಲ್ಲಿ ಜೀವಿಸು ವುದೆ ಅಲ್ಲವೆ? ಆ ಹೆಮ್ಮರದ ಆಸರೆ ಮಾತ್ರ ಬೇಕು. ಗಂಡಸಿನಷ್ಟು ಗಂಡೆದೆ ನಮಗೆ ಇರಬಲ್ಲುದೆ? ಅದಿಲ್ಲದಾಗ ಸ್ವಾತಂತ್ರ್ಯದ ಹಂಬಲೇಕೆ? ಕೈಹಿಡಿಯು ವವರು ಎಂದು ಹೇಳುವಾಗ. ಕೈಹಿಡಿದವರು ಬಾಳದಾರಿಯಲ್ಲಿ ತನ್ನ ಹೆಣ್ಣು ಎಡವದಂತೆ ನೋಡಿಕೊಳ್ಳುವುದಷ್ಟೆ, ಅದಿಲ್ಲದೆ ಹೋದರೆ ಒಬ್ಬಳೇ ಎದೆ ಗೊಟ್ಟು ನಿಲ್ಲುವ ಸಾಮರ್ಥ್ಯ ನನಗಿದೆಯೆ.'

ಸುರೇಶನ ಕಡೆಗೆ ಇನ್ನೊಮ್ಮೆ ನೋಡಿದೆ ಹೊಟ್ಟೆಕಿಚ್ಚು ಹೆಚ್ಚಾಗಿ ಬಂದಿತು. 'ನನ್ನ ಕೈಹಿಡಿಯುವವನು ಅಂತಹ ಸಮರ್ಥನಾಗಿರುವವನಿರ ಬೇಕು. ಪ್ರಭಾವಶಾಲಿ ವ್ಯಕ್ತಿತ್ವವುಳ್ಳ ಹಾಗು ಪ್ರೇಮಲ ಸ್ವಭಾವದವನು ನನ್ನನ್ನು ತನ್ನವಳನ್ನಾಗಿ ಮಾಡಿಕೊಂಡರೆ ಸಾಕು. ನನಗೆ ಸ್ವಚ್ಛಂದತೆ ಬೇಡ. ಅಂತಹರಿಗೆ ನನ್ನ ಸರ್ವಸ್ವವನ್ನೆಲ್ಲ ಒಪ್ಪಿಸಿ, ನಿಶ್ಚಿಂತಳಾಗುವದರ

ಲ್ಲದೆ ನನ್ನ ಸುಖವಿದೆಯಲ್ಲವೆ?........ಈಗ ಸುರೇಶನು ಅವರ ತೊಡೆಯ ಮೇಲೆ ಎಷ್ಟು ಹಾಯಾಗಿ ಮಲಗಿದ್ದಾನೆ. ಅಂತಹ ನೆಮ್ಮದಿ ನನಗೆ ಬೇಕು. ಶಾಂತಿ ಬೇಕು.'

ಅವರು ಪೇಪರನ್ನು ಸರಿಸುವ ಹಾಗೆ ಕಂಡುದರಿಂದ ನಾ ಕೂಡಲೇ ಕಣ್ಣುಮುಚ್ಚಿದೆ.........ಕಡ್ಡಿಕೊರೆದ ಸಪ್ಪಳವಾಯಿತು. ಮತ್ತೆ ಸಿಗರೇಟು ಹೊತ್ತಿಸಿದರು. 'ಅಯ್ಯೋ, ಎಷ್ಟರೆ ಸೇದೋದು? ಹೋಗಿ ಕಸಿದು ಒಗೆ ಯಲೆ? ದೇಹಬಲ ಕುಗ್ಗುವದೆಂಬ ಕಲ್ಪನೆಯಿರಬಾರದೆ? ಥುತ್' ಎಂದು ನೊಂದೆ. ವಿಚಿತ್ರ! ಅದೇ ಮಾತನ್ನು ಕೆಲವರ್ಷಗಳ ನಂತರ ಮದುವೆ ಯಾದ ನನ್ನ ಯಜಮಾನರಿಗೆ ನಾ ಹೇಳಿದಂತೆಯೂ, ಅವರು ನನ್ನ ಗಲ್ಲ ವನ್ನು ಹಿಂಡಿ, 'ಹುಚ್ಚಿ, ಚಟಾ ಅದು ಹೋಗೂದಿಲ್ಲ' ಎಂದಂತೆಯೂ ಕಲ್ಪನೆಯೊಂದು ಚಿಗುರಿತು!

ಒಂದು ಕ್ಷಣ ಅದರ ರಸಾಸ್ವಾದನೆ ಮಾಡುತ್ತಿರುವಾಗ, ಕಾಲಿಗೆ ಒಂದು ಗುಂಗಾಡು ಕಡಿಯಿತು. ಒಮ್ಮೆಲೆ ಬಲವಾಗಿ ಕಡಿದುದರಿಂದ ಒಡನೆಯೆ ಕಾಲು ಸರಿಸಬೇಕಾಯಿತು. ಅದು, ಇದುರಿಗೇ ಕುಳಿತಿದ್ದ ಅವರ ಕಾಲಿಗೆ ತಾಕಿತು. ಅಚಾತುರ್ಯವಾಯಿತಲ್ಲ ಎಂದು ಮಿಡುಕಿದೆ. ಏಕೊ ಮತ್ತೂ ಕಣ್ಣುತೆರೆಯಬಾರದು ಎಂದೆನಿಸಿತು. ಆದರೆ ಕಡಿದ ಜಾಗ ತುರಿಸಿಕೊಳ್ಳದೆ ನಡೆಯುವಂತಿರಲಿಲ್ಲ! ಕಣ್ಣನ್ನು ತೆರೆದೆ.

ಎದುರಿಗೇ ಅವರು. ಸಿಗರೇಟಿನಿಂದ ಹೊಗೆ ಹಾಯುತ್ತಿದೆ. ನಿರ್ಭಾವ ದಿಂದ ಒಂದು ಕಡೆ ನೋಡುತ್ತಿದ್ದಾರೆ. ಸಿಗರೇಟನ್ನು ಸೇದುವವರೆಲ್ಲರಿಗೂ ಈ ಬಗೆಯ ಗುಂಗೊ ಏನೊ.

ಅವರಿಗೆ ಹೊಂದಿದ ನನ್ನ ಕಾಲನ್ನು ಸರಿಸಿ ಬಾಗಿ ತುರಿಸಿಕೊಂಡೆ ನಾನು ಮುಖವನ್ನೆತ್ತಿ ಆ ಮೇಲೆ ಅವರ ಕಡೆಗೊಮ್ಮೆ ನೋಡಿದಾಗ ಮುಖದ ಕುರೂಪ ಏಕೊ ಅಷ್ಟು ಅನಿಸಲಿಲ್ಲ. ಆದರೆ ಅವರು ನನ್ನ ದೃಷ್ಟಿಯನ್ನು ಎದುರಿಸಿದ್ದರೆ, ಇದೇ ಬಗೆಯ ಸ್ನಿಗ್ಧಭಾವ ಆಗ ನನ್ನಲ್ಲಿ ಉಳಿಯುತ್ತಿತ್ತೊ ಇಲ್ಲವೊ ಹೇಳಲಾರೆ.

ಸುರೇಶನಿಂದ ಅವರಿಗೆ ತೊಂದರೆಯಾಗುತ್ತದೆಂದು ನನಗನಿಸಿತು. ಈ ನೆವದಿಂದ ಅವರನ್ನು ಮಾತಾಡಿಸಲೆಂದು ಮನಸ್ಸಿನಲ್ಲಿ ಹೇಳಬೇಕೆಂದಿರುವ

ವಾಕ್ಯವನ್ನು ರೂಹಿಸಿಕೊಂಡು, ನನ್ನ ಕಡೆ ನೋಡುವುದನ್ನೇ ಕಾಯುತ್ತಿದ್ದೆ ಹಾಗೆ ನೋಡಿದ ಕೂಡಲೇ ನಾ ಹೇಳಿದೆ. "ಎಷ್ಟೊತ್ತದು ಹಂಗೇ ಮಲಗೋದು. ಮೊದ್ಲ ಸಜಾಗಾ ಇಲ್ಲ. ಎಬ್ಬಸರಿ ಅವನ್ನ, ನಿಮಗ ಸುಳ್ಳೇ ತ್ರಾಸು ಮನಿಗೆ ಹೋದಮ್ಯಾಲೆ ಮಲಗೇ ಮಲಗತಾನ."

"ಮಲಗಲಿ ಪಾಪ! ನನಗೇನು ತ್ರಾಸು ಆಗಬೇಕಾಗೇದ? ಟ್ರಂಕಿನ ಮ್ಯಾಲೆ ಕೂತಾನ. ಇಲ್ಲೆ ತಲಿ ಇಟ್ಟಾನ ಅಷ್ಟೆ" ಎಂದರು. ತುಸು ತಡೆದು ಸಂಕೋಚವಿಲ್ಲದ ದನಿಯಲ್ಲಿ ಕೇಳಿದರು. "ನಿಮಗ ಈಗ ನಿದ್ದಿ ಹತ್ತಿರಲಿಕ್ಕಿಲ್ಲ."

"ತುಸು ಜಂಪು ಹತ್ತಿತ್ತು .......ಯಾರಿಗೆ ಬೇಕಾಗೇದ ನಿದ್ದಿ? ಕೂಡಲಿಕ್ಕೆ ಇಷ್ಟು ಜಾಗಾಸಿಕ್ಕ್ಯದ, ರಗಡಾತು. ಖರೇ ಅಂದ್ರ ಇವತ್ತ ನನ್ನ ಕೈಕಾಲೇ ಹೋಗಿದ್ವು. ದೇವರ್‍ಯ ಪಾರುಮಾಡಿದಾ ಅನಬೇಕು" ನಾನಾಡಿದ ಮಾತಿಗೇ ಲಜ್ಜೆ ಒಮ್ಮೆಲೇ ಅಡರಿತು. ಅದನ್ನು ಮರೆಮಾಡಲು ಕಿಟಕಿಯ ಕಡೆ ಮುಖತಿರುವಿದೆ.

'ನೀರಾ' ಸ್ಟೇಶನ್ನು ಬಂದಿತು. ಇಳಿಯುವವರು ತಮ್ಮ ಸಾಮಾನನ್ನು ಸಾರಿಸಿಕೊಳ್ಳತೊಡಗಿದರು. ಇವರು ಸುರೇಶನ ತಲೆಯನ್ನು ನನ್ನ ತೊಡೆಯ ಮೇಲಿರಿಸಿಕೊಳ್ಳಲು ಸೂಚಿಸಿ, ತಟ್ಟನೆ ಎದ್ದು ಜಾಗವನ್ನು ಮಾಡಲು ಅಣಿಯಾದರು. ಪುಣೆಯಿಂದ ಬಂದು, ಇದುವರೆಗೆ ನಿಂತಿದ್ದವರಿಗೆ ಕೂಡ್ರುವ ವಿಷಯದಲ್ಲಿ ಜಾಗ ತೋರಿಸಿಕೊಟ್ಟರು. ಜನ ಶ್ರದ್ಧೆಯಿಂದ ಅವರ ಮಾತನ್ನು ಕೇಳುತ್ತಿತ್ತು.

ಮೊದಲಿಗೆ ಸಾಮಾನನ್ನಿಡುವ ಮೇಲಿನ ಜಾಗ ತೆರವುಮಾಡಿಸಿದರು. ಸುರೇಶನನ್ನು ಎಬ್ಬಿಸ ಹೇಳಿದರು. 'ಯಾವ ಸ್ಟೇಶನ್ನು' ಎಂದು ಕೇಳುತ್ತ ಸುರೇಶನು ಕಣ್ಣು ತೆರೆದನು. ಅವರ ತೊಡೆಯ ಮೇಲೆ ಮಲಗಿದ್ದೆನಲ್ಲ ಎಂಬುದರ ಧ್ಯಾಸ ಅವಗೆ ಹುಟ್ಟಿ, 'ಅವರೆಲ್ಲಿ?' ಎಂದು ಕೂಡಲೆ ಕೇಳಿದನು. 'ಅದೊ' ಎಂದು ಸ್ವಲ್ಪ ಉಲ್ಲಸಿತವೃತ್ತಿಯಲ್ಲಿ, ಅವರ ಕಡೆ ತೋರಿಸಿದೆ. ಸಾಮಾನನ್ನು ಹೊಂದಿಸುವದಾದಮೇಲೆ ಸುರೇಶನ ಕಡೆ ತಿರುಗಿ 'ಯಾಕಪಾ ನಿದ್ದಿ ಆತ್ಯ? ಮ್ಯಾಲ ಜಾಗಮಾಡಿ ಇಟ್ಟ್ಯದ ರಾಯರಿಗೆ. ಮಲಗತೀರಿ ಹೌದಲ್ಲೊ ಮಲಗಿ ರೂಢಾ ಅದನ್ವ?" ಎಂದು ಕೇಳಿದರು.

ಸುರೇಶನು ‘ ಓಹೋ ’ ಎಂದು ಮರುಕ್ಷಣವೇ “ ನೀವು ಮಲಗಿರಿ. ನಾ ಇಷ್ಟೊತ್ತನಕಾ ಮಲಗೇನಿ, ಲಗೂ ನಿದ್ದಿ ಹತ್ತುವದಿಲ್ಲ ನನಗಿನ್ನ ” ಎಂದು ಹೇಳಿದ.

“ ಹೂಂ. ಲಗುಲಗು....ನಿನ್ನ ಕಾಳಜಿ ನಾ ನೋಡಿಕೊಂತೇನಪಾ. ಈಗನಕಾ ಮ್ಯಾಲೆ ಹತ್ತು, ಮುಂದಿ ಬರತಾರ” ಎಂದು ಅವನನ್ನು ಹತ್ತಿಸಿಯೇ ಬಿಟ್ಟರು.

ಇಳಿಯಬೇಕಾದವರಲ್ಲಿ ಅರ್ಧ ಜನ ಇಳಿಯುತ್ತಲೂ, ಅವರು ಕೂತ ಸೀಟಿನ ತುದಿಯ ಮುಂದೆ ಒಂದು ಟ್ರಂಕು, ಹಾಸಿಗೆ ಸುರಳಿಯನ್ನಿಟ್ಟಿಸಿ, ಉದ್ದಕ್ಕೂ ಜಾಗವಾಗುವಂತೆ ಮಾಡಿದರು. ಮುಗಿದ ಕೂಡಲೇ ನನ್ನ ಕಡೆ ತಿರುಗಿ “ ನೀವು ಇಲ್ಲಿ ಮಲಗಬರ್ರಿ ” ಎಂದರು. ಅವರ ಆಶಯ ತಿಳಿಯಲಿಲ್ಲ. ತಾವು ಮಲಗುವ ಯೋಚನೆಯೇ ಇಲ್ಲವೆ ಎಂದುಕೊಂಡು “ ನಾ ಒಲ್ಲೆ. ನಿಮುಗ ಇರ್ಲಿ ಆ ಜಾಗ ” ಎಂದೆನು. ಇಷ್ಟಾಗಿ ಅದು ಹೇಗೆ ಮಲಗುವದು, ಇಷ್ಟು ಜನ ನಿಂತಾರೆ ಮೇಲಾಗಿ ಅವರಿಗೆ ಪ್ರಶಸ್ತ ಸ್ಥಳಬೇಡವೇ ಎಂದು ವಿಚಾರಿಸುತ್ತಿರುವಾಗಲೇ, ಅವರು ‘ ಇಲ್ಲಿ ಬರಬಾರದೆ ಸುಮ್ನ. ಹಿಂದಾಗಡೆ ಊರತನಕಾ ಹಿಂಗs ಕುತಗೊಂಡೇ ಹೋಗಬೇಕಾದೀತು....ಇಂಥಾದೇನರೆ ಗದ್ದಲಾ ಹಾಕಿದರs ಜಾಗಾ ಆಗ್ತsದ” ಎಂದು ನಾ ಹೊರಡುವದನ್ನೇ ಕಾಯುತ್ತ ನಿಂತರು.

ಆಗೂ ನನಗೆ ಮಲಗಬಾರದು ಎನಿಸಿತು. ಆದರೆ ಮರುಮಾತಿಲ್ಲದೆ ಅಲ್ಲಿಗೆ ಮುದುಡಿಕೊಂಡು ಮಲಗಿದೆ ಆ ಮೇಲೆ ಹೇಳಿದರು. “ನೀವೀಗ ಜಡ್ಡಿನವರು. ಯಾರು ಬಂದರೂ ಏಳುವಹಾಗಿಲ್ಲ ”....ಬಹುಶಃ ನನ್ನ ಹೆಸರಲ್ಲಿ ಜಾಗ ಹಿಡಿದು ನಂತರ ತಾವು ಮಲಗುತ್ತಿರಬೇಕು ಎಂದು ಸಮಾಧಾನ ಮಾಡಿಕೊಂಡೆ.

“ ನಾ ಏನು ಹೇಳಿದೆ ? ಕಣ್ಣು ಮುಚ್ಚರಿ. ಕಾಲು ಇನ್ನಷ್ಟು ಚಾಚರಿ” ಎಂದರು.....ಎಷ್ಟದು ಅಧಿಕಾರ ನಡಿಸುವದು !

ಜನ ಇಳಿದಿತ್ತು. ಹತ್ತುವವರು ಆರ್ಭಟಿಸುತ್ತ ಮುನ್ನುಗ್ಗುತ್ತಿದ್ದರು. ಹಿಂದೆ ಇನ್ನೂ ಸಂಖ್ಯೆ ದೊಡ್ಡದಿದ್ದಂತೆ ಕಂಡಿತು. ಇಷ್ಟೆಲ್ಲರನ್ನೂ ಜಪ್ಪಿಸಿ

ನಾ ಹಾಗೇ ಮಲಗಿಕೊಳ್ಳಬಹುದೆ? ನನ್ನ ಎದೆ ಡವಡವ ಹಾರುತ್ತಿತ್ತು. ನನ್ನ ದೌರ್ಬಲ್ಯವನ್ನು ಊಹಿಸಿದರು ಎನ್ನುವ ಹಾಗೆ 'ಯಾರು ಎಬ್ಬಿಸಿದರೂ ಏಳಬೇಡಿರಿ' ಎಂದು ಬಾಗಿಲಕಡೆಗೆ ನಡೆದರು.

ಕಣ್ಣುಮುಚ್ಚಿ ಮಲಗಿದ್ದೆ. ಹತ್ತಿರವೆ ಹೊಸದಾಗಿ ಹತ್ತಿದ್ದ ಪ್ರಯಾಣಿಕರು ಬಹುಸಂಖ್ಯೆಯಲ್ಲಿ ನಿಂತಂತೆ ಅನಿಸಿತು. ಬಾಗಿಲನ್ನು ಇಕ್ಕಿದ ಸಪ್ಪಳವಾಯಿತು. ಅವರು ದೊಡ್ಡ ದನಿಯಲ್ಲಿ, ಇನ್ನೂ ಹತ್ತಲೆಂದಿದ್ದವರಿಗೆ, 'ಜಾಗಾ ಇಲ್ಲ' ಎಂದು ಹೇಳುತ್ತಿದ್ದರು. ಆದರೂ ಬಾಗಿಲು ಮುಂದೂಕಿ, ಎದುರು ವಾದಿಸಿ ಬರಲು ಹವಣಿಸಿದವರೂ ಇದ್ದರು. ಆದರೆ ಅವರ ಮುಂದೆ ಈಡಾಗಲಿಲ್ಲ. ಗದ್ದಲ ಕ್ರಮವಾಗಿ ಕಡಿಮೆಯಾಯಿತು.

ಮುಚ್ಚಿದ ಕಣ್ಣನ್ನು ಮುಚ್ಚಿಯೆ ಇದ್ದೆ. ನನ್ನ ಕಾಲುದೆಸೆಯಲ್ಲಿ ಯಾರೊ ಕುಳಿತಂತಾಯಿತು. ಕಣ್ಣಮೇಲಿಟ್ಟ ಕೈಯಮರೆಯಿಂದ, ನಸು ನೋಡಿದೆ. ಅವರೇ! ಥಟ್ಟನೆ ತುಸು ಕಾಲು ಸರಿಸಿದೆ. ಮತ್ತೆ ಕಡ್ಡಿಯನ್ನು ಕೊರೆದ ಸಪ್ಪಳ. ಸುರೇಶ ಏನು ಮಾಡುತ್ತಿದ್ದಾನೋ ನೋಡುವ ಹಾಗಾಯಿತು. ಅಲ್ಲಿಂದಲೇ ನೋಟ ತಿರುಗಿಸಿದೆ. ಮೇಲೆ ನೀಳವಾಗಿ ಮಲಗಿ, ಅವರ ಕಡೆೈನಸುನಗೆಯಿಂದ ನೋಡುತ್ತಿದ್ದ.

ಒಬ್ಬನು ಅವರ ಬಳಿ ಬಂದು ಮರಾಠಿಯಲ್ಲಿ ಕೇಳಿದ. "ನಿಮ್ಮ ಪೈಕಿ ಯೇನು ಈ ಹೆಣ್ಣುಮಕ್ಕಳು?"

"ಹೂಂ!"

"ಎಬ್ಬಿಸರೆಲ? ನಿಂದರಲಿಕ್ಕೆ ಕೂಡಾ ಜಾಗ ಇಲ್ಲ. ಮಲಕೊಂಡ್ರ ಹೆಂಗ?"

"ಶಕ್ಯ ಇಲ್ಲ. ಇಷ್ಟೊತ್ತ ನಿಂತಕೊಂಡೇ ಬಂದೇವಿ. ಅವರು ಏಳೋ ಹಂಗಿಲ್ಲಾ."

"ಏನೊ ಎಂತೊ, ಅವರ ದನಿಯಲ್ಲೇ ಅಷ್ಟು ಪ್ರಭಾವವಿತ್ತೋ ಏನೊ. ಇಂತಹ ಪ್ರಸಂಗಗಳಲ್ಲಿ ಎಲ್ಲರೂ ಹಿನ್ ಸರಿಯುವರೇ ಆಗುತ್ತಿದ್ದರು. ಎಲ್ಲಿಯೂ ಇಂತಹರನ್ನು ನಾ ಕಾಣಲಿಲ್ಲ.

ನೀರಾ ಇದು ನೀರಿನ ಸ್ಟೇಶನ ಆದುದರಿಂದ ಗಾಡಿ ಇನ್ನೂ ನಿಂತಿತ್ತು. ಹತ್ತುವವರ ಕಟಕಟಿ ಇರಲಿಲ್ಲ. ಈಗ ಮಾತನಾಡಿಸಿ ಹೋದವನೂ ಕುಳಿತಿರಬೇಕು ಎನಿಸಿತು.

ನನಗೆ ಮಲಗಲು ಎಷ್ಟೂ ಮನಸ್ಸಾಗಲಿಲ್ಲ. ಏಳಲೀಬೇಡವೆ ಎದ್ದರೆ ಮತ್ತೆಲ್ಲಿ ಏನನ್ನುವರೋ ಎಂಬ ಎದೆವಡಿಕೆಯಿಂದ ಅಂತೂ ಒಮ್ಮೆ ಎದ್ದು ಕುಳಿತೆ. ಒಮ್ಮೆಲೆ ಅವರು "ಯಾಕೆ?" ಎಂದರು.

ಬೇಗ ಉತ್ತರಿಸಲು ನನಗೆ ಸಾಧ್ಯವಾಗಲಿಲ್ಲ; ತುಸು ತಡೆದು ಹೇಳಿದೆ. "ಜನದ ಗದ್ದಲ ಕಡಿಮಿ ಆತಲ್ಲ. ನೀವು ಮಲಗರಿ" 'ತ್ಸ' ಎಂದರು. ಅಷ್ಟಂದಾಗಲೇ ಇನ್ನೇನೆನ್ನುವರೊ ಎಂದುಕೊಂಡಿದ್ದೆ. ಆದರೆ ಕೂಡಲೆ ಅವರು ದನಿಯುನ್ನು ಸೌಮ್ಯಗೊಳಿಸಿ, "ನನಗ ಇಷ್ಟು ಲಗು ಮಲಗಿ ರೂಢಾ ಇಲ್ಲ. ನಿಮ್ಮಿಬ್ಬರಿಗೂ ಮಲಗಲಿಕ್ಕೆ ಜಾಗಾಮಾಡಿ ನಾ ಹಂಗೇ ಕೂಡ್ಹೋ ಅಷ್ಟು ನಿಸ್ವಾರ್ಥಿ ಅಲ್ಲಿ ನಾನು. ನನ್ನ ಸಲುವಾಗೇ ಈ ಜಾಗಾ ಮಾಡಿಕೊಂಡೇನಿ. ನನಗ ನಿದ್ದಿಬಂತಂದ್ರ, ಸುರೇಶನ್ನರೆ, ನಿಮ್ಮನ್ನರೆ ಎಬ್ಬಿಸಿ ನಾ ಮಲಗತೇನಿ" ಎಂದರು. ಸುರೇಶನ ಕಡೆ ತಿರುಗಿ "ಯಾಕ, ಏಳ್ರೀ ಹೌದಲ್ಲೋ?" ಎಂದು ನಗುತ್ತ ಕೇಳಿದರು.

"ಈಗೇ ಬಂದು ಬಿಡ್ರಿ. ನಾ ಕೆಳಗ ಕೂಡತೇನಿ" ಎಂದು ಸುರೇಶನು ಏಳುವ ಆತುರ ತೋರಿದ.

ಕೂಡಲೆ ಅವರು "ಶ್, ಅಸ್ತು. ಸುಮ್ಮನೆ ಮಲಗು" ಎಂದು ಕೈ ಮಾಡಿದರು.

ಗಾಡಿ ಬಿಟ್ಟಿತು.

ಮಲಗಿಯಾದರೂ ಬಿಡುವ, ಎಂದು ಕಣ್ಣು ಮುಚ್ಚಿದೆ. ನಿದ್ದೆ ಹತ್ತಬಾರದೆ? ಇಲ್ಲ. ಇದುವರೆಗಿನ ಘಟನೆಗಳೇ ಅಲ್ಲೊಂದಿಷ್ಟು ಇಲ್ಲೊಂದಿಷ್ಟು ಸುಳಿಯುತ್ತಿದ್ದುವು. ಅದೆಲ್ಲ ಮರೆಯಾಗಿ, ಸರಸಕ್ಕನ ನೆನಪಾಯಿತು. ದಿನವೂ ಈ ವೇಳೆಗೆ ಸ್ವಲ್ಪ ಮುಂಚೆ ಕೂಸಿಗೆ ಹಾಲು ಕುಡಿಸುತ್ತಿದ್ದೆ. ಈಗ ಅವಳೇ ಹಾಕಿಕೊಳ್ಳಬೇಕು. ಅದರ ಮೇಲಿನ ಮುಂಗಡಿ ಕೂಸು ರೇಖಾ, ಈಗ ಮಲಗಿರಬೇಕು. ನಾನು ಚುಕ್ಕೂ ಬಡಿದು ಹತ್ತಿರ ಮಲಗದ

ಹೊರತು ರೇಖಾ ಮಲಗುತ್ತಿರಲಿಲ್ಲ. ಆಗ ಎಂತಹ ಕೆಲಸ ಇದ್ದರೂ ಬಿಟ್ಟು ಬಂದು ಮಲಗಿಸುತ್ತಿದ್ದೆ....ನಾನು ಬರುವಾಗ ಎಷ್ಟು ಅತ್ತಿತು! ಮಾಮಾ ಸ್ಟೇಶನ್ನಿನವರೆಗೂ ಕರೆದುಕೊಂಡು ಬಂದು, ನಮ್ಮನ್ನು ಗಾಡಿಗೆ ಕೂಡ್ರಿಸಿ ಹೋಗುತ್ತಿದ್ದರಾಗುತ್ತಿರಲಿಲ್ಲವೆ? ಮಾಮಾ ಇವತ್ತೇನು ಅವನಿಗೆ ಸರಸಕ್ಕೆ ನೊಡನೆ ಚಕ್ಕಂದವಾಡಲು ಸಿಕ್ಕಂತಾಯಿತು. ಅವತ್ತು....ಒಮ್ಮೆ ನಡುವೆ ನಾ ಬಂದುಬಿಟ್ಟೆ....ಗೊತ್ತಾಗಲಿಲ್ಲ. ಇವರು ಹೀಗೆ ತಮ್ಮ ಹೆಂಡತಿಯೊಡನೆ ಸರಸವಾಡಬಹುದೆ? ಆಡದೆ ಏನು?'

ಅವರ ಕಡೆ ಒಮ್ಮೆ ನೋಡುವ ಮನಸ್ಸಾಯಿತು. ನೋಡಿದೆ. ಹೊಸದಾಗಿ ಸಿಗರೇಟನ್ನು ಹಚ್ಚಿದಂತೆ ಕಂಡಿತು. ಇವರ ಜನ್ಮಕ್ಕೆ ನಾಚಿಕೆಯಿಲ್ಲ ಎಂದು ಬಾಯೊಳಗೆ ಬೈದೆ.

ಅವರನ್ನು ಯಾವನೊ—ಯಾವನೊ ಏಕೆ, ನನ್ನನ್ನು ಎಬ್ಬಿಸಬಂದ ಆ ಮಧ್ಯಮ ವಯಸ್ಸಿನವನು ಮರಾಠಿಯಲ್ಲಿ ಕೇಳುತ್ತಿದ್ದನು. "ಈಗ ನೀವು ಮುಂಬೈಯಿಂದ ಬಂದ್ರೇನು?"

"ಹೌದು."

"ಏನು ಮುಂಬೈ ಒಳಗ ನೌಕರಿ ಮಾಡಿಕೋತ ಇದ್ದೀರಿ?"

"ಏ, ಇಲ್ಲ."

"ಬಿಸ್‌ನೆಸ್ ಮ್ಯಾಲೆ ಹೋಗಿದ್ರಿ?"

"ಛೆ ಅಲ್ಲ; ರೆಡಿಯೊದೊಳಗ ನನ್ನ ಗಾಯನ ಇತ್ತು. ಹೋಗಿದ್ದೆ"

"ಹಿಂಗs. ನಮ್ಮ ಪೈಕೀನೂ ಒಬ್ಬ ಗವಯಿ ಇದ್ದಾನ. ಅವಂದು ಗುರ್ತದ ಏನು? ಅಂವಾ ಇರೋದು ನೋಡ್ರಿ...."

ಇದೇನು ಹೊಸ ಸಂಗತಿ! ಇವರು ಉತ್ತಮವಾಗಿ ಹಾಡಬಲ್ಲರೆ? ರೆಡಿಯೊದಲ್ಲಿ ಹೇಳುವಷ್ಟು ಇರಬೇಕಾದರೆ! ಇಂತಹ ಕುರೂಪವಿರುವಲ್ಲಿಯೂ ಎಂತಹ ಶಾರೀರ! ನನ್ನ ಮನಸ್ಸು ಬಲವಾಗಿ ಹೊಯ್ದಾಡಿತು. ಮುಂದು ವರಿದ ಅವನ ಸಂಭಾಷಣೆಯ ಕಡೆ ಮತ್ತೆ ಲಕ್ಷ್ಯಗೊಟ್ಟೆ.

“ ನನಗೇನು ಯಾರೂ ಗುರು ಅಂತ ಹೇಳಿಲ್ಲ. ನಂಗೇ ಬಂದ್ಹಂಗ ಧಾಟಿಹಚ್ಚಿ ಹಾಡತಿರತೇನಿ. ಶಾಸ್ತ್ರೋಕ್ತ ಸಂಗೀತ ನಾ ಕಲೀಲಿಲ್ಲ. ಈಗೊಂದು ೩–೪ ತಿಂಗಳ ಹಿಂದ ಮುಂಬೈ ಒಳಗ ಇದ್ದಾಗ, ರೆಡಿಯೊಕ್ಕ ಸಹಜ ಟ್ರಾಯಲ ಕೊಟ್ಟಿದ್ದೆ. ಅಷ್ಟರಮ್ಯಾಲಿಂದ ಮೊನ್ನೆ ಒಂದು ಚಾನ್ಸ ಸಿಕ್ಕಿತ್ತು.”

“ ಮತ್ತ ನಿಮ್ಮ ನಿಯವರ್ನ, ಹಾಡಿನ ಸಲುವಾಗೇ ಅಂತ ಕರಕೊಂಡು ಹೋಗಿದ್ರ್ಯೋ ? ಏನು ಅವರು ಮುಂಬೈಯಾಗ ಇರುತ್ತಿದ್ರೋ ? ”

ಅಂ ! ವಿಚಿತ್ರ ಪ್ರಶ್ನೆ. ನನ್ನ ಮೇಲೆ ತಿರುಗಿತು. ನಾನು ಇವರ ಮನೆಯವಳೆ ? ಮತ್ತೆ ಎದೆಯಲ್ಲಿ ಝಲ್ಲೆಂದಿತು. ಈ ಮನುಷ್ಯ ತುಂಬ ವಾಚಾಳಿಯೆಂದೆಂದುಕೊಂಡೆ. ಅವರು ಉತ್ತರ ಹೇಳುತ್ತಿದ್ದಾರೆ.

“ ಇವರು. ಆಗಳೆ ನಿಮ್ಮೆದುರಿಗೆ ಸುಮ್ನಽ ಹೇಳಿದೆ. ನಮ್ಮ ಪೈಕಿ ಯೇನಲ್ಲ. ಇಲ್ಲೇ ಪುಣೆದೊಳಗ ಭೆಟ್ಟಿ ಆತು. ಕನ್ನಡ ಮಂದಿ ಅಂದ್ರ ತಾನಾಗಿ ಗುರ್ತ ಆಗತಽದ ನೋಡ್ರಿ. ಅವರ ಪೈಕಿ ದೊಡ್ಡವರು ಯಾರೂ ಬಂದಿಲ್ಲ. ತಮ್ಮ ತಮ್ಮನ್ನ - ಅದೊ ಮ್ಯಾಲೆ ಮಲಗ್ಯಾನಲ್ಲಿ ಅವನ್ನ ಕರ ಕೊಂಡು ಬಂದಾರ. ಅಷ್ಟೆ”....... ಇಷ್ಟೇನೇ.

ನಾನು ತೋಳಮರೆಯಿಂದ ಪಿಳಿಪಿಳಿ ನೋಡುತ್ತಲೆ ಇದ್ದೆ. ಇನ್ನೊಂದು ಯಾವುದೊ ಸ್ಟೇಶನ್ನಿಗೆ ಗಾಡಿ ನಿಂತಿತು. ನಿಂತ ಧಡಿಕೆಗೆ ಸುರೇಶನು ಅಲುಗಾಡಿದುದು ಕಾಣಿಸಿತು ಎಡಗಾಲನ್ನು ಜಾಗಬಿಟ್ಟು ಹೊರ ಚಾಚಿದ್ದ. ಅವರು ತೆಳಗೆ ಮುಖಮಾಡುವಂತಿದ್ದರೂ ಸುರೇಶನು ಬೀಳು ವಂತಾಗಿರುವನೆಂದು ಥಟ್ಟನೆ ಎನಿಸಿ ನೋಡಿದರು. ಆಗಲೆ ಮೇಲಕ್ಕೆದ್ದು, ಅವನನ್ನು ಸಮವಾಗಿ ಮಲಗಿಸಿ, ಅವನ ಮುಖದ ಮೇಲೆ ವ್ಯಸ್ತವಾಗಿ ಹರ ಡಿದ ಕೂದಲನ್ನು ಹಿಂದೆ ಸರಿಸಿ, ಒಮ್ಮೆ ಅವನ ಭುಜವನ್ನು ಅಕ್ಕರೆಯಿಂದ ಅಲುಗಿಸಿ, ಬಂದು ಕುಳಿತರು.

ನಾನು ನೋಡದೆ ಇದ್ದರೇ ನೆಟ್ಟಗಿತ್ತು ಎನ್ನಿಸುವಷ್ಟು ಅತಿ ಸಂಕಟ ವಾಯಿತು. ಸುರೇಶನು ಅವರ ತೊಡೆಯ ಮೇಲೆ ಮಲಗಿದಾಗ ಯಾವ ಬಗೆಯ ಪರಿತಾಪದಿಂದ ಹುರುಪಳಿಸಿದೆನೊ, ಇದೂ ಅದೇ ಬಗೆಯದಾಗಿತ್ತು. ಯಾಕೆ ಹೀಗಾಗಬೇಕು ಎಂದು ಮತ್ತೆ ಮತ್ತೆ ಕೇಳಿಕೊಂಡೆ.

ವಿಚಾರ ಮುತ್ತಿ ಮುತ್ತಿ ತಲೆ ಕೀಸರಿಟ್ಟು ಹೋದಂತಾಗಿತ್ತು. ಮೇಲಾಗಿ ಹೃದಯದ ಕಳವಳವೊಂದು. ಇನ್ನು ಮಲಗಿಯೆ ಬಿಡಬೇಕು ಎಂದು ಗೊತ್ತುಮಾಡಿ, ಒಂದು ಮಗ್ಗುಲಾದೆ. ಕಣ್ಣುಕುಕ್ಕುವ ದೀಪದ ಬೆಳಕೂ ಕಣ್ಣೆದುರು ಇರಲಿಲ್ಲವೆಂದೇನೊ, ತುಸುಹೊತ್ತಿನಲ್ಲಿ ನಿದ್ದೆಹತ್ತಿ ಬಿಟ್ಟಿತು.

ನಾನು ಆಗ ಅಸ್ಪಷ್ಟವಾದ ಕನಸನ್ನು ಕಾಣುತ್ತಿದ್ದೆ. ಕನಸಿನಲ್ಲಿ ನಾನೇ ಯಾರನ್ನೊ "ಹೂಂ, ಏಳ್ರಿ" ಎಂದು ಎಬ್ಬಿಸುತ್ತಿದ್ದೆ. ಮರುಕ್ಷಣ, "ಹೂಂ, ಏಳ್ರಿನ್ನ" ಎಂದು ಗಟ್ಟಿಯಾಗಿ ಅಂದ ಹಾಗೆ ಭಾಸವಾಯಿತು. ಎಚ್ಚರವಾಯಿತು. ಮಬ್ಬು ನನಗೆ. ಅವರೇ ನಿಜವಾಗಿ 'ಏಳ್ರಿ' ಎನ್ನುತ್ತಿದ್ದಾರೆ.

ಈ ಮಾತನ್ನು ಕೇಳಿ ನಾನು ನಾಚಿಕೆಯಿಂದ ಸತ್ತು ಸತ್ತು ಉಳಿದೆ. ಚಟ್ಟನೆ ಎದ್ದು ಕುಳಿತೆ. "ಹೋಡಿ ನಿದ್ದಿ. ನನಗ ಎಚ್ಚರಾನೇ ಇಲ್ಲ. ಯಾಕಿಷ್ಟು ಮೈಮರೆವೊ ಏನೊ. ನಿಮ್ಮನ್ನ ಇಷ್ಟೊತ್ತನಕಾ ಹಂಗೇ ನಿಲ್ಲಿಸ ಬೇಕಾತು."

"ಏನಿಲ್ಲ. ಈಗ ಮಲಗತೇನಲ್ಲ. ನನಗ ನಿದ್ದಿ ಬಂತಂದ್ರ ಎಬ್ಬಿಸತೇನಿ ಅಂತ ಹೇಳೇ ಇದ್ದೆ."

"ಇದಕ್ಕೂ ಮೊದಲು ಎಬ್ಬಿಸಬಾರದೇನು? ಬೆಳಗು ಆಗೋಹಂಗ ಕಾಣ್ತದ. ಮಿರಜ ಸ್ಟೇಶನ್ನೇನು ಇದು ಅಲ್ಲ?....... ಸುಳ್ಳೇ ನಿಮ್ಮನ್ನ ಎಬ್ಬಿಸಿ ಕೂಡಿಸಿದ್ಹಂಗ ಆತು." ನಾನು ನೊಂದುಕೊಂಡುದೆಲ್ಲ ಮರಳಿ ಮರಳಿ ಬಂದು ಬಿಟ್ಟಿತು.

ಈ ಮಾತನ್ನು ಕೇಳಿಯೂ ಅವರು ಕೇಳದಂತಿದ್ದರು. ಸಿಗರೇಟನ್ನು ಬಾಯಲ್ಲಿ ಕಚ್ಚಿಕೊಂಡು, ಸುರೇಶನ ಕಡೆ ಒಮ್ಮೆ ನೋಡಿದರು. "ಮಗಾ ನನಗೇನು ನಿದ್ದಿ ಹತ್ತೂದುಲ್ಲ ಅಂದಾವಾ, ನೀರಾಸ್ಟೇಶನ್ನು ಬಿಟ್ಟಕ್ರದೊ ಇಲ್ಲೊ, ಗೊರಕೆ ಹೊಡಿಯಲಿಕ್ಕೆ ಹತ್ಯಾನ" ಎಂದು ವಾತ್ಸಲ್ಯದ ನಗೆನಕ್ಕು ತಮ್ಮ ಬೂಟನ್ನು ತೆಗೆಯ ತೊಡಗಿದರು. ತಲೆಗೆ ಕರವಸ್ತ್ರವನ್ನು ಬಿಗಿದು, ಯಾವ ಯೋಚನೆಯಿಲ್ಲದೆ ಮಲಗಿದ್ದರು. ಬಲುಬೇಗ ಅವರಿಗೆ ನಿದ್ದೆ ಹತ್ತಿದ ಹಾಗೆ ಕಂಡಿತು.

"ಎಷ್ಟೊತ್ತು ನನಗಾಗಿ ನಿದ್ದೆಗೆಟ್ಟಿರೊ ಏನೊ. ತಾವಾಗಿಯೇ ನನ್ನನ್ನು

ಎಬ್ಬಿಸಬೇಕಾದರೆ, ಸಾಕಷ್ಟು ನಿದ್ದೆ ತಡೆದು ಬೇಸತ್ತು ಏಳಿಸಿರಬೇಕಲ್ಲವೆ? ಥೂ, ಮಲಗಿದ ಮೇಲೆ ಒಂದು ತಾಸಾದರೂ ನಿದ್ದೆ ಹತ್ತದ ನನಗೆ, ಕೊನೆಕೊನೆಗೆ ಬಹಳಷ್ಟು ನಿದ್ದೆ ಬಂದುಬಿಡಬೇಕೆ?.... ಹಾಗಾಗಬಾರದಿತ್ತು...." ಹೀಗೆಯೇ ಮಿಡುಕಿದೆ.

ಹೊರಗೆ ಕಿಟಕಿಯಿಂದ ತಂಗಾಳಿ ನುಣ್ಣಗೆ ತೀಡುತ್ತಿತ್ತು. ಇನ್ನೂ ನಿದ್ದೆಯ ಅವಶೇಷ ಉಳಿದಂತಾಗಿ, ಕಣ್ಣು ತೆರೆಯ ಬೇಕೆನಿಸಲಿಲ್ಲ. ಏಕೊ ಅವರ ಕಡೆ ನೋಡಬೇಕೆಂದಿತು ಮನಸ್ಸು. ನೋಡಿದೆ. ಅದೇ ಕಪ್ಪುಮುಖ. ಕಣ್ಣನ್ನು ಮುಚ್ಚಿದುದರಿಂದ ಅವರ ವಿದ್ರೂಪ ಎದ್ದು ಕಾಣುತ್ತಿತ್ತು. ಆದರೆ ಅದರ ಹಿಂದೆ ಪೂಜನೀಯವಾದ ಸುಂದರ ವ್ಯಕ್ತಿತ್ವದ ಸ್ವರೂಪವೊಂದು ಅರಳಿ, ಮತ್ತೆ ಮನಸ್ಸು ಗಾಸಿಗೊಂಡಿತು.

ಅದನ್ನು ಸಹಿಸುವದಕ್ಕಾಗದೆ, ಏನಾದರೂ ಓದಬೇಕೆಂದು ಸುರೇಶನ ಕೈಚೀಲದಲ್ಲಿದ್ದ 'ಕಾರಣ ಪುರುಷ' ವನ್ನು ಹೊರತೆಗೆದೆ.

ಈ ಮುನ್ನ ಇದೇ ಜಾಗದಲ್ಲಿ ಅವರು ಕುಳಿತಿದ್ದರು. ನಾನು ಮಲಗಿದ್ದೆನಲ್ಲ. ನಿದ್ದೆಯಲ್ಲಿ ಎಷ್ಟುಸಲ ಅವರಿಗೆ ನನ್ನ ಕಾಲನ್ನು ತಾಕಿಸಿರಬೇಕು. ಥು, ಎಂತಹ ತಪ್ಪು ಮಾಡಿದೆ. ಅವರು ಏನೆಂದು ತಿಳಿದಿರಬೇಕು. ನಯವಿಲ್ಲದವಳು ಎಂಬ ಭಾವನೆ ಮೂಡಿತೊ ಏನೊ. ಒಂದು ವಿಚಾರ ಹೊಳೆಯಿತು— ಅವರ ಕಾಲು ನನಗೇನು ಹೊಂದಿಕೊಂಡಿರಲಿಲ್ಲ. ಆದರೂ ಆ ತನಕ ಸರಿಯಬೇಕು ಎಂದುಕೊಂಡೆ. ಆದರೆ ಏಕೊ ಹಾಗೆ ಮಾಡಲಾಗಲಿಲ್ಲ. ಮತ್ತೆ ಮುದುಡಿಕೊಂಡೇ ಕುಳಿತೆ.

ಪುಸ್ತಕವನ್ನು ಓದಬೇಕೆಂದು ನಾನು ತೆರೆದೆನೊ ಇಲ್ಲವೊ ಇನ್ನೊಮ್ಮೆ ನೋಡಬೇಕು ಎನಿಸಿತು. ಮೊದಲ ಸಲ ಪುಣೆ ಪ್ಲ್ಯಾಟಫಾರ್ಮಿನ ಮೇಲೆ ಯಾವ ಒಂದು ಕೀಳು ದೃಷ್ಟಿಯಿಂದ ನೋಡಿದ್ದೆನೋ, ಅದೀಗ ಇರಲಿಲ್ಲ. ಅದಕ್ಕೆ ವಿರುದ್ಧವಾಗಿ ಒಂದು ಬಗೆಯ ಆದರ ನನ್ನಲ್ಲಿ ಮೂಡಿದೆ ಎನಿಸಿತು. 'ಏನಿದು ಹುಚ್ಚು-ಯಾರೊ ಅಕಸ್ಮಾತ್ ಭೆಟ್ಟಿಯಾಗಿ ತುಸು ನೆರವಾದ ಒಬ್ಬವಗಾಗಿ ಇಷ್ಟೇಕೆ ತೊಳಲಬೇಕು' ಎಂದು ಒಂದು ವಿಚಾರಸುಳಿ ಮನಸ್ಸನ್ನು ಕಲ್ಲುಮಾಡಲೆಳಸಿತು.

ಇಲ್ಲ, ಅದು ಬರಿ ಒಂದು ವಿಚಾರ ಅಷ್ಟೆ. ಸ್ಪಷ್ಟವಾಗಿ ನನಗೆ ತಿಳಿ

ಯಿತು, ಅರಿತೊ ಅರಿಯದೆಯೊ ಅವರ ವ್ಯಕ್ತಿತ್ವಕ್ಕೆ ಮನಸೋತವಳಾಗಿದ್ದೇನೆ. ಎಂದು ಇದುವರೆಗೆ ನಡೆದುದೆಲ್ಲ ಒಂದಕ್ಕೊಂದು ಪೋಷಕವಾಗಿ ಏರಿಬಂದು ಬಿಟ್ಟಿವೆ. ಇನ್ನು ಆ ಭಾವನೆಯಿಂದ ಹಿಂದೆ ಹೋಗಲಾರದವಳಾಗಿದ್ದೇನೆ ಎಂಬುದೂ ಖಚಿತವಾಯಿತು.... ನನ್ನ ವಿಷಯದಲ್ಲಿ ಅವರು ವಿಶೇಷ ಆಸ್ಥೆ ತೋರಿರಲಿಲ್ಲ. ಆದರೆ ನನಗಿಂತ ಆ ಹಾಲುಗಲ್ಲದ ಸುರೇಶನ ಮೇಲೆ ಹೆಚ್ಚು ಮಮತೆಯಿದ್ದಂತೆ ಕಂಡುಕೊಂಡೆ. ಅವನನ್ನು ತಮ್ಮ ತೊಡೆಯಮೇಲೆ ಮಲಗಿಸಿಕೊಂಡುದೂ ಅವನೊಡನೆ ಆಡಿದ ನಾಲ್ಕು ಸವಿಮಾತೂ ಎಲ್ಲವೂ ಕಣ್ಣು ಕಟ್ಟಿದುವು. 'ಸ್ತ್ರೀದಾಕ್ಷಿಣ್ಯ'ಕ್ಕಾಗಿ ಅವರು ಇದೆಲ್ಲ ಮಾಡಿದರೆ? ಎಂದು ಕೇಳಿಕೊಂಡೆ. ಎಷ್ಟೂ ಇಲ್ಲ ಎಂದು ಆಗೇ ತಿಳಿಯಬಂದಿತು....

ನನ್ನ ಕೈಹಿಡಿಯುವವರು ಕುರೂಪಿಯಾಗಿದ್ದಿದ್ದರೆ ಎಂಬ ವಿಚಾರ ಆಗ ಬಂತು. ನಮ್ಮ ಪರಿಚಯಸ್ಥರಲ್ಲೆಲ್ಲ ನಾನೊಬ್ಬ ಚೆಲುವೆಯೆಂದೆನಿಸಿಕೊಂಡಿದ್ದೇನೆ. ಕುರೂಪಿಗಂಡನೊಂದಿಗೆ ಹೊರಹೊರಟಾಗ ಗೆಳತಿಯರು, ಉಳಿದವರು ಹೀಗಳೆಯದೆ ಇರುವರೆ? ಚಾಷ್ಟಿ ಮಾಡಲಿಕ್ಕಿಲ್ಲವೆ? ಮಾಡಿದರೆ ಮಾಡಲಿ. ನನಗೆ ಬರಿ ರೂಪ ಬೇಡ, ಇಂತಹ ಎದೆಗಾರಿಕೆಯುಳ್ಳ ಹಾಗು ನಯನಾದ ವ್ಯಕ್ತಿತ್ವವುಳ್ಳವರು ಇರಬೇಕು.

ಇನ್ನೂ ಒಮ್ಮೆ ಅವರ ಕಡೆ ನೋಡಿದೆ.

ಕೆಟ್ಟ ವಿಧಿಯೆ, ಇವರು ಎಷ್ಟೊಂದು ಕುರೂಪಿಯಾಗಿದ್ದಾರೆ! ಸ್ವಲ್ಪಾದರೂ ನೆಟ್ಟಗಿರಬಾರದೆ? ಕಪ್ಪು ಬಣ್ಣವೆಲ್ಲ ಇವರಿಗೇ ಅಂಟಿಕೊಂಡಂತಿದೆಯಲ್ಲ.... ಸರಿ, ಕಪ್ಪು ಬಣ್ಣ ಒಂದು ವೇಳೆ ಸಹ್ಯವಾದೀತೇನೊ. ಆದರೆ ಈ ಮೂಗು ಹೀಗೆ ಚಪ್ಪಟೆಯಾಗಿರಬಾರದಿತ್ತು. ಕೊನೆಯ ಪಕ್ಷ, ಹಣೆಯಾದರೂ ಹೀಗೆ ಚೌಕಾಗಿ ಹಲಿಚಾಗಿರದೆ, ದುಂಡಗಿದ್ದರೆ.... ಇದ್ದರೆ, ಈಗ ಇಲ್ಲ. ....ಇನ್ನೊಂದು ಆಗಲಾರದಲ್ಲ.... ಸ್ವಲ್ಪಾದರೂ ಸಲಕ್ಷಣತೆ ಇರಬೇಕು ಗಂಡಿಸಿಗೆ....

ಹೊಟ್ಟೆಯಲ್ಲಿ ತಾಳಲಾರದಷ್ಟು ದಾಹ ಉಕ್ಕೇರಿತು. ನಮಗೇನೊ ಕಣ್ಣೀರು ಸುಲಭಸಾಧ್ಯವಂತೆ. ಅತ್ತಾದರೂ ಅದನ್ನು ಹೊರಗೆ ಹಾಕಿಯೇನೆಂದರೆ, ಒಂದು ಹನಿ ಕೂಡ ನೀರು ಬರಲಿಲ್ಲ. ಆಗರೂ ಸಂಕಟ ತಪ್ಪಲಿಲ್ಲ.

ಈ ಪಟ್ಟು ಮನಸ್ಸನ್ನು ಅಣಿಗೊಳಿಸಿ, ಕೈಯಲ್ಲಿದ್ದ ಪುಸ್ತಕವನ್ನು

ಓದಲಿಕ್ಕೇ ಸುರುವು ಮಾಡಿದೆ. ಪಾನು ತೆಗೆದೊಡನೆ ಅದರಲ್ಲಿ ಮದುವೆಯ ಮಾತೇ! ವಧೂವರರ ಮೆರವಣಿಗೆ ಹೊರಟಿದೆ. ಬೆಳುದಿಂಗಳ ಸೊಂಪಿನಲ್ಲಿ ವರನಿಗೆ ನಿದ್ದೆ ಹತ್ತಿಬಿಟ್ಟಿದೆ. ಮುಂದೆ ಬ್ಯಾಂಡಿನವರು ಇಂಪಾಗಿ ಬಾರಿಸುತ್ತಿದ್ದಾರೆ.........

ಮತ್ತೆ ಮನಸ್ಸು ಪುಸ್ತಕವನ್ನು ಬಿಟ್ಟೋಡಿತು. 'ಹಾಂ ಇವರೂ ಇಂಪಾಗಿ ಹಾಡಬಲ್ಲರಲ್ಲವೆ? ನನ್ನ ಯಜಮಾನರು ಹಾಡಲು ಬರುತ್ತಿದ್ದ ರಸಿಕರಾಗಿದ್ದರೆ ಎಷ್ಟು ಚೆನ್ನು! ಅಟ್ಟದ ಬಾಲ್ಕನಿಯಲ್ಲಿ, ಸೊಂಪಾದ ಬೆಳುದಿಂಗಳ ದಿವಸ, ಎದೆಗೆ ಆತು ಕೂತು, ನನ್ನವನ ಹೃದಯ ವೀಣೆಯನ್ನು ಮೀಟುತ್ತಿದ್ದೇನೆ! ಇಂಪಾಗಿ ಎಳೆಯಾಗಿ, ಅವರು ಹಾಡುತ್ತಿದ್ದಾರೆ. ಸ್ವತಃ ಬೆಳ್ದಿಂಗಳೇ ಹಿನ್ನೆಲೆಯಲ್ಲಿ ಲಾಸ್ಯವಾಡುತ್ತಿದೆ. ನಾನು ಹಾಗೇ ನಿದ್ರೆ ಹೋಗುತ್ತಿದ್ದೇನೆ. ಅಹ್ಹಾ!

ಥೂ, ಮತ್ತೆ ಅವರ ಕಡೆ ನೋಡುವ........ಈ ಪ್ರವೃತ್ತಿ ಬೇಡವೆಂದು, ಎದುರಿಗಿನ ಜಾಗದಲ್ಲಿ ಕೂಡ್ರಬೇಕೆಂದು ಮಾಡಿದೆ. ಸುದೈವದಿಂದ ಅಲ್ಲಿಯೊಬ್ಬ ಹಳ್ಳಿಯಾಕೆ ಕುಳಿತಿದ್ದಳು. ಆಕೆ ಕೂಸಿನ ತಾಯಿ ಕಿಟಿಕಿಯ ಗಾಳಿ ಕೂಸಿಗೆ ಬಡಿಯುವುದೆಂದು, ಆಕೆ ನಾ ಕೇಳಿದ ಕೂಡಲೇ ಆ ಜಾಗ ಬಿಟ್ಟಿದ್ದಳು. ಅಲ್ಲಿ ಕುಳಿತಮೇಲೆ ಈ ಪಟ್ಟು ನೇರವಾಗಿ ಅವರ ಮುಖ ಕಾಣುವದಿಲ್ಲವಲ್ಲ ಎಂದು ಖಚಿತ ಮಾಡಿಕೊಂಡು ಪುಸ್ತಕದಲ್ಲಿ ಮನಸ್ಸು ಹಾಕಿದೆ. ಓದಿದಂತೆ ಕಾದಂಬರಿ ನನ್ನ ಮನಸ್ಸನ್ನು ಹಿಡಿಯಿತು.

ಅರುಣೋದಯವಾಗತೊಡಗಿದಾಗ, ಗಾಡಿಯು ಕುಡಚಿಯನ್ನು ಬಿಡಲಿತ್ತು.

ಸುರೇಶನು ಎದ್ದು ಕೆಳಗಿಳಿದು ಬಂದಾಗಲೇ ನಾನು ಪುಸ್ತಕಬಿಟ್ಟು ಮನಸ್ಸನ್ನು ಹೊರತೆಗೆದೆ. ಅವನು ಎದ್ದವನೆ ನನ್ನ ಹತ್ತಿರ ಬಂದು ಕುಳಿತು ಅವರ ವಿಷಯವಾಗಿ ವಿವರಗಳನ್ನು ಕೇಳಿದನು. "ಮಲಗಿ ಎಷ್ಟೊತ್ತಾತು?" ಎಂದನು. ವಿರಜದಿಂದ ಮಲಗಿದ್ದಾರೆಂದು ಹೇಳಿದೆ. ಕಾದಂಬರಿಯ ಕಡೆಗೇ ಲಕ್ಷ್ಯವಿದ್ದುದರಿಂದ, ನಾನು ಹೆಚ್ಚು ಅವನೊಡನೆ ಮಾತನಾಡಲಿಲ್ಲ.

ಬಹಳಷ್ಟು ಜನ ಇಳಿಯುವ ತಯಾರಿಯಲ್ಲಿದ್ದುದು ಕಂಡು ಬಂತು. ಸುರೇಶನು 'ಅಕ್ಕಾ, ಬೆಳಗಾಂವಿ ಬಂತು' ಎಂದನು. ಆ ಮೇಲೆ ಒಂದೆರಡು

ನಿಮಿಷ ತಡೆದು, "ಸ್ಟೇಶನ್ನ ಬಂತಂದ್ರ ಅವರ್ನ ಎಬ್ಬಿಸೋಣಂತ. ಚಹಾ ಕುಡಿಯೋಣs ಮೂರೂ ಮಂದಿ ಕೂಡಿ?" ಎಂದು ಹೇಳಿದ. ಹೂಂ ಎಂದೆ. ಮತ್ತೆ ಕೆಲ ನಿಮಿಷ ತಡೆದು ಸುರೇಶನು "ಅವರ ಹೆಸರು ಕೇಳ್ಳಿಕ್ಕೆ ಮರೀತು ನೋಡು ನನಗ, ನೀ ಏನರೆ ಕೇಳಿದೆನು?" ಎಂದನು.

ಅವನ ಮಾತಿಗೆ ನಗೆ ಬಂತು. "ನಾ ಏನ ಕೇಳ್ಕೊಬ್ಯೇ ಅವರ ಹೆಸರು?" ಎಂದೆ.

ಬೆಳಗಾಂವಿ ಬಂತು. ಪುಣೆಯಷ್ಟೇ ಗದ್ದಲವಿದೆಯೆಂದೆನಿಸಿತು. ಅವರಿಗೆ ಪೂರ್ಣ ನಿದ್ದೆ ಹತ್ತಿತ್ತು. ಜನದ ಗದ್ದಲಕ್ಕೆ ಅವರೇನು ಏಳಲಿಲ್ಲ. ಸುರೇಶನು ಕಿಟಕಿಯಿಂದ ಇಳಿಯಲು ತಯಾರಾಗಿ "ಅಕ್ಕಾ, ನೀ ಅವರ್ನ ಎಬ್ಬಿಸು. ನಾ ಮಾರಿ ತೊಳಕೊಂಡು ಮೂರು ಚಹಾ ತಗೊಂಡು ಬರ್ತೀನಿ" ಎಂದು, ನನ್ನ ಮಾತಿಗೆ ಉತ್ತರ ಕಾಯದೆ ಕೆಳಗೆ ಜಿಗಿದನು....ಶೀರ ಹುಚ್ಚು ಹುಡುಗ. ಏನೇನೂ ಗೊತ್ತಿಲ್ಲ. ನಾನು ಹೇಗೆ ಎಬ್ಬಿಸುವುದು ಎಂಬ ಕಲ್ಪನೆಯಿರಬೇಡವೆ?

ಅವರ ಕಡೆಗೊಮ್ಮೆ ನೋಡಿದೆ. ಸುಖವಾಗಿ ನಿದ್ರೆಮಾಡುತ್ತಿದ್ದರು ನಾನು ಎಬ್ಬಿಸಬೇಕು ಅವರನ್ನು ಎಂದು ಈಗ ಮನಸ್ಸಾಯಿತು. ಹಿಂಜರಿಯುವ ನಾಲಿಗೆಯನ್ನು ಯಾವದೋ ಶಕ್ತಿ ಮಾತನಾಡಿಸಲು ಎಳೆಯುತ್ತಿತ್ತು. ಕೊನೆಗೆ ಎಡಬಲಕ್ಕೆ ಒಮ್ಮೆ ನೋಡಿ, ಅವರ ತೋಳನ್ನು ತುಸುವೆ ಅಂದರೆ ಅಷ್ಟು ತುಸುವೆ ಅಲುಗಿಸಿ "ಏಳ್ತಿರೇನು" ಎಂದೆ. ಎಚ್ಚತ್ತಿದ್ದವರಿಗೂ ನನ್ನ ಮಾತು ಕೇಳಿಸಿತೊ ಇಲ್ಲವೊ ಎನ್ನುವಷ್ಟು ಹೌರಗಿತ್ತು ನನ್ನ ದನಿ.

"ಬೆಳಗಾಂವಿ ಬಂತು. ಏಳ್ತೀರೇನು?" ಎಂದು ಸ್ವಲ್ಪ ಗಟ್ಟಿಯಾಗಿ ಕೂಡಲೇ ನುಡಿದೆ. ನಿದ್ದೆಯಲ್ಲೇ 'ಹೂ' ಕಾರ; ಬೇರೆ ಮಾತಿಲ್ಲ. ಅಷ್ಟು ನಿದ್ದೆ.

ಇಳಿಯುವವರು ಹೆಚ್ಚಾಗಿ ಇಳಿದಿದ್ದರು. ಹತ್ತುವವರ ಏರಾಟ ಜೋರಾಗಿತ್ತು. ಹತ್ತಿದ ಜನ ಸಾಮಾನನ್ನಿಡುವುದರಲ್ಲೂ ತಮಗೆ ಈ ಜಾಗ ನೋಡಿಕೊಳ್ಳುವದರಲ್ಲೂ ತೊಡಗಿದ್ದಿತು. ಅಷ್ಟರಲ್ಲಿ ಸುರೇಶನು ಬಂದನು. ಅವನ ಹಿಂದೆ, ಒಬ್ಬ ಮಾಣಿಯು ತಂದ ಟ್ರೇಯಲ್ಲಿ ಮೂರು ಚಹ, ಒಂದು ಗ್ಲಾಸು ನೀರು.

"ಎಬ್ಬಿಸಲಿಲ್ಲ ಹೌದಲ್ಲೊ. ಬರೇ ನಿಂದೊಂದು ನೀ ನೋಡಿಕೋಳಿ" ಎಂದು ಮುಂತಾಗಿ ನನ್ನ ಮೇಲೆ ಅವನ ಹರಿದಾಟ!

ಅವನು ನನಗಿಂತ ಜೋರಿನಲ್ಲಿ ಹೇಳಿದ ದನಿಗೆ ಅವರು ಎದ್ದರು. ಅಲ್ಲಿ ಇಲ್ಲಿ ನೋಡಿದರು. ನೀರು ಕೊಡಹೇಳಿದರು. ಬಾಯಲ್ಲಿ ಅಷ್ಟು ಗುಳು ಗುಳು ಮಾಡಿ ಚಹ ಕುಡಿಯತೊಡಗಿದರು. ನಮ್ಮದು ಕುಡಿಯುವದು ಮುಗಿದಿತ್ತು. ಕಪ್ಪುಬಸಿ ಕೊಡಲೆಂದು ಅವರು ಕೈಚಾಚಿದಾಗ ಅದರ ಎದುರೇ ನಾನಿದ್ದೆ. ಇನ್ನೇನು—ಎಂದು ನಾ ಇಸಕೊಳ್ಳಲು ಕೈಮುಂದೆ ಮಾಡಿದೆ. 'ಸರಿ' ಎಂದವರೆ, ತಾವೆ ಆ ಹುಡುಗನ ಕೈಯಲ್ಲಿತ್ತರು. ಅವರು ಪಾಕೀಟನ್ನು ತೆಗೆಯಹೋಗಲು ಸುರೇಶನು 'ಕೊಟ್ಟೇನಿ' ಎಂದನು.

ಅವರ ನಿದ್ದೆ ಮುಗಿದಿಲ್ಲವೆಂದು ನನಗನಿಸಿತ. ಬೆಳಗಾಗುವ ವರೆಗೂ ಅವರಿಗೆ ಮಲಗಗೊಡಲಿಲ್ಲ. ಅಲ್ಲದೆ ಈಗ ಸುಮ್ಮನೆ ಎಬ್ಬಿಸಿ ಚಹಕುಡಿಸಿ ಇನ್ನು ಅವರ ನಿದ್ದೆ ಹಾಳುಮಾಡಿದಹಾಂಗಾಯಿತಲ್ಲ ಎಂದು ಮರುಗಿದೆ. ಇನ್ನೇನಾದರೂ ಅವರಿಗೆ ಹೇಳಬೇಕು ಎಂದುಕೊಂಡು, ಯೋಚಿಸುತ್ತಿರು ವಾಗಲೇ ಸುರೇಶನು ಮಲಗಿದ ಜಾಗವನ್ನು ತೆರವುಮಾಡಿಕೊಂಡು ಮೇಲೆ ಹತ್ತಿದರು. ಅಂತಹ ನಿದ್ದೆಗಣ್ಣಿನಲ್ಲಿಯೂ ಸಿಗರೇಟನ್ನು ಮರೆತಿರಲಿಲ್ಲ.

ಲೋಂಡಾ ಬಂದಿತು. ಈಗ ಅವರನ್ನು ಎಬ್ಬಿಸಕೂಡದು ನಿದ್ದೆ ಮಾಡಲಿ ಎಂದು ನಿಶ್ಚಯಿಸಿಕೊಂಡೆ. ಸುರೇಶನು ಅವರನ್ನು ಏಳಿಸುವ ಆಶಯ ವ್ಯಕ್ತಮಾಡಿದಾಗ ನಾನು ತಡೆದೆನು. ನಮ್ಮ ಹೊಟ್ಟೆ ಹಸಿದಿತ್ತಾ ದ್ದರಿಂದ, ಒಂದಿಷ್ಟು ತಿಂದೆವು. ಅವರಿಗಾಗಿ ನಾಲ್ಕು ಬಾಳೆಹಣ್ಣು ತಂದೆವು.

ಅವರಾಗಿ ಎದ್ದುದು ಅಳಣಾವರಕ್ಕೆ ಹೋಗಿ ಮುಖತೊಳೆದು ಬಂದು, ಬಾಳೆಹಣ್ಣು ತಿಂದಾಯಿತು.

"ಅಕ್ಕಾ ನೋಡ್ರಿ, ಆರಾಮ ಜಾಗಾ ಮಾಡಿಕೊಟ್ರೆ ಮಲಗಿಬಿಟ್ಟಳು. ಮುಂದಿ ನಿದ್ದೆಗೆಡತಾರ ಅನ್ನೊ ಕಾಳಜಿ ಇದ್ರ ಸೈ ಆಕಿಗೆ" ಎಂದು ಸುರೇಶನು ನುಡಿದನು.

"ಮಗನೇ, ಇನ್ನ ೨-೩ ತಾಸು ನನಗ ನಿದ್ದೀನೇ ಹತ್ತೂದುಲ್ಲ ಅಂದಾವಾ, ನೀರಾ ಸ್ಟೇಶನ್ನು ಬಿಡಬಿಡತನ್ಕ ಗುರಕೆ ಹೊಡದೆಪಾ ನೀ ಯಾಕ ಏಳ್ಳಿಲ್ಲೊ. ಇನ್ನೂ ಅವರು ಮಿರಜಕ್ಕರೆ ಎದ್ದರು. ನೀ ಎಲ್ಲೆ, ಬೆಳತನಕ ನಿದ್ದಿಮಾಡೀದಿ" ಎಂದರು. ಸುರೇಶನು ಮಾತಿಲ್ಲದೆ ಸುಮ್ಮನಾಗಬೇಕಾ ಯಿತು. ಅದನ್ನು ಕಂಡು, ಅವನನ್ನು ನಗಿಸುವ ಆಶಯದಿಂದಲೊ ಏನೊ

" ಅದಕ್ಕs ಆದ ತಪ್ಪು ಮುಚಿಕೋಳಿಕ್ಕೆಂದು, ಬೆಳಗಾಂವ್ಯಾಗ ಚಹಾ, ಇಲ್ಲೆ ಬಾಳಿಹಣ್ಣು ಕೊಟ್ಟೆಯಲ್ಲ!" ಎಂದರು ಸುರೇಶನ ಜೊತೆಗೆ ನಾವೂ ನಕ್ಕೆವು.

ಹೀಗೆಯೇ ಆ ಮಾತು ಆಡುತ್ತಿರುವಾಗ ಸುರೇಶನು, ನನಗೆ ಬೈದವ ತಾನು ಅವರ ಹೆಸರನ್ನೇಕೆ ಕೇಳಲೊಲ್ಲ ಎನಿಸಿತು. ಅವರಿಗೆ ಗೊತ್ತಾಗದಂತೆ ಸುರೇಶನಿಗೆ ತಿಳಿಸಬೇಕೆಂದು, ಆ ಸಮಯ ಕಾಯುವದರಲ್ಲಿ ನಾನು ಅವರ ಮಾತಿನಲ್ಲಿ ತೊಡಗಲಿಲ್ಲ. ಕೊನೆಗೊಮ್ಮೆ ಅವನ ಕಿವಿಯಲ್ಲಿ " ಹೆಸರು " ಎಂದೆನು.

" ಅಂದ್ಹಂಗ ನಿಮ್ಮ ಹೆಸರs ಕೇಳ್ಳಿಕ್ಕೆ ಮರತುಹೋಗಿತ್ತು. ನಿಮ್ಮ ನೆನವು ಇರಲಿಲ್ಲ" ಎಂದನು.

ನಾನು ಸುರೇಶನ ಕಿವಿಯಲ್ಲಿ ಹೇಳಿದುದರ ಸುಳಿವು ಅವರಿಗೆ ಹತ್ತಿರ ಬೇಕು ಎಂದು ಎನಿಸಿತ್ತು. ಈಗ ನಾನಂದ ಕೂಡಲೇ ಸುರೇಶನು ಕೇಳಿದು ದರ ಫಲವಾಗಿ, ಅವರಿಗೆ ನಾನೇ ಹೆಸರು ಕೇಳಲಿಕ್ಕೆ ಹೇಳಿಕೊಟ್ಟೆ ಎಂಬ ಕಲ್ಪನೆ ಬಂದು ನನಗೆ ಬಹಳಷ್ಟು ಸಂಕೋಚವಾಯಿತು. ಹೀಗಾಗ ಬಾರ ದಿತ್ತು ಎಂದು ಪರಿಸ್ಥಿತಿಯ ಮೇಲೆ ಬೇಸರಗೊಂಡೆನು.

" ನನ್ನ ಹೆಸರs? ವರದರಾಜ "

ಧಾರವಾಡ ಸಮೀಪಿಸ ಹತ್ತಿದುದರಿಂದ ಸಾಮಾನನ್ನು ಸವರಿಸುವಲ್ಲಿ ತೊಡಗಬೇಕಾಯಿತು. ಸುರೇಶನು ಹೇಳಿದ " ನಮ್ಮ ಅಪ್ಪ ಬಂದಿರತಾರ ಸ್ಟೇಶನಕ್ಕ. ನಿಮ್ಮ ಗುತಾರ್ ಮಾಡಿಕೊಡತೇನಿ" " ಆಗಲಿ " ಎಂದರವರು.

ಇನ್ನು ಬಿಟ್ಟುಹೋಗಬೇಕಾದ ಪ್ರಸಂಗವನ್ನು ನೆನೆದು ಇರಬಹುದೆ-ಮನಸ್ಸು ಈಗ ಬಹಳಷ್ಟು ಉದ್ವಿಗ್ನವಾಯಿತು. ಯಾಕಾಗಬೇಕು? ಅವರೇನು ಸಮೀಪದ ಸಂಬಂಧಿಕರೇ ? ವಿಶೇಷ ಪರಿಚಯದವರೇ ? ಇನ್ನು ಮುಂದಕ್ಕೆ ನಮ್ಮವರಾಗುವವರೆ ? ಏನೂ ಇಲ್ಲ. ಯಾಕ ಬೇಗುದಿಗೊಳ್ಳುತ್ತಿದೆ ಈ ಮನಸ್ಸು ಎಂದುಕೊಂಡೆ. ನಿನ್ನೆಯ ಅವರ ಎದೆಗಾರಿಕೆಯನ್ನು ನೆನಸಿಕೊಳ್ಳು ತ್ತಿದ್ದೆ. ಅವರ ಸ್ವಭಾವದಲ್ಲಿರುವ ಮಾರ್ದವತೆಯನ್ನು ಆಗಾಗ ಧೇನಿಸಿ ಕೊಳ್ಳುತ್ತಿದ್ದೆ. ಇದು ಒಂದು ಕ್ಷಣದಲ್ಲೇ, ಅವರು ಎಷ್ಟು ಕುರೂಪಿಯಾಗಿ ದ್ದಾರೆ ಎಂಬ ವಿಚಾರ ಬಂದು, ಚಾಟಿಯಿಂದ ಹೇರಿದಂತಾಯಿತು. ' ಅವರು

ರೂಪವಂತರಿರಬಾರದಿತ್ತೆ ? ಇದ್ದಿದ್ದರೆ....? ಅವರು ಎಷ್ಟು ದೊಡ್ಡವರು! ಎಷ್ಟು ಒಳ್ಳೆಯವರು!....ಆದರೆ ಕುರೂಪ!' ಕರುಳನ್ನು ನಿರಿನಿರಿಯಾಗಿ ಹಿಂಡಿದಷ್ಟು ವೇದನೆ ಹೆಚ್ಚಾಯಿತು. 'ಏನು ಮಾಡಲಿ ? ಏನು ಮಾಡಲಿ'? ಎಂದು ಕೊಳ್ಳುವೆ.

"ಏ, ಎತ್ಲಾಗ ನೋಡತಿ ? ಧಾರವಾಡ ಬಂತು" ಎಂದನು. ಸುರೇಶ ತಾನು ಕಿಟಕಿಯಿಂದ ಒಮ್ಮೆ ಜಿಗಿದು ತಂದೆಯನ್ನು ಹುಡುಕಹೋದನು. ಜನರೊಂದಿಗೆ ನಾನೂ ಇಳಿದೆ. ನಮ್ಮ ಸಾಮಾನನ್ನು ತಾವೇ ಇಳಿಸಿಕೊಡ ಲೆಂದಿದ್ದರು. ಅಷ್ಟರಲ್ಲಿ ಒಬ್ಬ ಕೂಲಿಯವನು ಕಾಣಲು ಅವನನ್ನು ಕೈಮಾಡಿ ಕರೆದು ಸಾಮಾನನ್ನು ಇಳಿಸಿದರು. ಆದರೆ ಈ ಕೊನೆಯ ನೆರವು ಏಕೊ ಬೇಡವಾಗಿತ್ತು.

ಸುರೇಶನು ತಂದೆಯನ್ನು ಕರತರಲಿಲ್ಲ, ಬಂದಿಲ್ಲವೆಂದು ಹೇಳಿದನು. ಅದಕಾಗಿ ತನ್ನ ವ್ಯಸನವನ್ನು ವ್ಯಕ್ತಪಡಿಸಿದನು. ಹೋಗಿ ಬರುತ್ತೇವೆಂದು ಇಬ್ಬರೂ ಕೈಮುಗಿದೆವು. ಸುರೇಶನು ಮತ್ತೆ ತನ್ನ ತುಂಬು ಹೊಗಳಿಕೆ ಯನ್ನು ತೋರಿದನು. 'ನೀವಿರದಿದ್ದರೆ ನಾವಿಷ್ಟು ಸುಲಭವಾಗಿ ಊರು ಮುಟ್ಟುತ್ತಲೆ ಇರಲಿಲ್ಲ' ಎಂದೂ ನಾನೂ ಹೇಳಬೇಕು ಎಂದುಕೊಂಡು 'ನೀವಿರದಿದ್ದರೆ........ಮುಂದೆ ನಾಚಿಕೆಯಿಂದಲೊ ಬಿಗುಮಾನದಿಂದಲೊ ಮಾತು ಬರಲಿಲ್ಲ. "ನಿಮಗ ಬಹಳ ತ್ರಾಸಕೊಟ್ಹಂಗ ಆತು" ಎಂದು ಅಂದೆ. "ಸುಮ್ನು ಹೋಗ್ರಿನ್ನ" ಎಂದರು.

ಕೂಲಿಯವನು ಮುಂದೆ ನಡೆದೇ ಬಿಟ್ಟಿದುದರಿಂದ, ನಾವು ಹೊರಟೆವು. ಮತ್ತೊಮ್ಮೆ ಅವರ ಕಡೆ ನೋಡಿ, ಹೋಗಿಬರುತ್ತೇವೆ ಎಂದೆವು. ಟಿಕೀಟು ಕೊಟ್ಟು ಹೋಗುವಲ್ಲಿಗೆ ಬಂದೆವು ಗಾರ್ಡನ ಸೀಟಿಯಾಯಿತು. ಸುರೇಶನು ಅಷ್ಟರಲ್ಲಿ "ಮರ್ತೇಹೋತು ಅಕ್ಕಾ, ಅವರ ಪತ್ತೆ ತೊಗೊಂಡು ಬರ್ತೇನಿ." ಎಂದು ಓಡಿದ. ಗಾಡಿ ಬಿಡುವದರಲ್ಲಿತ್ತು. ನಾನು ಸಾಮಾನಿನ ಹತ್ತಿರವೇ ಇದ್ದೆ. ತಮ್ಮ ಕಿಸೆಗಳನ್ನು ನೋಡಿಕೊಂಡರು. ಬೇಕಾದುದು ಸಿಗಲಿಲ್ಲ ಸುರೇಶನು ಅವರಿಗೆ ನಮ್ಮ ಮನೆಯ ವಿಳಾಸ ಹೇಳುವಂತೆ ಕಂಡಿತು. ಗಾಡಿ ಬಿಟ್ಟಿತು. ಸುರೇಶನು ಉತ್ಸಾಹದಿಂದ ಕರವಸ್ತ್ರವನ್ನು ಎತ್ತಿ ಹಿಡಿದಿದ್ದ ಅವರೂ ಕಣ್ಮರೆಯಾಗುವ ವರೆಗೆ ಸುರೇಶನ ಕಡೆ ಕೈಮಾಡುತ್ತಿದ್ದರು.

ಅಯ್ಯೋ ನನಗೆ ಅವರ ಹತ್ತಿರ ನಿಂತು ಈ ರೀತಿ ಅವರನ್ನು ಬೀಳ್ಕೊಡುವು ದಾಗಲಿಲ್ಲ ಎಂದು ಒದ್ದಾಡಿದೆ. ಸುರೇಶನಮೇಲೆ ಮನಸ್ಸಿನಲ್ಲಿ ಬೇಸರಗೊಂಡೆ.

ನಾವು ಟಾಂಗಾದಲ್ಲಿ ಸಾಮಾನನ್ನು ಹಾಕಿಸುವುದಕ್ಕೂ ತಂದೆಯು ಕೇಕುತ್ತ ಬರುವುದಕ್ಕೂ ಸಮವಾಯಿತು. ಮನೆಯಲ್ಲಿ ಊಟ ತಡವಾಯಿತಂತೆ. ಎಷ್ಟಿದ್ದರೂ ಅದು ಪೂರ್ಣ ನಮ್ಮ ಮನೆಯಲ್ಲವಲ್ಲ. ಕಕ್ಕಿ ಯಾವಾಗ ಊಟಕ್ಕೆ ಹಾಕಿ ಕಳಿಸುತ್ತಾಳೆಯೋ ಆಗ ಅವನು ಬರಬೇಕಷ್ಟೆ. ಅವ್ವ ಇದ್ದಿದ್ದರೆ ಹೀಗಾಗುತ್ತಿತ್ತೆ? ಮಕ್ಕಳು ಬರುತ್ತಾರೆಂದು ಅವಳು ದಾರಿ ಕಾಯದೆ ಇರುತ್ತಿದ್ದಳೆ?

ಅವನ ಮಾತಿನಿಂದ ನನಗೆ ಇದೇನೇನೊ ನೆನಪಾಯಿತು. ಮೂವರೂ ಟಾಂಗೆಯಲ್ಲಿ ಕುಳಿತು ನಡೆದೆವು. 'ಗಾಡಿಯಲ್ಲಿ ಪ್ರವಾಸ ಆರಾಮ ಆತೆ?' ಎಂದು ಆತನು ಕೇಳುವುದೊಂದೆ ತಡ, ಇವರ ಶೌರ್ಯದ ಕಥನಕ್ಕೆ ಪ್ರಾರಂಭ ವಾಯಿತು. ತಂದೆಯು ಬೆರಗುವಡೆದು ಕೇಳುತ್ತಿದ್ದನು.

"ಅವರಿಗೆ ನಿನ್ನ ಭೆಟ್ಟಿ ಮಾಡಿಸಬೇಕು ಅಂತ, ನಿನ್ನ ಸ್ಟೇಶನ್ನ ವ್ಯಾಲಿ ಬಹಳ ಹುಡುಕಿದೆ. ನೀ ಲಗು ಬರಲೇ ಇಲ್ಲ. ಏನು ಮಾಡೋದು?" ಎಂದು ಸುರೇಶನು ಹಳಹಳಿಸಿದನು.

"ಯಾರವರು? ಹೆಸರಾದರೂ ಏನು? ಯಾವೂರವರಂತೆ?"

"ಹೆಸರು ವರದರಾಜನಂತೆ. ಹುಬ್ಬಳ್ಳಿಯವರು ಅಂತ ಕಾಣ್ತದ. ಅವರ ಪೂರ್ಣ ಪತ್ತೆ ಕೇಳ್ಳಿಕ್ಕೆ ಹೋಗಿದ್ದೆ. 'ನನಗ ಮನೀನೇ ಇಲ್ಲೊ' ಅಂತ ಹಾರಿಸಿಕೊಂಡು ಬಿಟ್ರು. ಗಾಡಿ ಬಿಡಲಿಕ್ಕೆ ಹತ್ತಿತು. ಕೊನೆಗೆ ನಮ್ಮ ಮನೀ ಪತ್ತೆ ಹೇಳಿದೆ. ನನ್ನ ಹೆಸರ್ಲೆ ಪತ್ರ ಹಾಕತಾರಂತ."

ನಡುವೆ ನಿಂತಿದ್ದ ನಿನ್ನಿನ ಕಥೆ ಮತ್ತೆ ಸುರೇಶನಿಂದ ಮುಂದುವರಿಯಿತು. ನಾನೂ ಹುರುಪುಗೊಂಡು ಒಂದೆರಡು ಮಾತು ಸೇರಿಸುತ್ತಿದ್ದೆ. ಅವರಿಗೆ ನಿದ್ದೆಮಾಡಲೂ ಕೊಡಲಿಲ್ಲವೆಂದು ನನ್ನ ಮೇಲೆ ಸುರೇಶನ ಛಾಡಿಯಾಯಿತು. 'ನಾಯೇನು ಮಾಡಲಿ. ನಿದ್ದೆಹತ್ತಿ ಬಿಟ್ಟಿತು.' ಎನ್ನುತ್ತ ಅವರು ಈ ಬಗ್ಗೆ ಸುರೇಶನಿಗೆ ಹೇಳಿದ ಉತ್ತರವನ್ನು ಹೇಳಹೋದೆ. ಅದೇಕೋ ಸುರುವಿಗೆ ಕೇಳುತ್ತಿದ್ದ ಆತನ ಆಸ್ಥೆ ಬರಬರುತ್ತ ಕಡಿಮೆಯಾಗಿ, ನನ್ನ ಕೊನೆಮಾತು ಅವಗೆ ಸರಿಬರಲಿಲ್ಲವೆಂಬುದನ್ನು ಕಂಡುಕೊಂಡು ನಾನು ಸುಮ್ಮನಾದೆ.

ಮನೆಯ ಮುಂದೆ ಟಾಂಗಾ ನಿಂತಿತು. ನಂದೆಯು "ಅಕ್ಕಾ ಬಂದ್ಲು, ಅಣ್ಣ ಬಂದಾ" ಎನ್ನುತ್ತಾ ಕೈತಟ್ಟಿ ನಮ್ಮೆಡೆಗೆ ಬಂದಳು. ಅವಳ ಕೈಹಿಡಿದು ಕೊಂಡೇ ಒಳಕ್ಕೆ ಹೋದೆವು. ಕಕ್ಕಿಗೆ ನಮಸಾರ ಮಾಡಿಯಾಯಿತು. "ಊಟಕ್ಕ ಬರ್ರಿ ಲಗೂನ, ಹೊತ್ತು ಬಹಳು ಆಗೇದ" ಎಂದಳ. ಬಟ್ಟೆ ಬದಲಿಸಲು ಕೋಣೆಗೆ ಹೋದೆ.

ನಂದೆಗೆ ಸರಸಕ್ಕನ ಸುದ್ದಿ ಹೇಳಿದೆ. 'ನಿನ್ನೆ ಬರಬೇಕಾರ ಭಾಳ ಭಾಳ ಫಜೀತಿ ಆತವಾ' ಎಂದು ನನ್ನ ಮಾತು ಮುಂದರಿಸಲಿದ್ದೆ. ನಂದೆ ನಡುವೆಯೇ ಬಾಯಿ ಹಾಕಿ "ಅಕ್ಕಾ ಇಷ್ಟ್ಯಾಕ ಕೆಂಪಗಾಗೇದ ನಿನ್ನ ಮಾರಿ ?" ಎಂದು ಸರಳವಾಗಿ ಕೇಳಿದಳು. ಆಂ ಎಂದೆ, ಕನ್ನಡಿ ನೋಡಿದೆ. ಹೌದು ನನಗೂ ಎನಿಸಿತು. ಗಲ್ಲಗಳೆರಡೂ ಕಿತ್ತಳೆಯ ಹಣ್ಣಿನಂತೆ ತಿಳಿಗೆಂಪಾಗಿವೆ. ಹೌದೌದು ಎಂದು ಉಲ್ಲಸಿತ ಮನಸ್ಸು ತಾಳ ಹಾಕಿತು. ಅಷ್ಟರಲ್ಲಿ ಸುರೇಶನೂ, ಅಪ್ಪನೂ ಒಳಕ್ಕೆ ಬಂದರು. ನಂದೆಯು ಅಪ್ಪನ ಎದರೂ ಆ ಮಾತನ್ನು ಹೇಳಿದಳು.

"ಹೌದ ? ಆಗಿರಬೇಕು. ಈಗ ಉರಿಉರಿ ಬಿಸಲಾಗಿಂದ ಬಂದಾರ" ಎಂದನಾತ. ಎಂಟು ವರ್ಷದ ಮಗು—ಅವಳಿಗೆ ಈ ಉತ್ತರದಿಂದ ಸಮಾಧಾನ ವಾಗಿರಬೇಕು. ಸುರೇಶನ ಮುಖವನ್ನು ನೋಡಿ, "ಹೌದು. ಅವನ ಮಾರೀನೂ ಕೆಂಪಾಗೇದ" ಎಂದು ಮಾತನ್ನು ಅಲ್ಲಿಗೇ ಮುಗಿಸಿದಳು.

ಕಕ್ಕಿಯು ಹೇಳುತ್ತಿದ್ದಳು. "ಇವತ್ತೇನು ತೋರಿಸಲಿಕ್ಕೆ ಕರಕೊಂಡು ಹೋಗೋದು ಬ್ಯಾಡಾ. ದಣಕೊಂಡು ಬಂದಾಳ. ನಿದ್ದಿ ಬ್ಯಾರೇ ಇಲ್ಲ."

ಅಪ್ಪನು ದನಿಯೆಳೆದನು. "ಮತ್ತೇನಿಲ್ಲ. ಅವರು ಮತ್ತ ನೌಕರೀ ಮ್ಯಾಲೆ ಹೋಗೋವರಂತ ಅದಕ್ಕs ಅಲ್ಲ ಮತ್ತ ವಾಯಿರು ಕೊಟ್ಟು ಕರಿಸಿ ಕೊಂಡದ್ದು." ಆಮೇಲೆ ನನ್ನ ಕಡೆ ತಿರುಗಿ, "ಹೆಂಗವಾ ಮತ್ತ, ನೀ ನಾಳೆ ಮುಂಜಾನೆ ಹೋಗೋಣ ಅಂತಂದ್ರ, ಅವರಿಗೆ ಏನಂಬುದು ಕೇಳಿಕೊಂಡು ಬರತೇನಿ" ಎಂದನು. ನಾಯೇನು ಹೇಳಲಿ? "ಇವತ್ತೇ ಮುಗಿದು ಬಿಡಲಿ" ಎಂದೆ.

ಆಯಿತು ಊಟ, ಮಾತುಕತೆ ಮುಗಿಯುತ್ತಲೇ ನಾಲ್ಕು ಹೊಡೆಯು ಬಂದಿತು. ಸುರೇಶನಾಪರೂ ವಿಶ್ರಾಂತಿ ತೆಗೆದುಕೊಂಡಾನೆಂದರೆ ಇಲ್ಲ.

ಒಮ್ಮೆ ನಮ್ಮ ಮನೆಯ ಪುರೋಹಿತರಲ್ಲಿಗೆ ಹೋಗಿ, ಅವರಿಗೆ ಬರಲು ಹೇಳಿ ಬಂದ. ಇನ್ನೊಮ್ಮೆಗೆ ಟಾಂಗಾ ಮಾಡಿಕೊಂಡು ಬರಲು ಓಡಾಡಿದ.

ಆಗ ಐದು ಗಂಟೆಯಾಗಿರಬೇಕು. ನಾವು ಪ್ರವೇಶಿಸಿದ್ದು ಒಂದು ದೊಡ್ಡ ಹಳೆಯಕಾಲದ ಮಹಡಿಯಮನೆ. ಈ ಬಗೆಯಾಗಿ ನಾನು ಕಾಲಿರಿಸಿದ ಮನೆಗಳಲ್ಲಿ ಇದು ಇಷ್ಟನೆಯದೋ ಎಂದು ಹೇಳಬರುವಂತಿಲ್ಲ. ಬಾಗಿಲಲ್ಲಿ ನನ್ನ ಕಣ್ಣಿಗೆ ಬಿದ್ದವರು ಸುಮಾರು ಇಪ್ಪತ್ತೈದು ವರ್ಷದ ಒಬ್ಬಳು, ಮತ್ತು ನಂದೆಗಿಂತ ತುಸು ದೊಡ್ಡವಳಾದ ಓರ್ವ ಹುಡಿಗೆ. ನಾವು ಬಂದು ಕೂಡುತ್ತಲೂ ಒಬ್ಬ ಅಮ್ಮ ಬಂದು ಮಾತನಾಡಿಸಿದರು. ನಮ್ಮನ್ನು ಬರಮಾಡಿಕೊಂಡ ವಳೂ ಒಳಗೆ ಹೋದುದರಿಂದ, ನಾನು ಮೆಲ್ಲಗೆ ಇವರಾರೆಂದು ಶಕ್ಕಿಯನ್ನು ಕೇಳಿದೆ.

“ ಈಕಿನರತ ? ವರನ ಅಕ್ಕ ಇರಬೇಕವಾ. ·ತೌರುಮನಿಗೆಂತ ಬಂದಿದ್ದಾಳು. ಈಗೊಬ್ಬ ಅಮ್ಮ ಬಂದಿದ್ರಲ್ಲಾ, ವರನ ತಾಯಿ ಆಕಿ. ಗುಡಿ ಒಳಗ ಯಾವಾಗರೆ ಭೆಟ್ಟಿಯಾಗತಿರತಾರ”

“ ಮನೀ ಮಾತ್ರ ದೊಡ್ಡವಾಡೆ ಇದ್ಧಂಗದ ನೋಡು” ಎಂದೆ ನಾನು.

“ ಹೌದು ಇವರಪ್ಪ ಭಾರೀ ಶ್ರೀಮಂತ ಇದ್ದರಂತ. ಅವರು ಸ್ವತಃ ಕಟ್ಟಿಸಿದ್ದು. ಅವರು ಸಾಯೋತೆ, ಮಕ್ಕಳೆಲ್ಲಾ ಹಾಳುಮಾಡಲಿಕ್ಕೆ ಹತ್ಯಾವಂತ ಸುದ್ದ್ಯವಾ. ಹಿರೇಮಗಾ ಏನೊ ಒಬ್ಬಾವ ಇದ್ದಾನಂತ. ಅವನು ಎಲ್ಲಾ ಹಾಳುಮಾಡಿದವಾ ಅಂತ ಹೇಳತಿದ್ರು ”

“ ಮತ್ತ, ಅವರ ಹೇಣ್ತಿ ಕಾಣಸೂದುಲ್ಲಲ್ಲ ? ”

“ ಎಲ್ಲೀ ಹೇಣ್ತಿ, ಮದುವಿನೇ ಆಗಿಲ್ಲ. ನಾ ಇನ್ನೂ ಬ್ರಹ್ಮಚಾರಿ ಆಗಿ ಇರತೇನಿ ಅಂತ ಹೇಳಿ ಬಿಟ್ಟುಬಿಟ್ಟಾನ. ಮೂವತ್ತು ವರ್ಷದ ಮ್ಯಾಲೆ ಆಗ್ಯಾವಂತ, ಮೊನ್ನೆ ಮೊನ್ನೆ ಗದುಗಿನ್ಯಾಗ ಏನೋ ನೌಕರಿ ಹಿಡಿದಾನಂತ. ಇಷ್ಟದಿನಾ ಅಣ್ಣನ ಮದುವೀ ಬಿಟ್ಟು ತಮ್ಮಂದು ಹೆಂಗ ಮಾಡೋದು ಅಂತ ಬಿಟ್ಟಿದ್ರು. ಈಗ ಅವನ ದಾರೀನೇ ಬಿಟ್ಟಂಗಾಗೇದಂತ ಹೇಳಿ, ಇವಗೂ ಈಗೀಗ ಕನ್ಯಾಬರಲಿಕ್ಕೆ ಹತ್ಯಾವ....”

ನಮ್ಮ ಕಿವಿಮಾತು ನಿಲ್ಲಬೇಕಾಯಿತು. ಸಭಾಮಂಟಪಕ್ಕೆ ನನಗೆ ಬರಲು ಅಪ್ಪಣೆಯಾಯಿತು.

ಇಂಗ್ಲಿಷ ಸಾಲೆಯ ಮೆಟ್ಟಿಲು ಹತ್ತಿದರೇನಾಯಿತು. ತಲೆ ತಗ್ಗಿಸಿಕೊಂಡೇ ಹಾಸಿದ ಜಮಖಾನೆಯ ಪಟ್ಟೆಗಳನ್ನು ನೋಡುತ್ತ ಕುಳಿತೆ. ಪರೀಕ್ಷೆಗೆ ಮೊದಲಾಯಿತು. ನನ್ನ ಕೈಹಿಡಿಯಬಹುದಾದವನನ್ನು ನಾ ನೋಡಬೇಡವೆ? ಒಮ್ಮೆ ನೋಡಿದೆ.

ನನಗೆ ಆಶ್ಚರ್ಯವೂ ಆಯಿತು. ಖೇದವೂ ಆಯಿತು. ಅವನು ನೋಡುವುದಕ್ಕೆ ಚೆನ್ನಾಗಿರಲಿಲ್ಲ. ಆಕ್ಷಣವೆ ಗಾಡಿಯಲ್ಲಿ ಕಂಡ, ಅವರ ಮೂರ್ತಿ ಕಣ್ಣಮುಂದೆ ಸುಳಿಯಿತು. ಇವನೂ ಕುರೂಪಿ, ಅವರೂ ಕುರೂಪಿ! ಆದರೆ ಅವರದು ಸಶಕ್ತ ಮೈಕಟ್ಟು, ಇವನದು ತುಸು ಬಡಕಲು. ಒಂದು ಮಾತ್ರ, ಈತನು ಅವರಷ್ಟು ಕಪ್ಪಲ್ಲ.

ನನ್ನ ಮನಸ್ಸಿನಲ್ಲೊಂದು ವಿಚಾರ ತೇಲಿತು. ಅವರೇ ಕನ್ಯಾಪರೀಕ್ಷೆಗೆ ಕುಳಿತಂತೆಯೂ, ಅವರ ಕಡೆ ಹೀಗೇ ಒಮ್ಮೆ ನೋಡಿದಾಗ, ಗಾಡಿಯಲ್ಲಾದ ಪರಿಚಯದ ನಿಮಿತ್ತ, ಇಬ್ಬರೂ ಕಣ್ಣಲ್ಲಿ ನಕ್ಕಂತೆಯೂ ಭಾಸವಾಯಿತು! ಈ ವಿಚಾರ ಬಂತೋ ಇಲ್ಲವೊ ಮನಸ್ಸಿನ ಕಳವಳ ಹೆಚ್ಚಾಗತೊಡಗಿತು. ಅವರಷ್ಟು ಒಳ್ಳೆಯವರೂ, ಕರ್ತೃತ್ವಶಾಲಿಗಳೂ, ರಸಿಕರೂ ಇವರಿರಬಹುದೆ? ಇಲ್ಲ, ಇಲ್ಲ. ಅದು ಯಾರಿಗೂ ಸಾಧ್ಯವಾಗಲಾರದ ಮಾತೆಂಬುದರಲ್ಲಿ ಸಂಶಯವೇ ಇಲ್ಲ.

ಪುಸ್ತಕವಾಚನ, ಹೆಸರುದೆಸೆ ತುಸು ನಡೆದ ಮೇಲೆ, ಎಲ್ಲರೂ ಮುಂದೇನು ಮಾತಾಡಬೇಕು ಎಂಬುದನ್ನು ನೆನೆಸುತ್ತಾ ಸುಮ್ಮನಿದ್ದರು. ಕಡೆಗೆ ನಮ್ಮ ಕಾಕಾ ವರನನ್ನು ಕೇಳಿದರು. "ನೀವು ಇವತ್ತ ರಾತ್ರಿ ಶಿಗ್ಗಾವಿಗೆ ಹೋಗಲಿಕ್ಕೇಬೇಕೇನು? ಟೂರಿಂಗ ವರ್ಕ ಬಹಳ ಇರತ್ತದ ಕಾಣ್ತದ ನಿಮಗ"

"ಹಂಗೇನಿಲ್ಲ. ನಾಳೆ ಅಲ್ಲೊಂದು ಕರ್ನಾಟಕ ಸಂಘ ಸ್ಥಾಪನಾ ಮಾಡಬೇಕಂತ. ಹೋದಸಲ ಹೋದಾಗ ಮೀಟಿಂಗ ಕರದು ಬಂದಿದ್ದೆ. ಅದಕ್ಕ ಹೋಗೋದದ ಆತ್ವ ಕಚೇರಿ ಕೆಲಸನೂ ಅದ ಮತ್ತ"

ಮತ್ತೆ ಒಂದು ಕ್ಷಣ ಎಲ್ಲರೂ ಸುಮ್ಮನಿದ್ದರೂ ಈ ಪಟ್ಟು ನಮ್ಮ ಪುರೋಹಿತರ ದನಿ ಕೇಳಿತು. "ಹಂಗ ತಲಿ ತಗ್ಗಿಸಿಕೊಂಡು ಕೂಡಬ್ಯಾಡವಾ,

ತಂಗಿ. ಈಗಿನ ಕಾಲಕ್ಕ ಕನ್ಯಾನೂ ವರಾ ಪಾಸಮಾಡೋದೊಂದು ಅವಶ್ಯಕ ಆಗೇದ”

ನನಗೆ ಸಿಟ್ಟುಬಂತು. ನಮ್ಮ ಪುರೋಹಿತರ ಕಡೆಗೆ ಒಮ್ಮೆ ನೋಡಿದೆ. ಹಾಗೇ ವರನ ಕಡೆಗೂ ನೋಡಿದೆ. ಅವನೂ ಕಣ್ಣುಗಲಿಸಿದ್ದುದು ಕಂಡು ಬಂತು. ಏಕೆಂದರೆ ಅವನು ನನಗಿಂತ ಕುರೂಪಿಯಿರುವನೆಂದೇ ಪುರೋಹಿತರು ಸೂಚ್ಯವಾಗಿ ಹಾಗೆ ಹೇಳಿದರಲ್ಲವೆ? ಮಾತು ಸತ್ಯದಿಂದ ಕಟುವಾಗಿತ್ತು. ಹಾಗಾ ಅದಕ್ಕೆ ಬೇರೊಂದು ಸ್ವರೂಪ ಕೊಟ್ಟು, “ ನಮ್ಮ ಹುಡುಗಿ ಹಂಗೇ ನಿಲ್ಲೋಳ್ರಿ ” ಎಂದನು.

ಕೂತವರನು ನನಗೇ ಉದ್ದೇಶಿಸಿ ಹೇಳಿದಂತಾಯಿತು. ‘ ಹಂಗೇ ನಿಲ್ಲ. ನಾ ನಿನಗೆ ಸುಖವನ್ನೇ ಕೊಡಬಲ್ಲೆ. ನೋಡು, ನೀ ಗಾಡಿಯಲ್ಲಿ ಎಂತಹ ಗಂಡನು ಬೇಕು ಎಂದು ರೂಪಿಸಿಗೊಂಡಿದ್ದೆ ? ರೂಪವನ್ನು ಗಣಿಸುವದಿಲ್ಲ ಎಂದಿದ್ದೆಯಲ್ಲ. ಅಲ್ಲವೆ ?

‘ ಹೂಂ ’

‘ ನೋಡು ಮತ್ತೆ, ಗಾಡಿಯಲ್ಲಿ ನೀನು ಕಂಡ ಅವರಿಗಿಂತಲೂ ನಾ ಸುರೂಪಿಯಾಗಿಲ್ಲವೆ ? ’

‘ ಹೌದೌದು, ಯಾಕಿರಬಾರದು. ರೂಪವಂತರು ಒಳ್ಳೆಯವರಿರಲಿಕ್ಕಿಲ್ಲ. ಒಳ್ಳೆಯವರಾದವರು ರೂಪವಂತರಾಗಿರಲಿಕ್ಕಿಲ್ಲ. ಹಲ್ಲಿಲ್ಲದಲ್ಲಿ ಕಡಲೆ.... ಒಂದು ಇದ್ದಲ್ಲಿ ಇನ್ನೊಂದು ಇಲ್ಲದಿರುವದು ಜಗತ್ತಿನ ಧರ್ಮ....ಇವರಿಗೂ ಅವರಂತೆ ಕನ್ನಡ ಪ್ರೇಮವಿದೆ. ಅವರಂತೆಯೇ ಇವನೇಕಿರಬಾರದು ?

‘ ನಾ ಒಪ್ಪಬೇಕೇ ಇವರನ್ನು ?....ಇದೇನು, ಅವರೇ ಬಂದು ಕುಳಿತರು. ಆ ಜಾಗದಲ್ಲಿ ! ‘ ನೀ ಇವನನ್ನು ಮದುವೆ ಮಾಡಿಕೊಳ್ಳಲು ಒಪ್ಪಿಬಿಟ್ಟು, ಎಂದರಲ್ಲ....! ’

ನನ್ನ ತಲೆ ಆಗ ಸಿಡಿದುಹೋಗುವಷ್ಟು ದಿಗ್ಭ್ರಮೆಗೊಂಡಿತು. ಅರಿವೆನ್ನುವದು ಇರಲಿಲ್ಲ. ಉಡಿತುಂಬಲೆಂದು ಆ ಹೆಣ್ಣುಮಗಳು ಬಂದು ನಿಂತು, ‘ ಹಿಡಿ ತಂಗಿ ’ ಎಂದಾಗಲೇ ಎಚ್ಚರ. ನಮಸ್ಕಾರದ ಶಾಸ್ತ್ರ ಮುಗಿದ ಮೇಲೆ ಹೊರಗೆ ಬಂದೆ.

ಮನೆಗೆ ಹೊರಟೆವು. ಅಪ್ಪ ಮತ್ತು ಕಾಕಾ ಕುಳಿತ ಟಾಂಗಾ ನಮ್ಮ ಹಿಂದೆ ಬರುತ್ತಿತ್ತು.

ಅವರ ಓಣಿಯನ್ನು ದಾಟಿಬರುತ್ತಲೂ ಕಕ್ಕಿ ಹೇಳಿದಳು. "ಹುಡುಗ ಏನೂ ಛಂದಿಲ್ಲವಾ. ಅದಕ್ಕs ಇನ್ನೂವರಿಗೆ ಲಗ್ನ ಆಗಿಲ್ಲಾ. ನೋಡಿದರ ಆಸ್ತಿಯುದ, ದೊಡ್ಡ ಪಗಾರದ. ಹಾಂ, ಈಗ ನೆನಪಾಗತೈದ. ಆ ಕೌಜಲಗಿ ರಾಮಣ್ಣನ ಮಗಳು, 'ಇವನ್ನ ಏನಾದರೂ ಲಗ್ನ ಆಗುದುಲ್ಲ' ಅಂತ ಅವರಪ್ಪನ ಮುಂದ ಹಟಾ ಹಿಡಿದಳಂತ. 'ತಾ ನೋಡಿದರ ಏನಂಥಾ ಚೆಲುವಿ, ಗಂಡರಾಮಿನ್ನ ತರದು,' ಅಂತ ನಾನs ಬೈದಿದ್ದೆ. ಇವನ್ನ ನೋಡಿದರ ಆಕಿ ಅನ್ನೋದು ಖರೇನೋಡು, ಸುಳ್ಳಲ್ಲ....ಮಾರೀಮ್ಯಾಲೆ ಕಳೀಅಂಬೋದೆ ಇಲ್ಲ."

ನಂದೆಯು ತನ್ನ ಮಾತನ್ನು ಹೇಳಿದಳು "ಅದೇನವಾ ಆ ಹುಡುಗಿ ಎಂತಾ ಮಖೀನ ಅದ. ಮಾತಾಡಿಸಿ ಗುರ್ತಾಮಾಡಿಕೊಬೇಕಂತ ನಾನು ಕರೆದೆ. ಒಂದು ಸ್ವಲ್ಪು ಬಂದಂಗ ಮಾಡಿ ಅವರವ್ವನ ಹತ್ರ ಓಡಿ ಹೋತು.... ಎಷ್ಟು ಟುಮ್ ಟುಮ್ಮು ಇದ್ದಾಳ ಅಲ್ಲ! ಎಂದು ನೆನೆದು ನಕ್ಕಳು. "ಸಾಕು ಬಿಡು ನೀ ಬಲು ಚೆಲುವಿ" ಎಂದು ತಡೆದೆ.

ಇನ್ನೊಂದು ಟಾಂಗಾದಿಂದ ಮಾತು ತೇಲಿ ಬರುತ್ತಿತ್ತು. "ಬ್ಯಾಂಕಿನೊಳಗ ಹತ್ತು ಸಾವಿರಿದ್ದದ್ದು ಖರೇ ಏನು?"

"ಇದ್ದೀತಪಾ. ಬೇಕಾರ ನಾಳೆ ಅಲ್ಲಿ ಹೋಗಿ ಸಹಜ ಲೆಖ್ಖಾ ತಗಿಸಿ ನೋಡಿದರಾತು."

"ಹಿರೇ ಮಗ್ಗೂ ಹಿಸೇಕೊಡಬೇಕಾದ್ರ, ಇವನ ಪಾಲಿಗೆ ಐದೇ ಸಾವಿರ ಉಳೀತು"

"ಹೂಂ. ಮತ್ತ ಕೊಡಬೇಕಾಗತೈದ. ಇಷ್ಟಾಗಿ ಈಗ ಅವರಾ ಅವರಾ ನೆಟ್ಟಗಿಲ್ಲ. ಈ ಊರೊಳಗ ಇರೋದೇ ಇಲ್ಲಂತ ಅವಾ. ಬಂದ್ರ ತಾಯಿನ್ನ ಮಾತಾಡಿಸಲಿಕ್ಕೆ ಅಂತ ಯಾವಾಗರೆ ಬರತಿರತಾನಂತ"

"ಮತ್ತೇನಿಲ್ಲೋ ಹಿರೇಯುವಂದು ಆಗದು, ಎರಡನೇಯುವಗ ಕೊಟ್ರ ಒಣಾಶಬ್ದ ಬರಬಾರದು."

ಶಕ್ಕಿಯೂ ಈ ಎಲ್ಲ ಮಾತುಗಳನ್ನು ಕೇಳುತ್ತಿದ್ದಳು. "ಏನೇನರೆನೆವಾ ಮಾಡಿಕೊಂಡು ನಿಮ್ಮಪ್ಪ ಸುಳ್ಳೇ ಹೆದರತಾರ. ಅವರ್‍ಹಿರೇಯುವಂದು ಬಿಟ್ಟು ಚಿಕ್ಕವಗ ಮಾಡಿಕೊಳ್ಳಿಕ್ಕೆ ತಯಾರಿದ್ದಾಗ, ಕನ್ಯಾ ಕೊಡೋವರದೇನು? ಮೊನ್ನೆ ನೋಡು ಶಿರಹಟ್ಟಿಯವರ ಮನ್ಯಾಗ, ಹಿರೇ ಹುಡುಗಿ ಹಂಗೇ ಕೂತಳು. ಚಿಕ್ಕಾಕಿದು ಲಗ್ನ ಆಗಿಹೋತು" ಎಂದು ಹೇಳಿದಳು.

"ಸುಳ್ಳs ಇದನ್ನೆಲ್ಲ ವಿಚಾರಮಾಡಿ ಏನು ಉಪಯೋಗ? ಮುಖ್ಯ ಹುಡುಗ ugly ಇದ್ದಾನ. ನಮ್ಮ ರಮಾ ಅವನ್ನ ಒಪ್ಪಲಿಕ್ಕೆ ಸಾಧ್ಯನs ಇಲ್ಲಾ" ಎಂದು ಕಾಕಾ ಹೇಳಿದನು. ತಾನಾಡಿದ ಮಾತು, ನನಗೆ ಕೇಳಿಸಿ ತೆಂಬ ಸಂಶಯ ಬಂದು ಮೆಲ್ಲಗೆ ಹಿಂದೆ ಹೊರಳಿದನು. ನಾನು ಸಟ್ಟನೆ ನಂದೆಯೊಡನೆ ಮಾತಿನಲ್ಲಿ ತೊಡಗಿದವಳಂತೆ ನಟಿಸಿದೆ.

ಅಪ್ಪನು ಕಾಕಾನ ಈ ಮಾತಿನಿಂದ ಈ ವಿಷಯುಕವಾದ ತನ್ನ ಮುಂದಿನ ವಿಚಾರಗಳನ್ನು ತಡೆಯುವನೇನೋ ಎಂದೆನಿಸಿತ್ತು. ಆದರೆ ಹಾಗಾಗಲಿಲ್ಲ!

"ಈಗಿನ ಹುಡುಗರ ಮನಸ್ಸಿನ್ಯಾಗಿಂದು ತಿಳಿಯೋದೇ ಇಲ್ಲ. ಅಂವ ಏನೊ ಬ್ರಹ್ಮಚಾರಿ ಆಗಿ ಇರತೇನಿ ಅಂತಾನ ಅಂತ ಇವರೆಲ್ಲಾ ಹೇಳತಾರ. ಏನರೆ ವಿಶೇಷ ಇರಬೇಕೇನೊ ಅಂತ ಅನಸ್ತsದ."

"ಅದೇನಿಲ್ಲ ಬಿಡು, ಆ ಹುಡುಗ ಹಂಗೇ ಇದ್ದಾನ ಸ್ವಲ್ಪ ಇಲ್ಲಿದ್ದಾಗ ನೋಡತಿದ್ದೆನಲ್ಲ, ಹುಚ್ಚೇ ಅದ. ಈಗೆಲ್ಲೊ ಗದಗಿನ್ಯಾಗ ನೌಕರಿ ಹಿಡಿದು ಇದ್ದಾನಂತ. ನಮ್ಮ ಅವರ ಭೆಟ್ಟಿಯಾಗಿಲ್ಲ. ಯಾರರೆ ಕನ್ಯಾ ತೋರಿಸಲಿಕ್ಕೆ ಬಂದ್ರಂದ್ರ, ಅವನು ಹೇಳಿಬಿಡತಿದ್ದ, ನಾ ಮದುವೀನೇ ಆಗೂದುಲ್ಲ ಅಂತ."

"ಅವಂದು ಹೋಗಲಿ. ಇವಗ ನೌಕರಿ ಇನ್ನೂ ಪರ್ಮನಂಟ ಆಗೇದೇನು? ನಿನಗೇನರೆ ಗೊತ್ತದ ಏನು?"

"ಇಲ್ಲಪಾ, ಹೋಗಲಿ ಬಿಡೋ. ಸುಮ್ನ ಒಣಾವಿಚಾರಮಾಡಿ ಯಾಕ ತಲಿ ಕೆಡಿಸಿಗೋತೀದಿ? ನಾವರೆ ಕಾಣಾ ಕಾಣಾ ಅಂಥಾ ವರಗ, ಹೆಂಗ ಕನ್ಯಾ ಕೊಡೋದು?"

ಅಪ್ಪನು ಈಗ ನಿಡಿಯುಸಿರನ್ನೆಳೆದು "ಖರೇನs ಅದ. ರಮಾ ಒಪ್ಪೂದುಲ್ಲ. ಆಕಿ ಆರೆ ಹೆಂಗ ಒಪ್ಪಬೇಕು" ಎಂದನು.

ಅವನ ಮಾತಿನ ರೀತಿ ನನ್ನ ಹೃದಯವನ್ನು ಅಲುಗಿಸಿತು. ನನಗಾಗಿ

ಅವನು ವರಶೋಧನೆಯಲ್ಲಿ ಇಷ್ಟೊಂದು ತೊಳಲಾಡಿಯೇ ಅಲ್ಲವೆ, ಈಗ ಅವನು ನಿಟ್ಟುಸಿರನ್ನು ಬಿಡುವುದು ? ಅದೆಂತಹ ಕಲ್ಲುಬಂಡೆಯಾಗಿ ನಾನು ಅವನ ಹೆಗಲನ್ನು ಅಡರಿದಂತಾಗಿದೆ. ಇಳಿಯ ವಯಸ್ಸಿನಲ್ಲಿ ಅವನು ನನ್ನಿಂದ ಎಂತಹ ಚಿಂತೆಗೊಳಗಾಗಬೇಕಾಯಿತು ಎಂದು ಕಣ್ಣಲ್ಲಿ ನೀರು ತುಂಬಿತು.

ಮನೆಯಲ್ಲಿ ಈ ವರನ ಬಗ್ಗೆ ಏನು ಮಾತಾಗುವದೊ, ನಾನು ಏನು ಉತ್ತರ ಹೇಳುವುದೊ ಎಂದು ಇಡೀ ಸಂಜೆಯೆಲ್ಲ ನಾನು ಹೊಯ್ದಾಟದಲ್ಲಿದ್ದೆ. ಆದರೆ ನನ್ನ ಆಶ್ಚರ್ಯಕ್ಕೆ, ಮನೆಯಲ್ಲಿ ರಾತ್ರಿ ಈ ಬಗ್ಗೆ ಯಾವರೀತಿಯಿಂದಲೂ ಮಾತು ಒದಲಿಲ್ಲ. ಅಪ್ಪನೂ ಮೌನಿಯಾಗಿದ್ದ. ಅಂತು ಎಲ್ಲರಿಗೂ ಗ್ರಹಿಕೆಯಾಗಿಬಿಟ್ಟಿದೆ, ನಾನು ವರನನ್ನು ನಪಾಸಮಾಡಿರುವೆನೆಂದು !

ಸರಿ, ಅಡಿಗೆಯಾಗಿತ್ತು. ಹುಡುಗರು ಮತ್ತು ಕಾಕಾ ಊಟಕ್ಕೆ ಕುಳಿತರು. ತಡವಾಗಿ ಊಟವಾದ ಮೂಲಕ ಹಸಿವೆಯಿಲ್ಲವೆಂದೂ, ನಿದ್ದೆ ಬಹಳಷ್ಟು ಬಂದಿದೆಯೆಂದೂ ನಾನು ಹೇಳಿದೆ. ಅಪ್ಪನದಂತೂ ರಾತ್ರಿ ಊಟವಿಲ್ಲವಷ್ಟೆ.

ಹೊರಗೆ ಪಡಸಾಲೆಯಲ್ಲಿ ಹಾಸಿಗೆ ಸುರುಳಿಗೆ ಆತು. ಅಪ್ಪನು ಕಚೇರಿಯ ಕಾಗದಗಳನ್ನು ಹರವಿಕೊಂಡು ಕುಳಿತಿದ್ದನು. ಅವನ ಕಡೆ ನೋಡಿದೆ. ಈ ಆರುತಿಂಗಳಲ್ಲಿ ಮಾತ್ರ ನಾ ನೋಡದೆ ಇದ್ದೆ. ಇಷ್ಟು ಅಲ್ಪ ಅವಧಿಯಲ್ಲೇ ಆತನು ಮೊದಲಿಗಿಂತ ಇಳಿದು ಹೋಗಿರುವುದನ್ನು ಕಂಡೆ.

ಉಳಿದವರ ಹಾಸಿಗೆಯನ್ನು ಹಾಸಿಟ್ಟು, ಪಡಸಾಲೆಗೆ ಬಂದೆ. ಅವನಿಗೆ ಏಳಲು ಹೇಳಿದೆ. “ ಇರ್ಲಿ ಬಿಡು, ನಾಯೆಲ್ಲ ಹಾಸಿಗೋತೇನಿ. ನೀ ನಿಲ್ಲಗು ಹೋಗು, ನಿನ್ನೆ ರಾತ್ರಿ ನಿದ್ದಿ ಆಗಿಲ್ಲ” ಎಂದನು. ನಾ ಹಾಸಿಯೇ ಹೋಗುವವಳು—ಎಂದು ನಿಂತೆ. ನಿರ್ವಾಹವಿಲ್ಲದೆ ಸರಿದನು. ಅವನ ಹಾಸಿಗೆಯಲ್ಲಿ ತುಂಬ ಧೂಳಿಮಯ. ಅವ್ವನು ತೀರಿದ ಮೇಲೆ ಯಾರು ತಾನೆ ಅವನ ಚಾಕರಿ ಮಾಡುವವರು ? ನಾನಿಲ್ಲಿ ಇದ್ದಾಗ ಇದು ನನ್ನ ಕೆಲಸ....ಈ ಆರುತಿಂಗಳು ಯಾರೂ ಇವಗೆ ಹಾಸಿಯೆ ಕೊಟ್ಟಿಲ್ಲವೇನೊ ಎನಿಸಿತು.

ನಾ ಅದರಲ್ಲಿ ತೊಡಗಿರುವಾಗ “ ಯಾಕ ಅಕ್ಕವ್ವಾ, ಊಟಾಮಾಡೂದಿಲ್ಲ ಅಂದಿಯಾ ? ಒಂದು ತುತ್ತು ಮಸರು ಅನ್ನ, ಆದ್ರಾ ಉಣಬೇಕಿತ್ತು” ಎಂದು ವಾತ್ಸಲ್ಯದಲ್ಲಿ ಹೇಳಿದನು. “ ಹಸಿವಿ ಇಲ್ಲ” ಎಂದೆ. ಹಾಸುವದು

ಮುಗಿದ ಮೇಲೆ "ಒಂದಿಷ್ಟು ಕುಡಿಯುವ ನೀರು ತಂದಿಡು, ಅತ್ತು" ಎಂದನು.

ನೀರು ತರಲೆಂದು ಒಳಗೆ ಹೋಗುವಾಗ, ಕಕ್ಕಿಯು ಅರಳಹಿಟ್ಟಿಗೆ ಹಾಲನ್ನು ಹಾಕುತ್ತಿರುವದು ಕಂಡಿತು. ಆ ತಿನಿಸು ರಾತ್ರಿ ಊಟವಿಲ್ಲದ ಅಪ್ಪನಿಗಷ್ಟೆ. ನೀರ ಹಿಟ್ಟನ್ನು ಕಂಡು ನನಗೆ ಸಂತಾಪವಾಯಿತು. ಒಂದಿಷ್ಟು ಹಾಲಿಗೂ ಅವನು ಭಾಗಿಯಲ್ಲವೆ ? ಇಳಿವಯಸ್ಸಿನ ಅವನಿಗೆ ಇದು ತಡೆಯ ಬಹುದೆ ? ತನ್ನ ಗಂಡನಿಗೆ ಕೆನೆಯ ಮೊಸರು ಬಡಿಸುವದಕ್ಕೆ ಬಂತು, ಒಂದು ತುಸು ಹಾಲು ಇಟ್ಟಿರಬಾರದೆ ? ಅಪ್ಪನು ಏನನ್ನು ತಾನೆ ಇವರಿಗೆ ಕಮ್ಮಿಮಾಡಿದ್ದಾನೆ ? ಬರುವ ೧೫೦ ರೂ. ಪಗಾರವನ್ನೆಲ್ಲ ಇವರ ಮಡಿಲಲ್ಲಿ ಹಾಕುತ್ತಾನೆ.... ನನ್ನ ತಲೆ ಕಾಯಿತು.

ನಾ ಒಳಗೆ ಬಂದುದನ್ನು ಕಂಡಕೂಡಲೇ ಕಕ್ಕಿಯು, "ರಮಾ, ಒಂದು ತುತ್ತು ಉಂಡು ಮಲಗಲ್ಲ" ಎಂದಳು. ಒಲ್ಲೆನೆಂದೆ. ಸುರೇಶನು ಕೈಯೊರಸಿ ಕೊಳ್ಳುತ್ತ ಅಲ್ಲಿ ನಿಂತುದನ್ನೂ ಕಂಡು, "ಕರಿಯಪಾ ನಿಮ್ಮಪ್ಪನ್ನ, ಫಳಾರಕ್ಕ" ಎಂದಳು.

ಕಾಕಾ ನನ್ನನ್ನು ಒದರಿ, ಅಡಿಕೆ ಕೊಡಲು ಹೇಳಿದನು. ತಂದುಕೊಟ್ಟೆ. ಅತ್ತ ಅವನ ಕಡೆಹುಟ್ಟಿನ ಕೂಸು ಊಟ ಮಾಡುವಾಗ, ಅಂಗಿಯನ್ನೆಲ್ಲ ಗಚ್ಚುಮಾಡಿಕೊಂಡು ಅಳುತ್ತಿತ್ತು. ಬೇರೆ ಅಂಗಿಯನ್ನು ಹಾಕಿದೆ. ಅದನ್ನು ತೊಟ್ಟಿಲಲ್ಲಿ ಮಲಗಿಸಿದೆ. ಎಂಜಲು ಗೋಮ ಮಾಡಲೆಂದು ಮತ್ತೆ ಅಡಿಗೆಯ ಮನೆಗೆ ನಡೆದೆ. ಊಟಕ್ಕೆ ಬಡಿಸಿಕೊಳ್ಳುತ್ತಿದ್ದ ಕಕ್ಕಿ, "ಅಯ್ಯಾ ಬಿಡು. ದಣಕೊಂಡೀದಿ, ಹೋಗಿ ಮಲಗಬಾರದ ? ನಾಯೆಲ್ಲಾ ಮಾಡತೇನಿ" ಎಂದಳು. ಆ ಕೂಡಲೇ ಹೊರಗೆ ಓದುತ್ತಿದ್ದ ತನ್ನ ಮಗ ಅರವಿಂದನಿಗೆ "ಕರಿಯೊ ನಿಮ್ಮ ಕಾಕಾನ್ನ. ಹಿಂಗಳ ಎಷ್ಟೊತ್ತು ಕೂಡಲಿ, ಬೆರತು ಹೋಗತ್ತದ ಹಿಟ್ಟು. ತಿಂದು ಬಂದು ಕೆಲಸಾ ಮಾಡಿದರ ಆಗೂದಿಲ್ಲ ?" ಎಂದಳು. ಇದುವರೆಗೆ ಕುದಿಯುತ್ತಿದ್ದುದು ತಡೆಯಲಾಗದೆ "ನಿನಗೇನು ಅಡ್ಡಿ ಆಗೇದ ಬಿಡು, ಅವನಿಂದಾ ? ಊಟಕ್ಕ ಕೂಡಲಾ. ಇಷ್ಟ್ಯಾಗ ನೀರೊಳಗ ಕಲಸಿದ ಹಿಟ್ಟು. ಬೆರತು ಹೋಗಲಿಕ್ಕೆ ಅದಕ್ಕೇನು ಹಾಲು ಹಾಕೇದ ?" ಎಂದೆನು.

ಶಕ್ಕಿಯ ಮನಸ್ಥಿತಿ ನಾ ಊಹಿಸಿದಂತೆಯೆ ಆಯಿತು. "ಹೂಂ. ಹಿಂಗೇನು? ಹಾಲುಹಾಕಿದರ ಮಾತ್ರ ಹಿಟ್ಟು ಬೆರೀತ್ಯದ? ನನಗೊತ್ತಿದ್ದಿಲ್ಲ ಬಿಡು. ಪುಣೇದಿಂದ ಬರ್ತ ಕಲಕೊಂಡು ಬಂದಿ ಕಾಣಸ್ತದ?.... ಎಷ್ಟೂ ನಿನ್ನಮಾತು! ಕೂಸಿಗೆ ಹಾಕೇನು ಅಂದ್ರ ಒಂದ ಹನಿ ಹಾಲಿಲ್ಲ ಮನ್ಯಾಗ. ಇಟಗೊಂಡು ಭೇದ ಮಾಡತೇನಿ ಅನ್ನುವರ್ಷ್ಯಾಂಗ ಮಾಡತೀಯಲ್ಲ?" ಎಂದು ದನಿಯೇರಿಸತೊಡಗಿದಳು.

'ಏನು, ಏನದು' ಎನ್ನುತ್ತ ಕಾಕಾ ಒಳಗೆ ಬಂದನು. ಶಕ್ಕಿಯು ಮಾತೊಂದಲ್ಲದೆ, ಕಣ್ಣೀರಿನ ಅಸ್ತ್ರದಿಂದಲೂ ಪರಿಸ್ಥಿತಿಯನ್ನು ಎದುರಿಸು ತ್ತಿದ್ದಳು. ಅಪ್ಪನು ಆಗ ಬಂದನು. "ಹೋಗಲಿಬಿಡು, ಆ ಹುಡುಗಿ ಸಂಗತೀ ಏನು?" ಎಂದಂದು ನನ್ನ ಕಡೆ ತಿರುಗಿ, "ನಡಿ ಹೋಗು, ಸುಮ್ನ ಕೂಡ ಲಿಕ್ಕೆ ಬರೂದುಲ್ಲ?" ಎನ್ನುತ್ತ ಕಾಲುತೊಳೆಯ ಹೋದನು.

ಹಾಸಿಗೆಯ ಮೇಲೆ ಹೋಗಿ ಮಲಗಿಕೊಂಡೆ. ದೇಹ ಮನಸ್ಸು ಎರಡೂ ಸಾಕಷ್ಟು ತ್ರಾಸಗೊಂಡದ್ದರಿಂದ, ಸುರುವಿಗೆ ಬೇಗ ನಿದ್ದೆ ಹತ್ತಿತೇನೊ ನಿಜ. ಆದರೆ ಮುಂದೆ ತಗಣಿಗಳ ಕಾಟಕ್ಕೆ ನಡುರಾತ್ರಿಯಲ್ಲಿ ಯಾವಾಗಲೋ ಎಚ್ಚರವಾಯಿತು. ಕಣ್ಣು ತೆರೆದೆ, ಎಲ್ಲ ಕಡೆಗೂ ನಿಶ್ಶಬ್ದ. ಸಣ್ಣಮಾಡಿದ ಚಿಮಣಿಯ ದೀಪವೊಂದು ಉರಿಯುತ್ತಿದೆ. ಮಗ್ಗಲು ಕೋಣೆಯಲ್ಲಿ ಗಂಡ ನೊಡನೆ ಶಕ್ಕಿಯ ಒಳಮಾತು ನಡೆದಿತ್ತು. ಆಕೆ ಹೇಳುವುದು ಸ್ಪಷ್ಟವಾಗಿ ಕೇಳುತ್ತಿರಲಿಲ್ಲ, ಹೆಚ್ಚು ಲಕ್ಷ್ಯಗೊಟ್ಟೆ. "ಈ ಆರು ತಿಂಗಳು....ಎಂಬೊಂದೆ ರಡು ಶಬ್ದ ಕೇಳಿಸಿದವು.... "ಛಂದ ಇದ್ದೇನಿ ಅಂತ ಗರ್ವ ಭಾಳದ." ಎಲ್ಲವೂ ನನಗೆ ಸಂಬಂಧಿಸಿದುವೇ ಎಂದು ಗೊತ್ತಾಯಿತು. ಕೆಲಹೊತ್ತು ಮಾತು ಕೇಳಬರಲಿಲ್ಲ. ಆ ಮೇಲೆ "ನಾಳೆ ಕಾಲು ಮುಸರು ಹೆಚ್ಚು ಹೇಳಬೇಕಾತು" ........ಹಾಳಾಗಲಿ ಎಂದು ಈ ಕಡೆ ತಿರುಗಿದೆ. ಮಲಗಿ ಲೆಂದೆ, ನಿದ್ರೆ ಬರಲಿಲ್ಲ.

'ನಮಗೆ ಮನೆಯೆಂಬುದಿಲ್ಲದ್ದಕ್ಕೆ ಎಷ್ಟು ಕಷ್ಟಪಡಬೇಕು? ಸರಳ ಸ್ವಭಾವದ ಅಪ್ಪನ ಕಷ್ಟ ನೋಡಲಾರೆ. ಇಲ್ಲ, ಇಲ್ಲ........ ಭಾವನೆಂದು ಅವಗೆ ಸ್ವಲ್ಪಾದರೂ ಶಕ್ಕಿ ಬೆಲೆ ಕೊಡಬೇಡವೆ? ಅವನ ಮುಪ್ಪಿನ ಕಾಲದ ಸಂರಕ್ಷಣೆ ಯನ್ನು ಹಿರಿಯುವಳಾದ ನಾನು ಮಾಡಬೇಕು. ಬೇಗ ಮದುವೆಯಾಗಿ ಇಲ್ಲಿಂದ

ಪಾರು ಮಾಡುವೆ' ಎನ್ನುವುದರ ಉತ್ಕಟತೆ ಬಲಿಯಿತು. 'ನಂದೆ ನಾನಿಲ್ಲದಾಗ ಎಷ್ಟು ಕಷ್ಟಪಟ್ಟಳೊ. ಇನ್ನೂ ಇಬ್ಬರದೇ ಭೆಟ್ಟಿಯಾಗಿಲ್ಲ. ಆಗ ಅದೆಷ್ಟು ಕಣ್ಣೀರನ್ನು ಕರೆಯುವಳೊ! ಅಪ್ಪನಿಗೆ ಬೇರೆ ಮನೆ ಮಾಡು ಎಂದು ಹೇಳಲೇ? ಹಿಂದೆಯೆ ಈ ಮಾತು ಹೇಳಿದ್ದೆ. ಆಗ ನೀ ಮದುವೆಯಾಗಿ ಹೋಗುವವಳು. ಆ ಮೇಲೆ ನಾನೆಲ್ಲಿ ಒದ್ದಾಡಲಿ ಎಂದಿದ್ದ. ....ಇವತ್ತು ಹೋಗಿದ್ದ ಮನೆ ಅದೆಷ್ಟು ದೊಡ್ಡದಾಗಿದೆ, ಛಂದಾಗಿದೆ. ನಾ....ಅಲ್ಲಿ ಹೋದರೆ, ನಂದೆಗೆ ಆಡಲು ಗೆಳತಿ ಸಿಕ್ಕುತ್ತಾಳೆ. ಅಪ್ಪನೂ ಅಲ್ಲಿಯೆ....'

ಆದರೆ ಆ ಮನೆಯ ಯಜಮಾನ ಅವರಷ್ಟು ಸುಗುಣಿ ಇರಬಹುದೆ? ಅವರಷ್ಟು ಧೀರನಿರಬಹುದೆ? ಸುರೂಪಿಯಿಲ್ಲ ಎಂದು, ಸದ್ಗುಣಗಳು ಇರಲೇ ಬೇಕೆಂಬ ಆಶೆಯನ್ನು ಅದೇಕೆ ತಾನೆ ಮನಸ್ಸು ಎತ್ತಿ ಎತ್ತಿ ಹೇಳುತ್ತಿದೆ? ದೈವದ ಮೇಲೆ ಒಳ್ಳೆಯದಕ್ಕಾಗಿ ವಿಶ್ವಾಸವಿಡಲೆ? ನನ್ನ ಆಶೆ-ಆಕಾಂಕ್ಷೆಗಳನ್ನು ದೇವರು ಮಣ್ಣುಗೂಡಿಸಲಿಕ್ಕೆ ನಾನೇನು ಯಾರಿಗೆ ಕೆಟ್ಟದು ಮಾಡಿದ್ದೇನೆ? ತಾಯಿ ಕೈಬಿಟ್ಟಂದಿನಿಂದ ಸಾಕಷ್ಟು ತೊಳಲಿದುದನ್ನು ಅವನು ಕಾಣನೆ? ಇನ್ನು ನಮಗೆ ಸುಖದ ದಿನಗಳೇ ಬರಬೇಕು.... ಅವರ ಮನೆಗೇ ಹೋಗುವದಕ್ಕೆ ಮನಸ್ಸು ಇಷ್ಟಾಗಿ ಅಪೇಕ್ಷೆಪಡುತ್ತಿದೆಯೆಂದ ಮೇಲೆ ಅದು ಒಳ್ಳೆಯದಕ್ಕೇ ಇರಬಹುದು! ಭಗವಂತ, ನನ್ನನ್ನು ಕಾಯು. ಅವ್ವ, ನೀನೀಗ ಇರಬೇಕಿತ್ತು. ಇದ್ದರೆ ನಾನಿಷ್ಟು ನಿಸ್ಸಹಾಯಳಾಗುತ್ತಿದ್ದೆನೆ?...............ಏಕೆ ನಮ್ಮನ್ನು ಬಿಟ್ಟುಹೋದೆ? ಇವತ್ತೊಂದು ದಿನವಾದರೂ ನನ್ನ ಕಡೆ ಬಂದು ಸಂತೈಸುವದಿಲ್ಲವೆ?

ನೀರವವಾಗಿ ಬಹಳಷ್ಟು ಅತ್ತೆನು. ಹತ್ತಿರದಲ್ಲಿ ನಂದೆಯಲ್ಲೇ ನನ್ನ ತಾಯಿಯನ್ನು ಕಂಡೆನೇನೊ ಎನ್ನುವಂತೆ, ಅವಳ ಕೊರಳನ್ನಪ್ಪಿ ಬಲುಬೇಗ ನಿದ್ದೆಹೋದೆ.

ಮರುದಿನ ಬೆಳಗಿನಲ್ಲಿ ನಾನು ನಳದಿಂದ ನೀರು ತುಂಬುತ್ತಿದ್ದೆ. ಕೊಡವನ್ನು ಸುರುವಲು ಅಡಿಗೆಯ ಮನೆಗೆ ಬಂದಾಗ ಎಲ್ಲರೂ ಪಡಸಾಲೆಯಲ್ಲಿದ್ದರು. ನಿನ್ನೆ ನಾವು ಹೋದ ಮನೆಯಿಂದ ನಮ್ಮ ಪುರೋಹಿತರು ಬಂದು, ಕನ್ಯೆಯನ್ನು ವರನು ಪಾಸು ಮಾಡಿರುವನೆಂದೂ, ಮುಂದಿನ ಮಾತುಕತೆಗೆ ಬರಬೇಕೆಂದೂ ಸುದ್ದಿಯನ್ನು ತಂದಿದ್ದುದು ತಿಳಿಯಿತು. ಕಾಕಾನಿಗೆ

ಪುರೋಹಿತರು ಹೇಳುತ್ತಿದ್ದರು. "ಶಾಮಣ್ಣಾ, ಸಂಗತೀ ನೀವೂ ಬಂಧು ಬಿಟ್ರೆ ನೆಟ್ಟಗಾಗತ್ವದ. ನಾವು ಎಷ್ಟಂದ್ರೂ ಹೊರಗಿನವರಾಗತೇವಿ."

"ಅದಕ್ಕೇನ್ರಿ ಆಚಾರ್ರ, ನಾವು ವರನ್ನ ನಪಾಸು ಮಾಡ್ತೇವಿ ಅಂತ ಹೇಳಲಿಕ್ಕೂ ನಾವು ಹ್ಯಾಂಗ ಬರಬೇಕು? ಮತ್ತ ಇಂಥಾದರೊಳಗ ನಾವು ಇದ್ದದ್ದಿದ್ರ ನೆಟ್ಟಗ."

ಅಪ್ಪನ ಕಡೆಗೊಮ್ಮೆ ನೋಡಿ, ಧೈರ್ಯ ತಂದುಕೊಂಡು ನಾ ನಿಂತಲ್ಲಿಯೆ ತುಸು ಗಟ್ಟಿಯಾಗಿ ಹೇಳಿದೆ. "ಹಂಗೇನು ಹೇಳಿ ಕಳಿಸಬ್ಯಾಡ್ರಿ."

ಕೆಲವರಿಗೆ ಇತ್ತ ಲಕ್ಷ್ಯವಿತ್ತು, ಕೆಲವರಿಗಿರಲಿಲ್ಲ. ಅಪ್ಪನು 'ಏನು?' ಅಂದ. ಕಕ್ಕಿಯು 'ಹಂಗಂದ್ರೇನ?' ಎಂದು ಕೇಳಿದಳು.

ಸಂಕೋಚ ಬಿಟ್ಟು ನಾ ಹೇಳಲೇಬೇಕಾಯಿತು. "ನಿಶ್ಚಯದ ಬಗ್ಗೆ ಮಾತಾಡಲಿಕ್ಕೆ ಬರತೇವಿ ಅಂತ ಪುರೋಹಿತರು ಹೇಳಲಿ" ಎಂದೆ.

ಎಲ್ಲರ ಮುಖದ ಮೇಲೂ ಅಚ್ಚರಿ. ವರನನ್ನು ನಾನು ಪಾಸು ಮಾಡಿರುವೆನೆಂದು ಸ್ಪಷ್ಟೀಕರಣ ತೆಗೆದುಕೊಂಡರು. ವಾತಾವರಣವೇ ಬದಲಿಸಿತು. ಒಂದು ಕ್ಷಣ ಎಲ್ಲರೂ ಸುಮ್ಮನಿದ್ದರು.

ಅದೋ! ಅಪ್ಪನ ಕಣ್ಣಲ್ಲಿ ನೀರಾಡುತ್ತಿದೆ. ಆ ಮುಖದಲ್ಲಿ ಎಷ್ಟೊಂದು ನೋವಿದೆ! ನನ್ನ ಮಾತಿನ ಪರಿಯನ್ನು ಆತ ಏನೆಂದು ತಿಳಿದನೋ! ಇನ್ನೂ ವರ ಹುಡುಕುವ ದುರ್ದೈವ ಪರಿತಾಪ ಬೇಡವೆಂದು ನಾ ಒಪ್ಪಿದುದಾಗಿ, ಆತನಿಗೆ ಅನಿಸಿರಬೇಕು. ಹೌದು, ಬಿಟ್ಟು ಇನ್ನಾವುದಿರಬೇಕು ಆವನ ದೃಷ್ಟಿಯಲ್ಲಿ? ಆದರೆ ಅದೇ ಅಲ್ಲ, ಅಲ್ಲ ಎಂಬುದನ್ನು ಆತನಿಗೆ ನಾ ಹೇಗೆ ತಾನೇ ತಿಳಿಹೇಳಲಿ? ನನ್ನ ಸಮ್ಮತಿಯ ಅರ್ಥವನ್ನು ಸುಮ್ಮನೆ ಬೇರೆಯಾಗಿ ತಿಳಿದುಬಿಟ್ಟ. ....ಇದಕ್ಕೆ ಬೇರೆ ಕಾರಣ ಯಾವುದೆಂಬುದನ್ನು ನಾನಾದರೂ ಸ್ಪಷ್ಟವಾಗಿ ಗುರುತಿಸಬಲ್ಲೆನೆ?.... ಹೇಗೊ ಒಪ್ಪಿದೆ. ನನ್ನ ಹೆಜ್ಜೆಯಲ್ಲಿ ತಪ್ಪಿದೆನೇನು ಮತ್ತೆ ಅಂ....'

ಅಪ್ಪನ ಕಣ್ಣಕೆಳಗಿನ ತಗ್ಗನ್ನು ನೀರಹನಿ ತುಂಬಿತು. ಪುರೋಹಿತರಿಗೆ ಹೇಳುವಾಗ ಅವನ ಧ್ವನಿ ಗದ್ಗದವಾಯಿತು. ನನಗೆ ತಡೆಯಲಾಗಲಿಲ್ಲ. ಅಲ್ಲೇ ಅಳು ಒಂದುರಂತಾಗಿತ್ತು. ಹಿತ್ತಲ ಕಡೆಗೆ ಭರದಿಂದ ನಡೆದೆ. ತುಳಸೀ ಕಟ್ಟೆಗೆ ಕುಳಿತು ಮನದ ಉಮ್ಮಳವನ್ನು ಹೊರಹೊಮ್ಮಿಸಿದೆ.... ಆಗ ವಿಚಾರ

ಬಂದಿತು. ಅಂತೂ ಒಮ್ಮೆ ಅಪ್ಪನ ತ್ರಾಸ ಕಡಿಮೆ ಮಾಡಿದೆನಲ್ಲ, ಎಂದು ಸಮಾಧಾನಗೊಂಡೆ.

ಇಂದು ಮನೆಯಲ್ಲಿ ನಿಶ್ಚಯದ ಸಮಾರಂಭ. ಮನೆಯಲ್ಲೆಲ್ಲ ಗದ್ದಲ. ಪಡಸಾಲೆಯಲ್ಲಿ ಹೊರಗೆ ನಿಶ್ಚಯದ ಯಾದಿ ಸಿದ್ಧವಾಗುತ್ತಲಿತ್ತು. ನಾ ಅಡಿಗೆಯ ಮನೆಯಲ್ಲಿ ಕೆಲಸದಲ್ಲಿ ತೊಡಗಿದ್ದೆ. ಮದುವೆಯಾಗುವವಳಾದರೇನಾಯಿತು, ಇನ್ನೂ ಪೂರ್ಣ ಮದುಮಗಳಾಗಿಲ್ಲವಲ್ಲ.

ಅಡಿಗೆಯವನಿಗೆ ಸಾಮಾನುಗಳನ್ನು ಒದಗಿಸಿ ಕೊಡುತ್ತಿದ್ದೆ. ಹೊಗೆಯಿಂದ ಕಣ್ಣಾಲಿಗಳು ಒದ್ದಾಡಿದುವು. ಒಂದು ಕ್ಷಣ ರಸ್ತೆಗೆ ಹೊಂದಿರುವ ನಮ್ಮ ಕಿಟಕಿಗೆ ಹೋಗಿ ನಿಂತೆ. ಸಂಜೆಯ ವಿಹಾರ ತೀರಿಸಿಕೊಂಡ ಜನ ಮರಳುತ್ತಿರುವುದು ಕಂಡಿತು.

ಆ ದೀಪದ ಕಂಬದ ಹತ್ತಿರ ಯಾರೋ ಗುರುತಿನವರು ಬರುತ್ತಿರುವ ಹಾಗಿದೆಯಲ್ಲ, ಎನಿಸಿ ಕಣ್ಣಲ್ಲಿ ನೀರು ತುಂಬಿದ್ದರಿಂದ ನೆಟ್ಟಗೆ ಒರೆಸಿಕೊಂಡು ಆ ಕಡೆ ನೋಡಿದೆ.

'ಅವರ ಹಾಗೆ ಕಾಣುತ್ತಾರಲ್ಲ! ನಡಿಗೆ ಅವರದೇ. ಅದೇ ಕಪ್ಪು ಬಣ್ಣ. ಬಿಳಿಯ ಅರಿವೆ ಧರಿಸಿದ್ದಾರೆ. ಗಾಡಿಯಲ್ಲಿ ನಾವು ಕಂಡಿದ್ದ ಅದೇ ನಗೆ ಮುಖದ ಮೇಲಿದೆ. ಹುಬ್ಬಳ್ಳಿಯಿಂದ ಯಾವಾಗ ಬಂದರು? ಯಾರದೊ ಮನೆ ಹುಡುಕುತ್ತಿರುವ ಹಾಗೆ, ಅಲ್ಲಲ್ಲಿ ನೋಡುತ್ತ ಬರುತ್ತಿದ್ದಾರೆ.... ಅದೇ ಗಾಂಭೀರ್ಯದ ನಡಿಗೆ!'

ಮುಖವನ್ನು ಸೆರಗಿನಿಂದ ನೆಟ್ಟಗೆ ಒರಸಿಕೊಂಡೆ. ಇದುರಿಗೇ ಬಂದರು.

"ಇದೇ ಅಲ್ಲs ನಿಮ್ಮ ಮನಿ? ಗುಣಾ ಆತು. ಮಂದಿನ್ನ ಕೇಳಿಕೋತ ಹೋಗೋದು ತಪ್ಪಿತು. ಹ, ಏನು ವಿಚಿತ್ರ ಅದ ಮನಿ ಇದು. ಅಡಿಗೀಮನಿ ರಸ್ತೇಕ್ಕ ಅದ. ಪಡಸಾಲಿ ಬಾಗಿಲ ಒಳಮಗ್ಗಲು ಅದ" ಎಂದು ಮಾತನಾಡಿಸಿದರು.

"ಸುರೇಶನಿಗೆ ಮಾತು ಕೊಟ್ಟ ಪ್ರಕಾರ, ನಮ್ಮ ಭೆಟ್ಟಿಗೆಂದು ಈಗ ಬಂದರೆ? ಎಂತಹ ಅಡ್ಡ ದಿನದಲ್ಲಿ ಬಂದರು? ಸುರೇಶ ಎಲ್ಲಿ? ಅವರಿಗೆ ಮತ್ತಾರೂ ಇಲ್ಲಿ ಗುರುತಿನವರಿಲ್ಲ. ನಾಹೇಗೆ ಹೊರಗೆ ಹೋಗಿ ಮಾತನಾಡಿಸುವುದು ಎಂದು ಸುರೇಶನನ್ನು ಹುಡುಕಲೆಂದು ಬಾಗಿಲಿಗೆ ಬಂದೆ.

'ಬರ್ರಿ,' ಎಂದು ಅಪ್ಪನು ಅವರನ್ನು ಸ್ವಾಗತಿಸಿದನು. 'ಯಾರು ಬೇಕಾಗಿತ್ತು' ಎಂದು ಕೇಳಿದನು !

ಅಲ್ಲಿಯೇ ಇದ್ದ ಪುರೋಹಿತರು "ಇದೇನು ರಾಯರs ಯಾರು ಬೇಕಾಗಿತ್ತು ಅಂತ ಕೇಳತೀರಲ್ಲ? ಇವರೇ ನಿಮ್ಮ ಅಳಿಯಂದಿರ ಅಣ್ಣಂದಿರು. ರಾಜಣ್ಣಾ, ಮ್ಯಾಲೆ ಬರ್ರಿ. ಇಲ್ಲಿ ಬರ್ರಿ. ಇಷ್ಟೊತ್ತನಕಾ ನಿಮ್ಮದೇ ದಾರಿ ಕಾಯತಿದ್ವಿ. ಅಡಿಗಿ ಆಗಿ ಬಿಟ್ಟsದ" ಎಂದರು.

ನನ್ನ ಎದೆ ಭೀಕರವಾಗಿ ಹೊಯ್ದಾಡಿತು. ಕಾಲುಗಳು ಗದಗದ ನಡುಗತೊಡಗಿದವು. ಇವರು ನಾ ಕೈ ಹಿಡಿದವರ ಅಣ್ಣ !

ಸುರೇಶನು ಹೊರಗಿನಿಂದ ಬಂದವನೇ, ಅವರನ್ನು ಕಂಡು ಒಮ್ಮೆಲೆ ಆನಂದದಿಂದ ಅವರ ಹತ್ತಿರವೇ ಕುಳಿತು, "ಯಾವಾಗ ಬಂದ್ರಿ. ಅಪ್ಪಾ, ಏ ಅಪ್ಪಾ, ಇವರs ನೋಡು, ನಮ್ಮನ್ನ ಅವತ್ತ ಪುಣೇ ಸ್ಟೇಶನ್ನದೊಳಗ ಪಾರು ಮಾಡಿದ್ರು ಅಂತ ಹೇಳಿದ್ನೆಲ್ಲ" ಎಂದು ಹುರುಪಿನಿಂದ ಹೇಳಿದನು. ಹುಡುಗನಾದ ಸುರೇಶನಿಗೆ ಅದಿನ್ನೂ ಅಚ್ಚಳಿಯದ ನೆನಪು. ಅಪ್ಪನು ಅವರಿಗೆ ಕೈಮುಗಿಯುತ್ತ, "ಋಣಾನುಬಂಧ ಕೂಡೋದಿದ್ರ, ದೈವ ಹೀಂಗ ಮುಂಚೇನೆ ಸಹಾಯ ಆಗ್ತsದ. ನೀವು ಬರೋವ್ರು ಇದ್ದೀರಿ ಅಂತ ನಿಮ್ಮ ತಾಯಿಯವರು ಹೇಳಿದ್ರು" ಎಂದನು. ಪುಣೆಯಲ್ಲಿ ನಡೆದ ಘಟನೆಯನ್ನು ಮನೆಯಲ್ಲಿ ಸುರೇಶನೂ ನಾನು ವಿಶೇಷ ಆಸ್ಥೆಯಿಂದ ಹೇಳಿದ್ದೆವು. ಅವರೇ ಈಗ ಬಂದವರೆಂಬುದು ಹೆಣ್ಣುಮಕ್ಕಳಲ್ಲೆಲ್ಲ ಹಬ್ಬಿತು.

ನಾನು....ನಾನೆಲ್ಲಿದ್ದೆ? ಹೊಯ್ದಾಟದಿಂದ ತತ್ತರಿಸುತ್ತಿದ್ದೆ. ಅವರ ಕಡೆಗೊಮ್ಮೆ ನೋಡಿದೆ. ಸುರೇಶ ಮತ್ತು ನನ್ನ ಆಪ್ತತ್ವ ಉಂಟಾದುದಕ್ಕೆ ಅವರು ಹಾರ್ದಿಕವಾಗಿ ಸಂತೋಷಪಟ್ಟಂತಿದ್ದರು.

ನಾನು ಒಮ್ಮೆಲೆ ಕುಸಿದುಬಿದ್ದೆ. ಮತ್ತೆ ಎದ್ದು ಕಂಬವನ್ನು ಹಿಡಿದು ನಿಂತೆ. ಕಕ್ಕಿ ನಾ ಅಲ್ಲಿ ನಿಂತುದನ್ನು ನೋಡಿ, 'ಇಲ್ಲ್ಯಾಕ ನಿಂತೀದಿ?' ಎಂದಳು. 'ಯಾಕೂ ಇಲ್ಲ' ಎಂದೆ. ನನಗೆ ಯಾರೂ ಮಾತಾಡಿಸುವದು ಬೇಡವಾಗಿತ್ತು. ಕೋಣೆಯ ಕೋಣೆಗೆ ನಡೆದೆನು.

ಎಂತಹ ಆಘಾತ! ಅವರು ಇವರ ಖಾಸ ಅಣ್ಣನೆ? ಅಯ್ಯೋ, ತಿಳಿಯದೆ ಹೋದೆ. ವಿಧಿ ಮೋಸ ಮಾಡಿತು....ಆದರೆ ದುಃಖಪಡುವದೇಕೆ?

ಆದ ತಪ್ಪಾದರೂ ಏನು?....ತಪ್ಪೆ? ಏನು ಅದು, ನಿರ್ದಿಷ್ಟವಾಗಿ ಹೇಳಲು ಬಾರದು. ಹೃದಯಕ್ಕೆ ನೋವು ಮಾತ್ರ ಆಗಿದೆ. ಸಂಕಟ....ಸಂಕಟ—' ಕಣ್ಣೀರು ಸಳಸಳನೆ ಸುರಿಯಿತು.

ನಂದೆಯು ನನ್ನ ಹುಡುಕುತ್ತ ಅಲ್ಲಿಗೇ ಬಂದು, "ನೀ ಇಲ್ಲಿ ಇದ್ದೀಯೇನು ? ಅಣ್ಣ ನಿನ್ನ ಕರೀತಿದ್ದಾ" ಎಂದಳು. ಮಾತಿಲ್ಲದೆ ನಾನು ಅಲ್ಲಿಯೆ ಜೋಡುತೆಕ್ಕೆಗಳ ಮೇಲೆ ಕೈಯೂರಿ ಕುಳಿತಿದ್ದೆ. ನಂದೆಯು ಹತ್ತಿರ ಬಂದು ನನ್ನ ಕೂದಲನ್ನು ನೇವರಿಸಿ, 'ತಲೆ ನೋಯ್ತದೇನು' ಎಂದು ಕೇಳಿದಳು. ಏಕೆ ಹಾಗೆ ಕೇಳಿದಳೋ ಎನಿಸಿತು. ಈ ಪಟ್ಟ ಬಿಕ್ಕುಗಳಲ್ಲಿ ದುಃಖ ಏರೇರಿ ಬಂತು. ನಂದೆಗೆ ತಿಳಿಯಲಿಲ್ಲ. ನನ್ನ ಹತ್ತಿರ ಸರಿದಳು. ಮುಖವನ್ನು ಅಡಿಗೆಮಾಡಿ ನಾನು ಅಳತೊಡಗಿದೆ. ನಂದೆ ತುಸು ಹೊತ್ತಿನ ಮೇಲೆ ಎದ್ದು ಹೋದಳು.

'ಅವರು ಇವರ ಅಣ್ಣ. ಎಷ್ಟು ಹತ್ತಿರ ಬಂದೆ, ಅದೆಷ್ಟು ಹತ್ತಿರ ಬಂದಿವೆ. ನನ್ನ ಆರಿಸುವಿಕೆಯಲ್ಲಿ ನಾನು ತಪ್ಪಿದೆನೆಂದು ಈಗ ಅನಿಸುತ್ತದೆಯಲ್ಲ! ತಪ್ಪಿದೆನೆ ನಾನು ? ಇಡೀ ನನ್ನ ಆಯುಷ್ಯದಲ್ಲೇ ಇನ್ನು ಕೊನೆವರೆಗೆ ತೊಳಲಬೇಕಾಯಿತೆ ? ಅವರ ಹಾಗೆ ಇವರ ಪರಿಚಯವೂ ಮೊದಲಿಗೆ ತುಸು ಆಗಿದ್ದರೆ ನೆಟ್ಟಗಿತ್ತೇನೊ ! ಅವರನ್ನೇ ಆರಿಸಿದ್ದರೆ.... ಆದರೆ ಅವರ ಕುರೂಪ ಮುಖ. ಏನಿದ್ದರೂ ನನ್ನ ಭಾವನಾಗಿ, ನಾನಿರುವ ಮನೆಯಲ್ಲೇ ಇರುವವನಾಗಬಾರದಿತ್ತು. ಇವರ ಸಂಬಂಧವೇ ಇಲ್ಲವಾಗಿದ್ದರೆ ನಾನು ನೆಮ್ಮದಿಯಿಂದ ಇರಬಹುದಾಗಿತ್ತು ....'

ಸುರೇಶನು 'ಅಕ್ಕಾ, ಏ ಅಕ್ಕಾ' ಎನ್ನುತ್ತ ಬಂದನು. ಅವರು ಬಂದುದನ್ನು ತಿಳಿಸಲು ನನ್ನನ್ನು ಹುಡುಕುತ್ತಿದ್ದಾನೆ! ಕತ್ತಲೆಯಲ್ಲಿ ನಾನು ಮಲಗಿದ್ದು ಕಾಣಲಿಲ್ಲ. ನನಗೂ ಓಗೊಡುವ ಮನಸ್ಸಿರಲಿಲ್ಲ. ಹಾಗೇ ಹೊರಟು ಹೋದೆನು.

ನೌಕರಿ ಇಲ್ಲ ಎಂದು ಅವರಂದರು. ಉಳಿದವರು ಗದುಗಿನಲ್ಲಿ ನೌಕರಿ ಸಿಕ್ಕಿದೆ ಎಂದರು. ಮನೆಯವರ ಭಿಡೆಗೆ ಹಾಗೆ ಹೇಳಿರಬಹುದೆ? ಮನೆಯಿದ್ದೂ ಧಾರವಾಡಕ್ಕೆ ಬರಲಿಲ್ಲವಲ್ಲ.... ಹೆಸರು ವರದರಾಜ, ಕರೆಯುವ ಹೆಸರು ರಾಜಣ್ಣ. ಇವೆಲ್ಲ ವಿಧಿಯ ದುರ್ವಿಲಾಸವಲ್ಲದೆ ಇನ್ನೇನು ?

ಸಿಗರೇಟನ್ನು ಸೇದುತ್ತಿರುವ ಅವರ ನಿಲುವು ಸುಳಿಯಿತು. 'ನನ್ನ ಜನ್ಮಕ್ಕೆ ನಾಚಿಕೆಯಿಲ್ಲ' ಎಂದಿದ್ದೆ ಆ ಕ್ಷಣವೇ ಯಾರೊ ಗಲ್ಲ ಚಿವುಟಿ, ಹುಚ್ಚು ಚಟಾ ಅದು, ಹೋಗೂದಿಲ್ಲ ಎಂಬ ಮಾತೂ ನೆನಪಿಗೆ ಬಂತು. ಈ ಸಲ ಜೋರಾಗಿ ಅಳತೊಡಗಿದೆ.

ನನ್ನ ಇನ್ನೊಬ್ಬ ಅಬಚಿಯು ನಂದೆಯೊಡನೆ ಒಳಗೆ ಬಂದು, 'ಎಲ್ಲಿ ಮಲಗ್ಯಾಳ' ಎಂದು ನಾನು ಅಳುವ ಸ್ವರವನ್ನೇ ಹಿಡಿದುಕೊಂಡು ಬಂದು ಹತ್ತಿರ ಕುಳಿತಳು. ಇನ್ನೊಬ್ಬಳು ಬಂದು ಮೆಲ್ಲಗೆ ಮಾತಾಡತೊಡಗಿದಳು. ಆಕೆ ನಮ್ಮ ಮನೆಯ ಒಕ್ಕಲುಗಿತ್ತಿ. "ಇಂತಾ ಸುಖದ ಕೆಲಸ ಅವರ ತಾಯಿ ನೋಡಿ ಸಂತೋಷಪಡಬೇಕಿತ್ತು. ಅವ್ವನ್ನ ನೆನಸಿಗೊಂಡು ಅಳಾಕ ಹತ್ಯಾಳ ಅತು" ಎಂದಳು. 'ಹೌದು' ಎಂದು ಅಬಚಿಯೂ ಗದ್ಗದಿತಳಾದಳು.

ನನಗದು ನಿಜ ಎನ್ನಿಸಿತು. 'ತಾಯಿ ಇರಬೇಕಿತ್ತು. ಇದ್ದಿದ್ದರೆ ಆಕೆ ಎದುರು ಎಲ್ಲವನ್ನೂ ಹೇಳುತ್ತಿದ್ದೆ. ಹೀಗೆಲ್ಲ ಆಪತ್ತು ಬರುತ್ತಿರಲಿಲ್ಲ, ಅವ್ವಾ'

ನನ್ನ ಅಳು ಈ ಪಟ್ಟು ತೀರ ಹೆಚ್ಚಾಗಿರಬೇಕು. ಒಕ್ಕಲುಗಿತ್ತಿಯು ಹೊರಗಿನವರಿಗೆ ಕೇಳಿಗೀಳಿತೆಂದು, ಹೆದರಿ ಬಾಗಿಲನ್ನು ಮುಂದೆ ಮಾಡಿದಳು.

'ಅವ್ವ ಇದ್ದದ್ದಾಗಿದ್ದರೆ, ಆಕೆಗೆ ಅವರ ವ್ಯೆಯನ್ನು ತಟ್ಟಿ' ಬೆಳಗಾಂವಿ ಬಂತು, ಏಳ್ರಿನ್ನ ಎಂದು ನಾ ಅಂದುದನ್ನು ಹೇಳುತ್ತಿದ್ದೆ. ತಾಯಿಯ ಎದುರು ಹೇಳುವುದಕ್ಕೆ ಸಂಕೋಚವೆಲ್ಲಿಯದು. ಸುರೇಶನು ತುಸು ಬೀಳುವ ಹಾಗೆ ಕಂಡನಿಲ್ಲವೊ, ಚಟ್ಟನೆ ಅವರು ಎದ್ದು ಸರಿಯಾಗಿ ಮಲಗಿಸಿದುದನ್ನು ಹೇಳುತ್ತಿದ್ದೆ, ಅವರು ಪುಣೆಯಲ್ಲಿ ಹಮಾಲನಿಂದ ನಮ್ಮನ್ನು ಬಿಡುಗಡೆ ಮಾಡಿದಾಗ, ದೇವರ ಸಮಾನವಾಗಿ ಅವರನ್ನು ತಿಳಿದುದಾಗಿ ಹೇಳುತ್ತಿದ್ದೆ. ಎಲ್ಲಕ್ಕೂ ಮೊದಲು ಅವರನ್ನು ಕಂಡಾಗ, ಅವರ ಕುರೂಪ ಮುಖ ನೋಡಿ ಹೇಸಿಗೊಂಡುದನ್ನು ಹೇಳುತಿದ್ದೆ. ಅವ್ವ ಇಲ್ಲ'

ಅಬಚಿಯು ಈ ಸಲ 'ಎಷ್ಟದು ಅಳುವದು' ಎಂದು ತುಸು ಗದರಿಸಿದಳು. ಹೌದು, 'ನಾನೇಕೆ ದುಃಖಿಸಬೇಕು? ಅವರು ಮ ದುವೆಯನ್ನೇ ಆಗುವದಿಲ್ಲ ಎಂದು ನಿಶ್ಚಯಿಸಿರುವದಾಗಿ ಕಾಕಾ ಅನಲಿಲ್ಲವೆ? ತಾವು ಕುರೂಪಿ ಇರುವುದಾಗಿ ಕನ್ಯೆಯರು ಬರುವದಿಲ್ಲವೆಂಬ ಅಭಾವ ವೈರಾಗ್ಯವೊ? ಇಲ್ಲ, ತಾವು ಕುರೂಪಿ ಇರುವುದಾಗಿ, ಬಂದಹೆಂಡತಿಯ ಜೀವನದಲ್ಲಿ ವಿರಸವ

ನ್ನುಂಟು ಮಾಡಬಾರದಾಗಿ ಅವರ ಆಶಯವೆ? ಇಷ್ಟು ಅವರನ್ನು ಮೆಚ್ಚಿಯೂ ನನಗೆ ಅವರನ್ನೇ ಮದುವೆಯಾಗಬೇಕೆಂದು ಆಸೆಯೇನೂ ಇರಲಿಲ್ಲ. ಏನು ಇತ್ತೇ....? ಏನಾದರೂ ಅವರು ಮದುವೆಯಾಗುವವರೇ ಅಲ್ಲವಲ್ಲ.

ಮೊದಲಿನ ಬಿಕ್ಕು ಕಡಿಮೆಯಾಗತೊಡಗಿತು. ಒಂದುಕ್ಷಣ ಮೌನಿಯಾಗಿದ್ದೆ. ಒಕ್ಕಲುಗಿತ್ತಿಯು ಬಾಗಿಲನ್ನು ತೆರೆದುಕೊಂಡು ಹೊರಗೆಹೋದಳು

ಪಡಸಾಲೆಯಿಂದ ಕಾಕಾ ಮತ್ತು ಅವರ ನಡುವೆ ಮಾತು ನಡೆದುದು ಕೇಳಿಸುತ್ತಿತ್ತು. ನಡುವೆ ಪುರೋಹಿತರು ಹೇಳಿದರು.

"ಅದ್ಯಾಕ ಶಾಮಣ್ಣಾ, ಅವರು ಭಾಳ ಛಲೋ ಹಾಡು ಹಾಡತಾರ. ಆ ರೆಡಿಯೋದೊಳಗ ಹೇಳಿದ್ದು ತೊಗೊಂಡು ಏನು ಮಾಡತೀರಿ? ಲಗ್ನದೊಳಗ ಅವರದೊಂದು ಬೈಠಕ್ ಆಗಿ ಬಿಡ್ಲಿ. ಯಾಕ್ರಿ ರಾಜಣ್ಣ?"

'ಆ ರಾಜಮಹಲು, ಭವ್ಯ ಬೆಳದಿಂಗಳು! ಅಟ್ಟದ ಮೇಲಿನ ಅಂಗಣದಲ್ಲಿ ನನ್ನವರ ಎದೆಗೆ ತಲೆ ಆನಿಸಿ, ಅವರ ಹೃದಯ ವೀಣೆ ಮೀಟುತ್ತಿದ್ದೇನೆ! ಅವರು ಆಲಾಪನೆಯಲ್ಲಿ ಮಗ್ನರಾಗಿದ್ದಾರೆ. ಆ ಇರುಳು ಚಿರಂತನವಾಗಿ ಉಳಿಯಲಿ ಎಂದು, ಅಂದು ಗಾಡಿಯಲ್ಲಿ ಕಲ್ಪನೆಯನ್ನು ಕುದುರಿಸಿದ್ದೆನಲ್ಲವೆ?....' ಕಣ್ಣೀರು ಬರಲಿಲ್ಲ, ಅಳುವ ಶಕ್ತಿಯೇ ಉಡುಗಿ ಹೋಗಿತ್ತು.

ಸುರೇಶನು ಬಂದು "ಇಲ್ಲಿದ್ದೀರೇನು? ಏನು ಮಾಡತೀರಿ? ಇಲ್ಲೆ-ಹರಟಿ ಹೌದಲ್ಲೊ? ಎಷ್ಟು ಹುಡುಕಬೇಕು, ಅಕ್ಕಾ ನಿನ್ನ? ಅವರು ಹುಬ್ಬಳ್ಳಿಯಿಂದ ಬಂದಾರ, ಬೆಟ್ಟಿ ಆಗಬಾ ನಿನ್ನ ಕರಕೊಂಡು ಬರ್ತೇನಿ ಅಂತ ಹೇಳಿ, ಪಡಸಾಲ್ಯಾಗ ಒಬ್ಬರ್ನೇ ಕೂಡಿಸಿ ಬಂದೇನಿ" ಅಂದನು.

"ನಾ ಒಲ್ಲೆ" ಎಂದು ಹೇಳಿದೆ.

"ಹೋಗು—ಹೋಗು. ಇನ್ನೇನು ಅವರು ನಿನಗ ಭಾವನೇ ಆಗಬೇಕಲ್ಲ. ಸಂಕೋಚಯಾಕ? ಏನು ಗುರ್ತಿಲ್ಲಾ ಅಂತಿಲ್ಲಾ" ಎಂದು ಅಬಚಿಯು ಹೇಳಿದಳು.

ಮುಖವನ್ನೊರಸಿಕೊಂಡು ಮುಂಗುರುಳನ್ನು ಸರಿಪಡಿಸಿಕೊಂಡು, ನಂದೆ ಸುರೇಶನೊಂದಿಗೆ ಅವರ ಮುಂದೆ ಹೋಗಿ ನಿಂತೆ. "ನಮಸ್ಕಾರವಾ" ಎಂದರು. ನಾ ಮಾತೇನಾಡಲಿಲ್ಲ, ಕೈಮುಗಿದೆ ಮಾತ್ರ.

# ದೇವಕ್ಕ

ಆ ಇಬ್ಬರು ನೆಗೆಣ್ಣಿಯರ ಜಗಳನೋಡಲು ನೆರೆದಿದ್ದ ಜನ, ಇವರ ಬಾಯಃಚೀತ್ಕಾರ ಹಾಗೇ ಮುಂದುವರಿದುದನ್ನು ಕಂಡು ಬೇಸತ್ತು ತಂತಮ್ಮ ಮನೆಗಳಿಗೆ ತೆರಳತೊಡಗಿದರು. ಜನಹೋದುದನ್ನು ಕಂಡೋ ಏನೊ, ಇಬ್ಬರ ವಾಗ್ಯುದ್ಧದಲ್ಲಿ ಮೊದಲಿನ ಅಬ್ಬರ ಉಳಿಯಲಿಲ್ಲ. ದನಿಯೆಂಬುದು ನಾದವಿಲ್ಲದ ಕಂಚಿನ ಕೊಳವೆಯೊಳಗಿಂದ ಹಾದು ಬರುವಂತಾಗಿತ್ತು ಕೆಲಸಲ ಉಸುರೇಹೋಗಿ ಬರಿಯೆ ಬಾಯಿ–ನಾಲಗೆಗಳ ಸುಳಿದಾಟ ಕಂಡುಬರುತ್ತಿತ್ತು.

ಇಬ್ಬರ ಮನೆಯ ಬಾಗಿಲು ಎದುರುಬದುರಷ್ಟೆ. ಅವುಗಳ ನಡುವೆ ಎಂದರೆ ರಸ್ತೆಯ ಮಧ್ಯೆ ನಿಂತು ಇಬ್ಬರೂ ಕೈಕ್ಕೈ ಚಾಚಿ ವಾದಿಸುತ್ತಿದ್ದರು. ಎಷ್ಟಿದ್ದರೂ ದೇವಕ್ಕನ ಬಾಯಿಗೆ ಇನ್ನೊಬ್ಬಳು ಈಡಲ್ಲ. ಕೊನೆಗೆ ತಪ್ತಳಾಗಿ ದೇವಕ್ಕನು ತನ್ನ ಮನೆಯ ಚಪ್ಪರದಿಂದ ಒಂದು ಕೋಲನ್ನೇ ಹಿರಿಯ ಹೋಗಲು, ಇನ್ನೊಬ್ಬಳು ತನ್ನ ಮನೆಯ ಹೊಸ್ತಲಕ್ಕೆ ಸರಿದಳು. ಮತ್ತೆ ಅವಾಚ್ಯ ಶಬ್ದಗಳು ಓಣಿಯ ತುಂಬೆಲ್ಲ ಸೂರೆಯಾದವು.

ಅಡುಗೆಯ ಮನೆಯಲ್ಲಿ ದೇಪಕ್ಕನ ಹತ್ತುವರ್ಷದ ಮಗಳು ಪಾರೋತಿ ಹೆದರಿ ಸುಮ್ಮನೆ ಕೇಳುತ್ತಿದ್ದಳು. ಕೆಂಚವ್ವನು ಚೀರಿದಳು, "ನಿನಗ ಗಂಡ ಇಲ್ಲಾ. ನೀನ್ಯ ಊರ ಹಾ--ಗಿತ್ತಿ" ಅದಕ್ಕೆ ದೇವಕ್ಕನು "ಅವ್ವಾಳಿ ಹಂತಾ ಗಂಡ ಇದ್ದು ನೀ ಹಾ-ಗಿತ್ತಿ" ಎಂದು ಎದುರಿಸಿದಳು. ಈ ಹುರುಳಿಲ್ಲದ ವಾದಕ್ಕೆ ಮುಗಿತ ಇಲ್ಲವೆಂಬುದನ್ನು ಕಂಡು, ಕೆಂಚವ್ವನನ್ನು ಅವಳ ತಮ್ಮನು ಒಳಕ್ಕೆ ಕರೆದೊಯ್ದನು.

ಅವಳು ಒಳಗೆಹೋದ ಮೇಲೆ, ಇನ್ನೂ ಹತ್ತುನಿಮಿಷದ ವರೆಗೆ ದೇವಕ್ಕನು ಚೀರಾಡಿವಳು. ಆದರದು ಒಂಟಿಗೈಯಿಂದ ಕುಸ್ತಿಯಾಡಿದಂತಾಯಿತು. ಎದುರಾಳಿಯೂ ಇಲ್ಲ, ಕೇಳಲಿಕ್ಕೆ ಜನವೂ ಇಲ್ಲ. ದೇವಕ್ಕನ ಬಾಯಿ, ದೊಡ್ಡದೊಂದು ಮಳೆಬಂದು ನಿಂತಂತೆ, ಒಮ್ಮೆ ಶಾಂತವಾಯಿತು.

ಜಗಳದ ಮೂಲ ಇಷ್ಟೆ. ದೇವಕ್ಕನು ಸ್ವತಃಬಡಿದು ಒಣಗಿಸಿದ ಕುಳ್ಳುಗಳನ್ನು ತಂದು, ಅವಳ ಮಗಳು ಪಾರೋತಿ ತನ್ನ ಕಾಕಾನ–ಎಂದರೆ ದೇವಕ್ಕನ ಮೈದುನನ ಮನೆಗೆ, ಗೊತ್ತಾಗದೆ ಒಯ್ದು, ಉರಿಮಾಡಿ ಬಂದಿದ್ದಳು.

ದೇವಕ್ಕ ಒಳಗೆ ಬಂದಳು. ತಾಯಿಯ ರಾವುಬಡಿದ ಮುಖವನ್ನು ಕಂಡು, ಪಾರೋತಿ ಗಾಬರಿಯಾಗಿ ಮೂಲೆಗೆ ಸರಿದಳು. ಅವಳನ್ನೊಮ್ಮೆ ದುರು ದುರು ನೋಡುತ್ತ ದೇವಕ್ಕ ಒಲೆಯ ಕಡೆಗೆ ನಡೆದಳು. ಒಲೆಯೊ! ಹೊಗೆಯಾಡಿಸುತ್ತ ಹಾಯಾಗಿ ಸುಮ್ಮನೆ ಕುಳಿತಿದೆ. ಮಗಳಿಗೆ ಗೊತ್ತಾಯಿತು. ಅವಳಿಗೊಂದು ಚೂರು ಕಾಗದ, ಕಡ್ಡಿಯಪೆಟ್ಟಿಗೆ ಬೇಕು ಎಂದು. ತಾಯಿ ಹೇಳಲಿಲ್ಲ; ಪಾರೋತಿ ತಂದಳು. ಪಾರೋತಿಯ ದುರ್ದೈವಕ್ಕೆ ಅದರಿಂದ ಉರಿಯಾಗಲೇ ಇಲ್ಲ. ಒಲೆಯಲ್ಲಿ ಈಗಾಗಲೇ ಒಟ್ಟಿದ್ದ ಹಸಿಕುಳ್ಳಿನ ಮಹಿಮೆ ಎಂಬುದು ಸ್ಪಷ್ಟವಿತ್ತು. ದೇವಕ್ಕ ಒಮ್ಮೆ ಊದಿದಳು; ಕೈಯನ್ನು ಬಾಯಮರೆಗೆ ಹಿಡಿದು ಇನ್ನೊಮ್ಮೆ ಊದಿದಳು. ಈ ಸ್ವಾಗತದ ರೀತಿಯನ್ನು ಕಂಡು ಹೊಗೆ ಅವಳ ಕಣ್ಣುಮೂಗನ್ನು ಅಪ್ಪಿತು; ಬೂದಿ ತಲೆಯನ್ನು ತಟ್ಟಿತು.

ಆದರೆ ಈಗಾಗಲೇ ಉರಿ ಹತ್ತಿದ್ದ ಅವಳ ಮನಸ್ಸಿಗೆ ಹೊರಗಿನ ಹೊಗೆಯ ಪ್ರವೇಶ ಸಹಿಸಬಲ್ಲುದೆ? ಹತ್ತಿರದಲ್ಲೇ ಇದ್ದ ತಂಬಿಗೆಯಿಂದ ಒಲೆಯಲ್ಲಿ ನೀರನ್ನು ಹೊಯ್ದು, ಗೌಡಪ್ಪನವರ ಹೊಲಕ್ಕೆ ಹತ್ತಿಕಟ್ಟಿಗೆ ಹಿಡಿಯಲು ಹೊರಟು ನಡೆದಳು.

ತಾಯಿಹೋದ ದಿಕ್ಕನ್ನೇ ನೋಡುತ್ತಿದ್ದ ಮಗಳಿಗೆ ಮುಂದೇನು ಮಾಡಬೇಕೊ ತಿಳಿಯಲಿಲ್ಲ. ಅವಳು ತನ್ನ ಮೇಲಣ ಸಿಟ್ಟಿನಿಂದ ಒಲೆಯಲ್ಲಿ ನೀರನ್ನು ಸುರಿದು, ರೊಟ್ಟಿಬಡಿಯದೆ ಉಪವಾಸ ಹೋದ ವಿಚಾರ ಪಾರೋತಿಗೆ ಭಯವನ್ನು ಹೆಚ್ಚಿಸಿತು. ದೇವಕ್ಕ ಮನೆಯಲ್ಲಿರುತ್ತಿದ್ದರೆ, ತನ್ನ ಕಾಕಾನ ಮನೆಯ ಕಡೆಗೆ ನೋಡುವುದಕ್ಕೂ ಅವಳಿಗೆ ಆಸ್ಪದವಿರುತ್ತಿರಲಿಲ್ಲ. ಅಂದು ದೇವಕ್ಕ ಹೊಳೆಯ ನೀರಿಗೆಂದು ನಡೆದಾಗ, ಒಳಗಿದ್ದ ತಾನು ತನ್ನ ಮನೆಯ ಕುಳ್ಳುಗಳನ್ನು ಒಯ್ದುಕೊಡುವ ಸಾಹಸವನ್ನು ಆಕೆ ಎಂದೂ ಮಾಡುತ್ತಿರಲಿಲ್ಲ. ತನ್ನ ಮುಪ್ಪಿನ ಅಜ್ಜಿ ಮುಳ್ಳು, ಕಲ್ಲು ತುಳಿ

ಯುತ್ತ, ಕುಳ್ಳನ್ನು ತರುವುದನ್ನು ಕಂಡು, ಅಜ್ಜಿಯನ್ನು ನಿಲ್ಲಿಸಿ, ಒಣಗಿಸಿ ಒಟ್ಟಿದ್ದ ಕುಳ್ಳುಗಳನ್ನು ತಂದುಕೊಟ್ಟುದೂ ತಪ್ಪು ಎಂದು ಕೇಳಿಕೊಂಡಳು. ಇಷ್ಟೇ, ತನ್ನ ತಾಯಿ ಕಷ್ಟಪಟ್ಟು ಒಣಗಿಸಿದ ಕುಳ್ಳನ್ನು ಕಾಕಾನ ಮನೆಗೆ ಕೊಡುವಂತಾಗಬಾರದಿತ್ತು. 'ಅವ್ವ ಏನಿದ್ದರೂ ಸಿಟ್ಟಾಗುವಳೆಂಬುದು ತಿಳಿದೇ ಇದೆ. ಹಾಗೆ ನನಗೆ ಗೊತ್ತಿದ್ದರೆ, ನಾನೇಕೆ ಕೊಡುತ್ತಿದ್ದೆ? ಅದನ್ನೇ ತನ್ನ ತಾಯಿ ಎಬ್ಬಿಸಿ ಜಗಳವನ್ನೇಕೆ ಹೂಡಬೇಕು?' ಎಂದೂ ಚಿಂತಿಸಿದಳು. ಆದರೆ ಆಗಿನ ಸ್ಥಿತಿಯಲ್ಲಿ ತನ್ನಲ್ಲಿ ಏನೂ ತಪ್ಪಿಲ್ಲವೆನ್ನುವದಕ್ಕಿಂತ, ಅವ್ವ ಸಿಟ್ಟಿಗೇಳುವಷ್ಟು ಭಯಂಕರ ತಪ್ಪು ಮಾಡಿದೆ ಎನ್ನುವ ಭಾವ ಹೆಚ್ಚು ಬಲವತ್ತರವಾಗಿತ್ತು.

ಪಾರೋತಿಯ ಕಣ್ಣಲ್ಲಿ ಎರಡು ಹನಿ ನೀರು ಉದುರಿತು. ಅವ್ವನ ಸಿಟ್ಟೂ, ಒದರಾಟವೂ ನಿತ್ಯದ ಬದುಕಾಗಿದ್ದರೂ ಪ್ರತಿ ಸಲ ಅಂತಹ ಪ್ರಸಂಗ ಬಂದಾಗ, ಆ ಕ್ಷಣ ಹೆದರಿಕೆಯಿಂದ ಮುಂದೇನು ಗತಿ? ಎಂಬ ಉದ್ವೇಗ ಇದ್ದುದೆ. ಈ ಸಲವೂ ಹಾಗೇ ಆಯಿತು. ಅವಳು ಉಪವಾಸ ಹೋದದ್ದೊಂದು ಬೇರೆ; ಇನ್ನು ಮನೆಗೆ ಬರುವುದು ಸಂಜೆಗೇನೆ—ಎಂಬುದೂ ಸಮಸ್ಯೆಯಾಯಿತು.... ... ಆಗ ಥಟ್ಟನೆ ದಾರಿ ತೋಚಿತು 'ರೊಟ್ಟಿ, ಗುಗ್ಗರಿಯನ್ನು ಅಣಿಗೊಳಿಸಿ, ಹೊಲಕ್ಕೆ ಹೋಗಿ ತಾಯಿಗೆ ಕೊಟ್ಟು ಬರಬೇಕು. ತನ್ನ ಹೊಟ್ಟೆ ಹಸಿದಿದೆ. ತಾನೂ ತಿನ್ನಬೇಕು' ಎಂದು ಲೆಕ್ಕ ಹಾಕಿದಳು. ಈ ಸುಲಭ ಹಾದಿಗೆ ತನ್ನ ತಾನೇ ಮೆಚ್ಚಿದಳು.

ಒಲೆಯುರಿಯ ಸ್ಥಿತಿ ಹೀಗಾಗಿತ್ತು. ಪಾರೋತಿ ಎಲ್ಲವನ್ನೂ ಹೊರ ತೆಗೆದು, ಅಂತಹವೇ ಅರ್ಧಮರ್ಧ ಒಣಗಿದ ಕುಳ್ಳಿನಿಂದ ಉರಿಮಾಡಿದಳು. 'ಮನುಷ್ಯನಿಗೆ ತಾಳ್ಮೆಬೇಕು' ಎನ್ನುವುದರ ಅಸ್ಪಷ್ಟಪಾಠ ಅವಳ ಎಳೆ ಮನಸ್ಸಿಗೆ ನಾಟಿತು.

ರೊಟ್ಟಿ ದಪ್ಪವಾಗಿದ್ದರೂ, ಮಾಡಿ ಮುಗಿಸಿದಳು. ಮಾಡಿದಳು- ಅದೇ ಹೆಚ್ಚು. ಹೆಸರು ಕಾಳಿನ ಗುಗ್ಗರಿಯನ್ನು ಬೇಯಿಸಬೇಕೆಂದು ಬಡಬಡ ಬಂದು ನೋಡುತ್ತಾಳೆ, ಗಡಿಗೆಯಲ್ಲಿ ಕಾಳೇ ಇಲ್ಲ! ಪಾರೋತಿ ಗಾಬರಿಗೊಂಡಳು. ಹಿಂದೊಮ್ಮೆ ಮಾಡಿ ತನ್ನ ತಾಯಿ ತೀರಿಸಿರಬೇಕು ಎಂದು ಅನಿಸಿತು. ಮೊದಲಿಗೆ ನೋಡದೆ ಎಂತಹ ತಪ್ಪು ಮಾಡಿದೆ ಎಂದು ಹೆದರಿದಳು.

ಬರಿರೊಟ್ಟಿಗೆ ಜೊತೆಯನ್ನು ಹೇಗೆ ಅಣಿಗೊಳಿಸಬೇಕೊ ತಿಳಿಯಲಿಲ್ಲ. ಸ್ವಸ್ಥ ಕುಳಿತಳು. ಎಣ್ಣೆ ಕಾರಪುಡಿಯನ್ನಾದರೂ ಕೂಡಿಸುವ ಎಂದರೆ ಒಳ್ಳೆಣ್ಣೆ ಯಿಲ್ಲ. ಅವಳಿಗೆ ಬದುಕೇ ಬೇಸರಬಂದಿತು. ಆದರೆ ಹಸಿದ ಹೊಟ್ಟೆ ಕೇಳ ಲಿಲ್ಲ. ಮುಂಜಾನೆ ತಾಸು ಹೊತ್ತೇರುತ್ತಲೆ, ತಾಯೀ ಸಂಗಡ ರೊಟ್ಟಿ ತಿನ್ನುವವಳು, ಹೊತ್ತು ನಡುನೆತ್ತಿಯ ವರೆಗೇರಿದರೂ ಅದರ ಸುದ್ದಿ ಇಲ್ಲ

ಇನ್ನು ತನಗೆ ತನ್ನ ಕಾಕಾನ ಮನೆಯೇ ಗತಿ ಎಂದು ತೋಚದಿರಲಿಲ್ಲ. ಆದರೆ ಮುಂಜಾವಿನ ರಾದ್ಧಾಂತ ಮಾಸದೆ, ಸಂಪೂರ್ಣ ಕಣ್ಮುಂದಿದ್ದುದ ರಿಂದ, ಮೊದಲು ಅಲ್ಲಿ ಹೋಗುವುದಕ್ಕೇ ಹೆದರಿದಳು. ದೇವಕ್ಕನಿಗೆ ಗೊತ್ತಾದರೆ, ಎಂದೂ ಸುಮ್ಮನೆ ಬಿಡುವವಳಲ್ಲ. ಆದರೆ ಹಸಿವು ಹೆಚ್ಚಿ ಚ್ಚಾಗಲು ಬೈಸಿಕೊಳ್ಳದೆ ಇರುವ ಹಂಚಿಕೆಯೂ ಶೋಚಿತು. ಕಾಕಾನ ಮನೆಯಲ್ಲಿ, ತನಗಾಗಿ ಅವರು ಮಾಡಿದ ಪಲ್ಯ, ತಾಯಿಗಾಗಿ ಒಂದು ಮೂಲಂಗಿಗಡ್ಡೆ, ಕಾರಪುಡಿ, ತರಬೇಕು ಎಂದು ನಿರ್ಧರಿಸಿದಳು. ತನ್ನ ಕಾಕಾನ ಮನೆಯಲ್ಲಿ, ಯಾವಾಗಲೂ ತನ್ನ ಬೇಡಿಕೆಗೆ ಸ್ವಾಗತ ಎಂಬುದು ಪೂರಾ ಗೊತ್ತಿತ್ತು ಅವಳಿಗೆ. ಅವರೆಯ ಗುಗ್ಗರಿ, ಮೂಲಂಗಿಯನ್ನು ಕೊಡುತ್ತ ಅವಳ ಚಿಗವ್ವ "ಈ ಹೊತ್ತು ರಗಳೀಮಾಡಿ ಹೋಗ್ಯಾಳು ನಿಮ್ಮವ್ವ, ಮತ್ತ ಹೊಸದಾಗಿ ಇದಕ್ಕೆಲ್ಲೆ ಅನ್ನಿಕೊಳ್ಳೋಣವಾ." ಎಂದು ಮಾತು ಒಗೆದಳು. ಪಾರೋತಿಯು, ಪಲ್ಲೆ ತನಗಾಗಿಯೂ, ಮೂಲಂಗಿ ಯನ್ನು ಬೇರೆಯವರ ಮನೆಯಿಂದ ತಂದೆನೆಂದು ಹೇಳುವದಾಗಿಯೂ ತಿಳಿಸಿದಳು.

ಮಧ್ಯಾಹ್ನ ೧ ಘಂಟೆ ಅವಳು ಆಸ್ಥೆಯಿಂದ ಊಟಮಾಡುತ್ತಿರುವಾಗ, ನೆರಳು ಕಂಡಿತು. ಹುಬ್ಬೆತ್ತಿ ನೋಡಿದಳು; ಎದುರಿಗೇ ತನ್ನ ಅವ್ವ!

ಹೊಟ್ಟೆಯ ಏರ್ಪಾಡಿಗಾಗಿ, ಈಗ ಬರುವೆನೆಂದು ಹೊಲದಲ್ಲಿ ತಿಳಿಸಿ, ದೇವಕ್ಕನು ಮನೆಗೆ ಬಂದಿದ್ದಳು. ಇನ್ನೊಬ್ಬ ಕೂಲಿಯಾಳು, "ಮತ್ತೆಲ್ಲೆ ಬಿಸಲಾಗ ಹೋಗಲೇ? ಇದರಾಗs ತಿನ್ನೋಣು" ಎಂದು ತನ್ನ ಗಂಟನ್ನು ತೋರಿಸಿದಳು. 'ಪಾರೀನೂ ಉಪವಾಸ ಆದಾಳು' ಎಂದು ಕೂಡಲೇ ಹೇಳಿದ್ದಳು ದೇವಕ್ಕ.

"ಅಯ್ಯ ! ಬಾರ; ರೊಟ್ಟಿ ಮಾಡಾಕ ಬರತೇತಿಲ್ಲ ಆಕೆಗೆ. ಮಾಡಿ ಕೊಂಡು ತಿಂತಾಳು."

"ಇಲ್ಲನ, ಮನ್ಯಾಗ ಅಕಡೀಕಾಳು ಏನೂ ಇಲ್ಲ; ಪಲ್ಲೇವಕ" ಎಂದು ನಿಜಸ್ಥಿತಿಯನ್ನರುಹಿದಳು ದೇವಕ್ಕಾ.

"ನೀ ಈಗ ಹೋದಿ ಅಂದ್ರ, ವ್ಯಾಳೇ ಬಾಳಾಕ್ಕೈತಿ, ಮನಿಗೆ ಹ್ವಾದದ್ದು ಗೊತ್ತಾದ್ರ ಗೌಡಪ್ಪನವರು ಬೇದಾರು."

"ಏನ ಮಾಡತಾರ? ಹೊಟ್ಟೆಗಿಲ್ಲದ್ರ ದುಡೀಬೇಕಂತೇನು? ಮುಂಜಾನೆ ಒದರ್‍ಯಾಡಿ ಬಂದೀನಿ. ಕೂಸು, ಗಾಬ ಆಗೇತಿ. ಒಮ್ಮೆ ಮನಿ ಕಂಡು ಬರತೇನಿ" ಎಂದು ಹೊರಟಳು.

ಹೀಗೆ ಇಬ್ಬರ ಹಸಿವನ್ನೂ ಕಳೆಯಲು ಏನು ಮಾಡಲಿ ಎಂದು ಯೋಚಿಸುತ್ತ ಬರುವಾಗ, ಮಗಳು ಇಲ್ಲಿ ಚಕ್ಕಂದವಾಗಿ ಕಾಕಾನ ಮನೆ ಯಿಂದ ರೊಟ್ಟಿ, ಅವರೆಯ ಕಾಳಪಲ್ಲೆ, ಮೂಲಂಗಿ ತಿನ್ನುತ್ತ ಕೂಡ್ರುವುದೆ? ಇವಳೇನು ಮಗಳೇ ಭಾಗಾದಿಯೋ? ಎಂಬುದಾಗಿ ಇದು ವರೆಗೆ ಒತ್ತಾಗಿ ಬಂದಿದ್ದ ಸಹಾನುಭೂತಿ— ಮಮತೆ ಎಲ್ಲ ಹಾರಿಹೋಯಿತು. ಹಿಂದು ಮುಂದಿನ ಯೋಚನೆಯಿಲ್ಲದೆ, ರೊಟ್ಟಿಯನ್ನು ಮಗಳ ಕೈಯಿಂದ ಕಸಿದು, ಅದೇ ಮೂಲಂಗಿಯ ಗಡ್ಡೆಯಿಂದ ತಲೆಗೊಮ್ಮೆ ಹೇರಿ, ಎಲ್ಲವನ್ನೂ ನಡು ಬೀದಿಯಲ್ಲಿ ಚೆಲ್ಲಿದಳು. ಮಗಳು ಗಾಬರಿಯಾಗಿ ಓಡಿ ಹೋಗಬೇಕೆನ್ನುವಾಗ, ದೇವಕ್ಕ ಅವಳನ್ನು ಮಗ್ಗಲು ಮುರಿದು ಮುದ್ದೆಯಾಗುವಂತೆ, ಕಣ್ಣು ಮೂಗು ಏನನ್ನೂ ನೋಡದೆ, ರಪರಪನೆ ಬಡಿಯತೊಡಗಿದಳು.

ಪಾರೋತಿಯ ಆಕ್ರೋಶ ಓಣಿಯನ್ನೇ ಎಬ್ಬಿಸಿತು ಉಳಿದವರು ಬಿಡಿಸಿ ಕೊಳ್ಳಲೆತ್ನಿಸಿದರು. ಅವಳ ಕಾಕಾನ ಮನೆಯಲ್ಲಿದ್ದ ಅಜ್ಜಿ, ಮೊಮ್ಮಗಳ ದನಿ ಕೇಳಿದವಳೇ ನಡುಬೀದಿಗೆ ಧಾವಿಸಿದಳು. ಒಳಗೆ ಹೋಗಲು ಮನಸ್ಸು ಹಾತೊರೆಯಿತು. ತನ್ನನ್ನು ಕಂಡು ಮಗಳನ್ನು (ಮತ್ತಷ್ಟು) ಬಡಿದಾಳು ಎಂಬ ಭಯದಿಂದ, ಅಲ್ಲೇ ಉರಿಬಿಸಿಲಲ್ಲಿ ನಿಂತಳು.

ಹೊಡೆತದ ನೋವನ್ನು ತಾಳಲಾರದೆ, ಪಾರೋತಿ ಹೊರಬರಲು ಧಾವಿಸಿ ದಳು. ದೇವಕ್ಕನ ಕಣ್ಣಿಗೆ, ಆ ಹಣ್ಣುಮುದುಕಿ ನಡುಬೀದಿಯಲ್ಲಿ ನಿಂತದ್ದು ಕಂಡಿತು. ಮತ್ತೂ ಮಗಳು ತನಗಾಗದವರ ನೆರಳೇಬೇಕೆನ್ನುತ್ತಾಳಲ್ಲ

ಎಂದು, ಎಳೆದು ತಂದು, ತಟ್ಟೆಯ ಚಪ್ಪರಕ್ಕಾನಿಸಿ, ಚಪ್ಪರ ಅಲುಗಾಡುವಂತೆ, ತನ್ನ ಕೈಕಾಲುಗಳೆರಡನ್ನೂ ಉಪಯೋಗಿಸಿ ಹೇರಿದಳು.

ಪಾರೋತಿಯ ಅಳುವಿಗಿಂತ ಮುದುಕಿಯ ಆಕ್ರಂದನಕ್ಕೆ ಓಣಿಯ ಜನ ಒಳಗೆ ಧಾವಿಸಿತು. ವ್ಯರ್ಥವಾಗಿ ಮಗು ಸಾಯುತ್ತಿದೆ ಎಂದು ಬಿಡಿಸಲೆತ್ನಿಸಿದರು. ಆದರೆ ದೇವಕ್ಕ ಬಗ್ಗಲಿಲ್ಲ. ಕೈಯಲ್ಲಿ ಹಿಡಿದಿದ್ದ ಕಸಬರಿಗೆಯನ್ನು ಮುಂದರಿದಿದ್ದ ಒಬ್ಬಳು ಕಸಿದಳು. ದೇವಕ್ಕನು ಮಗಳ ಕೂದಲನ್ನು ಗಟ್ಟಿಯಾಗಿ ಹಾಗೇ ಹಿಡಿದು, ಅಲ್ಲೇ ತಳಗಿದ್ದ ಚರಿಗೆಯನ್ನೆತ್ತಿ ತಲೆಯನ್ನು ಜಜ್ಜಿದಳು!

ಅಷ್ಟರಲ್ಲಿ ಪಾರೋತಿಯ ಕಾಕಾ ಹೊಲದಿಂದ, ಗಳೆ ಮುಗಿಸಿಕೊಂಡು, ಎತ್ತುಗಳೊಡನೆ ಬಂದನು. ತನ್ನ ಪ್ರೀತಿಯ ಮಗಳ ರೋದನ ಕೇಳಿತು. ಹನುಮನು ಒಮ್ಮೆಲೆ ಒಳಕ್ಕೆ ನುಗ್ಗಿದನು. ದೇವಕ್ಕನ ಕೈಯ್ಯಲ್ಲಿಯ ತಂಬಿಗೆ ಕಸಿದು, ಜೋರಿನಿಂದ ಅವಳನ್ನು ದೂಡಿದನು. ಪಾರೋತಿಯನ್ನು ಎತ್ತಿಕೊಂಡು ತನ್ನ ಮನೆಗೆ ನಡೆದನು.

ಯಜ್ಞಪಶು ಪಾರಾದುದನ್ನು ಅವಳು ದುರುದುರನೆ ನೋಡಿದಳು. ದೇವಕ್ಕನಿಗೆ ಮೈಮೇಲೆ ಆಗ ಅರಿವು ಬಂತು. ನೆರೆದ ಹೆಣ್ಣುಮಕ್ಕಳಲ್ಲಿ ಕೆಲವರು ದೇವಕ್ಕನ ಎದುರಿಗೇ ಅವಳ ರಕ್ಕಸತನಕ್ಕೆ ಹೀಗಳೆದರು. ಇನ್ನು ಕೆಲವರು ಅವಳ ನೆಗೆಣ್ಣಿ—ಕೆಂಚವ್ವನ ಮುಖಾಂತರ ನಡೆದ ಸಂಗತಿ ತಿಳಿಯಲು ಹವಣಿಸಿದರು.

ಹೊರಗೆ ಕೆಂಚವ್ವನ ದೊಡ್ಡ ದನಿ ಕೇಳಬಂದಿತು. "ಆ ಚಾಂಡಾಲಿಗೆ ಏನಾದರೂ ಸಹನ ಇಲ್ಲಾ. ಮುಂಜಾನೆ ಆ ಕೂಸು ನಮ್ಮನಿಗೆ ಕುಳ್ಳು ತಂದು ಕೊಟ್ಟಿದ ಅಂತ ಸುಳ್ಳೇ ಕಾಲ ಕೆದರಿ ಜಗಳಾ ಹೂಡಿದಳು. ತನ್ನ ಮಾತು ಮ್ಯಾಲ ಆಗಲಿಲ್ಲಾಂತ ಹೊಟ್ಟ್ಯಾಗ ಕುದೀತಿತ್ತು. ಮಧ್ಯಾನ್ಹ ಈಟೊತ್ತಾದರೂ ಪಾರೂ ಕೂಳಿಲ್ದ ಇರೋದು ನನ್ನ ಕಡಿಂದ ನೋಡಾಕಾಗ್ಲಿಲ್ಲವಾ. ಅಂತೇಳಿ ಒಂದೀಟು ಪಲ್ಲೇವು ಕೊಟ್ರ ಈಕೀಗೆ ತನ್ನ ಮಗಳು ಉಣ್ಣೋದು ಸಹನ ಆಗ್ಲಿಲ್ಲವಾ. ಅದರ ಪ್ರಾಣಾ ತಗೋಬೇಕಂತ ಹೊಲ ಬದುಕು ಬಿಟ್ಟುಬಂದು, ಅದನ್ನ ಮೈಹುಳೀ ಹೊಡೀಬೇಕಂದ್ರ, ಎಷ್ಟರ ಇದ್ದೀತವಾ ಈಕಿ ಹೊಟ್ಟೀಕಿಚ್ಚು. ಹೆಂಡಾ ಕುಡಿಯೋ ರಣ್‌ರಕ್ಕಸಿ ಆಗ್ಯಾಳು."

ಅವಳ ಮಾತನ್ನ ಕೇಳುತ್ತಿದ್ದ ಒಬ್ಬಳು ಹೂಗುಟ್ಟಿದಳು. "ಹೌದವಾ. ನನ್ನ ಕಡಿಂದಾ ಆ ಹುಡುಗಿನ್ನ ನೋಡಾಕಾಗ್ಲಿಲ್ಲಾ. ವೈಯನ್ನೋದು ರಾಮಾರಗತ ಆಗೇತಿ. ಫೋಜದಾರ್‍ರಿಗೆ ಹೇಳ್ಯರ‍್ಲ ಕಳಸ್ರಿ. ಹತ್ತು ವರ್ಷ ಜೇಲಿನ್ಯಾಗ ಕೂಡಿಸಿದ ವ್ಯಾಗ ಬುದ್ಧಿ ಬರತೇತಿ ಈಕೀಗೆ."

ದೇವಕ್ಕನಿಗೆ ಪ್ರತಿಯೊಂದು ಮಾತೂ ಕೇಳಿಸುತ್ತಿತ್ತು. ನೆರೆದ ಜನ ಒಬ್ಬೊಬ್ಬರಾಗಿ ಹೊರಟು ಹೋದರು. ತಂಬಿಗೆಯೂ ಕಸಬರಿಗೆಯೂ ಅಲ್ಲೇ ಉರುಳಾಡುತ್ತಿದ್ದವು. ಎಲ್ಲಿಂದಲೋ ಕಣ್ಣೀರು ಪ್ರವಾಹದಂತೆ ಅವಳಿಗೆ ಒಮ್ಮೆಲೆ ನುಗ್ಗಿತು.

ತನ್ನ ಗಂಡ ತೀರಿಕೊಂಡಾಗ ಕೂಡ ಆಕೆ ಇಷ್ಟು ಅತ್ತಿರಲಿಲ್ಲವೇನೊ. ಮರುದಿನದ ವರೆಗೆ ಯಾರೂ ಬಂದು ಅವಳನ್ನು ವಿಚಾರಿಸಲಿಲ್ಲ. ಹಿಂದಿನ ನೆನಹುಗಳು ಮಾತ್ರ ಮುಗಿಬಿದ್ದು, ಅವಳನ್ನು ಪೀಡಿಸಿದವು

ಡಿಳ್ಳಿಯೂ ಹನುಮನೂ ಕೂಡಿ ಇರುವಾಗ ಒಂದು ದಿನವೂ ಒಬ್ಬರಿಗೊಬ್ಬರು ವಿರಸವಾಗಿ ನಡೆದುಕೊಂಡುದಿಲ್ಲ. ಅವರ ತಂದೆ ಇಬ್ಬರ ಮದುವೆಯನ್ನು ಒಂದೇ ಕಾಲದಲ್ಲಿ ಮಾಡಿದನು. ದೇವಕ್ಕನೂ, ಕೆಂಚವ್ವನೂ ಮನೆಗೆ ಬಂದ ದಿನವೇ ಕೂಡಿದ್ದ ಸಂಸಾರದಲ್ಲಿ ಜಗಳ ಪ್ರಾರಂಭವಾಯಿತು. ತಂತಮ್ಮ ಹೆಂಡಂದಿರ ಮುಚ್ಚುಮಾತನ್ನು ಕೇಳಿ, ಇವರೂ ಕೆಲ ಸಲ ಒಬ್ಬರಿಗೊಬ್ಬರ ಮೇಲೆ ಹರಿಹಾಯುವುದುಂಟು. ಆದರೆ ಎದುರಾಳಿ ಹಿನ್ಸರಿದುಕೊಂಡನೆಂದರೆ ಇನ್ನೊಬ್ಬನಿಗೆ ಮರುಕ್ಷಣದಲ್ಲಿ ತನ್ನ ತಪ್ಪು ತೋರಿ, "ಹೆಂಗಸು-ಹೆಂಗಸರ ಜಗಳ ಇದ್ದದ್ದೇ"—ಎಂದು ಮತ್ತೆ ಅನ್ಯೋನ್ಯವಾಗಿರುತ್ತಿದ್ದರು. ಈ ಮನೋವೈಶಾಲ್ಯ ಇಂಥದೇ ಇನ್ನೊಂದು ಪ್ರಸಂಗದಲ್ಲಿ ಇನ್ನೊಬ್ಬನನ್ನು ತಿದ್ದುತ್ತಿತ್ತು. ಹೀಗೆ ಈ ಆತ್ಮೀಯತೆ ಎಲ್ಲಿಯ ವರೆಗೆ ಬೆಳೆಯಿತೆಂದರ, ಇಬ್ಬರದೂ ಹಿಸೆ ಆಗಿ, ಬೇರೆ ಬೇರೆ ಮನೆಗಳಲ್ಲಿ ಇರುತ್ತಿದ್ದರೂ, ಎಲ್ಲ ವ್ಯವಹಾರಗಳಲ್ಲಿ, ಮಾತಿನಲ್ಲಿ ಒಂದೇಯಾಗಿರುತ್ತಿದ್ದರು. ಇದು ಇಬ್ಬರೂ ಹೆಣ್ಮಕ್ಕಳಿಗೆ ಸೇರೀತೆ? ಪರಿಸ್ಥಿತಿಯನ್ನರಿತು ಕೆಂಚವ್ವ, ಸುಮ್ಮನಿರುತ್ತಿದ್ದಳು. ಬಹಳವಾದರೆ ಗಂಡನನ್ನು ಹಂಗಿಸುತ್ತಿದ್ದಳು. ಎದುರಿಗೇ ವಾದಿಸಿ ಬಡಿತ ತಿನ್ನುತ್ತಿದ್ದಳು.

ಹಿರಿಯವನಾದ ಡಿಳ್ಳಿಯ ಮನೆಯಲ್ಲೇ ಅವರಿಬ್ಬರ ತಾಯಿ ಇರುತ್ತಿದ್ದುದರಿಂದ ಹನುಮನು ಅನೇಕಸಲ ಇವರಲ್ಲಿಗೆ ಬರುತ್ತಿದ್ದನು. ಅಣ್ಣನು

ಬಲವಂತಮಾಡಿದರೆ ಅವನ ಸಂಗಡವೇ ತೊಟ್ಟಿನ್ನುವನು. ಚಿಕ್ಕಮರುವಾದ ಪಾರೋತಿಯನ್ನು ಕಂಡಾಗ ಎಂದಿಲ್ಲದ ಅಕ್ಕರತೆ ಅವನಿಗೆ. ತಿಳಿಗಣ್ಣಿನ ಪಾರು ಎಲ್ಲರ ಕಣ್ಣಿಗೂ ಬಹಳ ಮುದ್ದಾಗಿ ಕಾಣುತ್ತಿದ್ದಳು. ಎತ್ತಿಕೊಂಡು ಆಡಿಸಿದಷ್ಟು ಅವಗೆ ತೃಪ್ತಿಯಿಲ್ಲ. ತನ್ನ ಮನೆಗೂ ಕರೆದೊಯ್ಯುತ್ತಿದ್ದ. ಎರಡೂ ಮನೆಗೆ ಒಂದೆ ಮಗುವಾಗಿದ್ದ ಪಾರೋತಿಗೆ ಇದೆಲ್ಲ ರೂಢಿಯಾಗಿಬಿಟ್ಟಿದೆ. ಇನ್ನು ಮುದುಕಿಯೂ ಅಷ್ಟೆ! ಉಳಿದವರೆಲ್ಲ ಹೊಲ ಬದುಕಿಗೆ ಹೋದರೆಂದು ಮುದುಕಿ ಮೊಮ್ಮಗಳು ಇಬ್ಬರೇ ಮನೆಯಲ್ಲಿರುವವರು. ತಾಯಿಗಿಂತ ಮುದುಕಿಗೇ ಅವಳ ಪಾಲನೆಯ ಕೆಲಸ ಬೀಳುತ್ತಿತ್ತು. ದೇವಕ್ಕನು ಇದೆಲ್ಲವನ್ನು ನೆನೆಯುತ್ತಿದ್ದಳು.

ಮೂರು ವರ್ಷಗಳ ಕೆಳಗೆ ಡಿಳ್ಳಿಯು ವಿಷಮಜ್ವರದಿಂದ ಹಾಸಿಗೆ ಹಿಡಿದವನು ಮೇಲಕ್ಕೇಳಲಿಲ್ಲ. ಡಿಳ್ಳಿಯು ತೀರಿಕೊಳ್ಳುತ್ತಲೂ ಮುದುಕಿಯು ಹನುಮನ ಮನೆಗೇ ಬಂದಳು ಪಾರೋತಿಯೂ ಮುದುಕಿಯ ಬೆನ್ನು ಹತ್ತಿ ದಿನದ ಬಹುಭಾಗವನ್ನೆಲ್ಲ ಅಲ್ಲಿಯೆ ಕಳೆಯುತ್ತಿದ್ದುದು ಈಗ ದೇವಕ್ಕನಿಗೆ ಎಲ್ಲವೂ ಕಣ್ಮುಂದೆ ಕಟ್ಟಿದಂತಾಯಿತು.

ಮಕ್ಕಳು ಚಿಕ್ಕವಿರುವಾಗ ಹೇಗಾದರೂ ಕೈಬಿಟ್ಟು ಆಡಿದರೆ ಸಾಕು ಎನ್ನುವ ಭಾವ ಉಳಿದ ತಾಯಂದರಂತೆ ದೇವಕ್ಕನಿಗೂ ಇದ್ದುದೆ. ಅದರಲ್ಲೂ ಆಕೆ ಹೊಲಗೆಲಸಗಳಲ್ಲಿ ಇಡೀ ಹಗಲನ್ನು ಕಳೆಯಬೇಕಾಗುತ್ತಿತ್ತು. ರಾತ್ರಿಗೆ ಆದರೆ ಅಡುಗೆ, ಬೀಸುವದು, ಇತ್ಯಾದಿ ಇದ್ದೇ ಇರುತ್ತಿತ್ತು. ತನ್ನ ಗಂಡ ತೀರುವವರೆಗೂ, ಮಗು ತನ್ನನ್ನು ಹಚ್ಚಿಕೊಂಡಿಲ್ಲ ಎಂಬುದನ್ನು ಆಕೆ ಸ್ವಲ್ಪವೂ ಗಣಿಸಲಿಲ್ಲ.

ಪಾರೋತಿಯ ಮೇಲೆ ಈ ಬಗೆಯ ಸಿಟ್ಟು ತನಗೆ ಬಂದ ಮೊದಲ ಸಂದರ್ಭವನ್ನು ದೇವಕ್ಕ ನೆನೆದಳು. ಆವತ್ತು ಮುದುಕಿ ಹನುಮನ ಮನೆಗೆ ಹೋಗುವೆನೆಂದು ಹೊರಟುನಿಂತ ದಿನ ಪಾರೋತಿ ತೀರಸಣ್ಣ ಮಗುವೇನಲ್ಲ, ಏಳುವರ್ಷದಾಕೆ. ಆದರೂ ಮುದುಕಿಯ ಸಂಗಡ ಹೋಗುವೆನೆಂದು ಹಟ ಹಿಡಿದಳು. ಆವತ್ತಿನ ಬೆಳಿಗ್ಗೆ ಮುದುಕಿಯ ಸಂಗಡ ದೇವಕ್ಕ ನ್ಯಾಯ ಮಾಡಿದ್ದಳು. ಅದರ ಫಲವಾಗಿಯೇ ಆವತ್ತು ಆಕೆ ಮನೆಬಿಟ್ಟು ಹೊರಟು ನಿಂತುದು. ದೇವಕ್ಕನಿಗೆ ಆಗೂ ಸಿಟ್ಟು ಬಂತು ಮಗಳ ಮೇಲೆ. ಆದರೆ ಏಕೊ

ಅದನ್ನು ತಡೆದುಕೊಂಡಳು. ಬೆದರಿಕೆಗೆ ಮಗಳ ಮೇಲೆ ಕೈಯೆತ್ತ ಹೋದಾಗ, “ ಅದೇನ ಮಾಡೀತಽ ಕಂದಮ್ಮಾ ಏನತಿಳಿತದ ಅದಕ್ಕ. ಮನೀಬಿಟ್ಟಽ ನನ್ನ ಹೊರಗ ಹಾಕಲಿಕ್ಕೆ ನಿಂತೀದಿ, ಇದೊಂದ ಮಾತರೆ ನಡಸು. ನಾಯೇನು ನನ್ನ ಮಗಳ್ನ ಅತ್ಲಾಗಽ ಒಯ್ಯುದುಲ್ಲ.” ಎಂದು ಮುದುಕಿ ನಿರ್ವಿಣ್ಣ ದನಿಯಲ್ಲಿ ಹೇಳಿದ್ದಳು; ದೇವಕ್ಕನಿಗೆ ನಿಜಕ್ಕೂ ಆಗ ತುಸು ಮನ ಕರಗಿತು. ಹಾರ್ದಿಕ ಕಣ್ಣೀರಿಗೆ ಯಾರು ಸೋಲದೆ ಇರುವರು?

‘ ಆವತ್ತೇ ನನಗೆ ಎನಿಸಿತು. ಪಾರೋತಿ ಅವರ ಮನೆಗೆ ಹೋಗ ಕೂಡದು ಎಂದು ಇಂದೇಕೆ ಪಾರೋತಿ ಅಂದಿನಿಂದಲೆ ತುಸು ತುಸು ನನ್ನ ಕೈಬಿಟ್ಟಹಾಗೆ ’ ಎಂದು ಈಗ ಅಂದುಕೊಂಡಳು ದೇವಕ್ಕಾ.

ನಿಜವೆ ಅದು. ಕಾಕಾನ ಮನೆಯಲ್ಲಿ ತಿನ್ನುವುದು ಉಣ್ಣುವುದು, ಆದರೆ—ಎಲ್ಲವೂ ಅವಳಿಗೆ ಸಲ್ಲುತ್ತಿತ್ತು. ಸಂಜೆಯಾಯಿತೆಂದರೆ ಒಮ್ಮೊಮ್ಮೆ ಅಜ್ಜಿಯ ತೊಡೆಯ ಮೇಲೇ ಮಲಗಿಬಿಡುತ್ತಿದ್ದಳು. ಆಗೆಲ್ಲ ದೇವಕ್ಕ ಸಿಡಿಮಿಡಿಗೊಂಡು ಎಷ್ಟುಸಲ ಕರೆದುಕೊಂಡು ಬಂದಿಲ್ಲ!

ಒಮ್ಮೆ ಇಂತಹದೇ ಒಂದು ಸಂದರ್ಭ ಅವಳ ನೆನಪಿನ ಮುಂದೆ ನಿಂದಿತು. ಸಂಜೆಯಾಗಿ ಒಂದುತಾಸು ಆಗಿರಬಹುದು. ಅದೇ ಬದುಕು ಮುಗಿಸಿಕೊಂಡು ಮನೆಗೆಬಂದಿದ್ದಳು. ಗೌಡಪ್ಪನವರ ಮನೆಯಲ್ಲಿ ಹೋಳಿಗೆಕೊಟ್ಟಿದ್ದರು. ಮಗಳಿಗೆ ತಿನ್ನಿಸಲೆಂದು ಮನೆಗೆ ತಂದಳು. ಯಾವ ತಾಯಿಗೆ ತಾನೆ ಆಗ ಸಂತೋಷವೆನಿಸುವುದಿಲ್ಲ. ಮನೆಬಾಗಿಲನ್ನು ತೆರೆಯುತ್ತಲೇ ‘ಪಾರೂ’ ಎಂದು ಕೂಗಿದಳು. ಎದುರಿಗಿನ ಮನೆಯಿಂದ “ಬಂದೆ,” “ಬರತಾಳು” ಎಂಬುದಾಗಿ ಎರಡು ಉತ್ತರ ಬಂದುವು. ದೇವಕ್ಕ ಬಡಬಡನೆ ರೊಟ್ಟಿಬಡಿದಳು. ಗಂಗಳದಲ್ಲಿ ಎಲ್ಲ ಬಡಿಸಿ ಇನ್ನೂ ಬರಲಿಲ್ಲವೆಂದು ಮಗಳನ್ನು ಕರೆಯು ಬಂದಳು. ಈಗ ಅರ್ಧ ತಾಸಿನ ಹಿಂದೆ ‘ಬಂದೆ’ ಎಂದಿದ್ದ ಪಾರೋತಿ ಆಗಲೆ ನಿದ್ದೆಹೋಗಿದ್ದುದರಿಂದ ದೇವಕ್ಕನಿಗೆ ಬಹಳ ಉತ್ಸಾಹ ಭಂಗವಾಯಿತು. ಅವರ ಮನೆಯಲ್ಲೇ ಆಕೆ ಅವಳನ್ನು ಎಬ್ಬಿಸತೊಡಗಿದಳು. ಮುದುಕಿ ಸುಮ್ಮನಿರಬಾರದೆ ?

“ ಮಲಗಿದ ಹುಡುಗಿನ್ನ ಯಾಕ ಎಬ್ಬಿಸತೀಯ? ರೊಟ್ಟೇ ಸುದಕಿ ತಿಂದಽ ಮಲಗೇತಿ ಮಕ್ಕೊಳ್ಳಿ ಬಿಡು” ಎಂದಳು.

ಆದರೂ ದೇವಕ್ಕ ಸಿಟ್ಟಿನಲ್ಲಿ ಹೊರಗೆ ಕರಕೊಂಡು ಬಂದಳು. 'ಪಾರೀ ಪಾರೀ' ಎಂದು ಕೂಗಿದಳು. ನಿದ್ದೆಗಣ್ಣಿನಲ್ಲೇ ಪಾರೋತಿಯ ಪ್ರಶ್ನೆ.

"ಏನು ?"

"ನಾಳಿಂದಾ ಅವರ ಮನ್ಯಾಗ ಉಣ್ಣಾಕ ಕುಂದ್ರಬ್ಯಾಡಾ."

"ಹೂಂ."

"ನಾಳಿಂದಾ ಅವರ ಮನ್ಯಾಗ ಮನಕೊಳ್ಳೋದೂ ಬ್ಯಾಡಾ. ನಿನಗ ನಿದ್ದಿಬಂತಂದ್ರ, ಮನಿಗೆಬಾ. ತಿಳಿತೇನು ?"

ಮತ್ತೆ "ಹೂಂ"

ಮಗಳ ಹೂಂಗುಟ್ಟುವಿಕೆಯಿಂದ ಸಿಡಿಗೊಂಡು, ದೇವಕ್ಕ ಒದರಿದಳು. "ಇದಕ್ಕೇನರೆ ಹೆಚ್ಚುಕಡಿಮಿ ಆತಂದ್ರ, ನಿನ್ನ ಜೀವಾನೇ ತಗೋತೆನಿ" ಪಾರೋತಿಗೆ ಕೊನೆಯ ಮಾತು ಕೇಳಿಸಿರಬೇಕು. ಅದಕ್ಕೆಯೆ ನಿದ್ದೆಗಣ್ಣಿನ 'ಹುಂ'ಕಾರ ಇದಕ್ಕಿರಲಿಲ್ಲ.

ಅಚ್ಚೆಯಿಂದ ತನ್ನ ಕೊರಳನ್ನು ಅಪ್ಪಿ, ನಿದ್ದೆಹೋಗುತ್ತಿದ್ದ, ಮಗಳ ಮೇಲೆ ಹೀಗೆ ಸಿಟ್ಟುಗೊಳ್ಳುವುದು ಏನು ಛಂದ ಎಂದು ಅನಿಸಿತು ಅವಳಿಗೆ. "ಹೋಳಿಗಿ ತಿಂತೀ ?" ಎಂದಳು.

ಪಾರೋತಿ ಒಲ್ಲೆನೆಂದಳು. ಎಚ್ಚರಾಗಿತ್ತು ಅವಳಿಗೆ. ತೆಳಗಿಳಿಯುವೆನೆಂದಳು. 'ಇರಲಿ' ಎಂದು ದೇವಕ್ಕ ಹಾಗೇ ಕರೆದುಕೊಂಡೇ ಇದ್ದಳು. ಆದರೆ ಪಾರೋತಿ ಇಳಿದು, ನಡೆಯುತ್ತ ಬಂದಳು.

ಪಾರೂ ತನಗಾಗಿ ಹಾಸಿದ್ದ ಗೊಂಗಡಿಯಮೇಲೆ ಹೋಗಿ ಮಲಗಿಬಿಟ್ಟಳು. ದೇವಕ್ಕನಿಗೆ ಮಗಳಿಗೆ ಹೋಳಿಗೆಯನ್ನು ತಿನ್ನಿಸಲೇ ಬೇಕು ಎಂಬ ಹಟ. ಮಗಳನ್ನು ಎಬ್ಬಿಸಿದಳು.

ನಿದ್ದೆಗಣ್ಣಿನಲ್ಲಿ ಯಾರಿಗೂ ತುಸು ಒರಟುತನ ಬರುವುದೇ. "ನಾ ಒಲ್ಲೆಬೇ, ನೀ ತಿನ್ನು. ನನ್ನ ಹೊಟ್ಟೆತುಂಬೇತಿ" ಎಂದು ನುಡಿದು ಪಾರು ತಾಯಿ ತನ್ನ ರಟ್ಟೆಯನ್ನು ಹಿಡಿದಿದ್ದನ್ನು ಗಣಿಸದೆ, ಮತ್ತೆ ಒರಗಿದಳು. ದೇವಕ್ಕ ನಿಂತಲ್ಲಿಗೇ ಅವಳಿಗೆ ಬೆನ್ನಿಗೊಂದೇಟು ಒದೆದು, ಮತ್ತೆ ರಟ್ಟೆ ಹಿಡಿದು ಎಬ್ಬಿಸಿದಳು.....ಪಾರೋತಿ ಹೆದರಿ ಜುಕ್ಕಾಜುಲುಮೆಯಿಂದ ಅರ್ಧ

ತಿಂದರೂ, ಉಳಿದರ್ಧವನ್ನು ತಾನು ತಿನ್ನದೆ, ಬೇರೆಯವರಿಗೆ ಕೊಟ್ಟಿದ್ದೂ ಈಗ ಅವಳ ಮುಂದೆ ಮಿಂಚಿಹೋಯಿತು.

ಮರುದಿನ ಮಾತ್ರ ದೇವಕ್ಕ ಮಗಳನ್ನು ಒಳಿತಾಗಿ ಬೈದು ಅವರ ಮನೆಯಲ್ಲಿ ಏನೂ ತಿನ್ನತಕ್ಕದ್ದಲ್ಲವೆಂದು ತಾಕೀತು ಮಾಡಿದಳು. ಅದ ರಂತೆ ಪಾರೂ ಮೊದ ಮೊದಲಿಗೆ ತನ್ನ ಕಾಕಾನ ಮನೆಯಲ್ಲಿ ಒಲ್ಲೆನೆಂದರೂ, ಅಜ್ಜಿ ಸುಮ್ಮನೆ ಬಿಡುವಳೆ?

ಕೆಲತಿಂಗಳುಗಳು ಹೀಗೇ ಕಳೆದುವು. ದೇವಕ್ಕನಿಗೆ ಗೊತ್ತಾಗದೆ ಹೋದೀತೆ? 'ಅವರ ಮನೆಗೇ ಹೋಗಕೂಡದು. ತೀರ ಹರಕತ್ತಿನ ಕೆಲಸ ವಿದ್ದರೆ ಮಾತ್ರ ಹೋಗುವುದು,' ಎಂದು ಕಟ್ಟಪ್ಪಣೆ ಮಾಡಿದಳು. ಈ ಮಧ್ಯೆ ಕೆಂಚವ್ವಹನುಮರ ಸಂಗಡ ದೇವಕ್ಕ ನ್ಯಾಯಮಾಡಿದ್ದು ಎಷ್ಟು ಸಲವೊ ಏನೊ.

ಪಾರೋತಿ ಹೆದರಿಕೆಯಿಂದ ತನ್ನ ತಾಯಿಯ ಆಜ್ಞೆಯನ್ನು ಆಚರಣೆ ಯಲ್ಲಿ ತರುವುದಕ್ಕೆ ಹಾರ್ದಿಕವಾಗಿ ಪ್ರಯತ್ನಪಟ್ಟಳು. ಆದರೆ ಚಿಕ್ಕಂದಿನ ಈ ವ್ಯವಹರಣೆ ಅವಳ ಮೈಯುಂಡಿತ್ತು. ದೇವಕ್ಕನಿಗೆ, ಮಗಳ ಸರಳತೆ ಗೊತ್ತು. ಅವರೇ ಆ ಮನೆಯವರೇ, ಅವಳಿಗೆ ಪ್ರೋತ್ಸಾಹಕೊಡುತ್ತಾರೆ. ಎಂದು ಅವರ ಮೇಲೆ ಇಲ್ಲದ ಕೋಪ. ಆದರೂ ಅಂದುಕೊಳ್ಳುವಳು 'ಪಾರೋತಿಯೇನು ಸಣ್ಣ ಕೂಸಲ್ಲ, ಹತ್ತುವರ್ಷದಾಕೆಯಾಗಿದ್ದಾಳೆ. ನನಗೂ ಅವರಿಗೂ ಆಗುವದಿಲ್ಲ, ಎಂದು ಗೊತ್ತಿದ್ದೂ ಏಕೆ ಹೋಗಬೇಕು' ಎಂದು ಅವಳ ಮೇಲಣ ಬೇಸರ. ಹೀಗೆ ದೇವಕ್ಕನ ಸಹನೆ ಮೀರಿದ ಹಾಗೆಲ್ಲ ಪಾರೋತಿ ತಾಯಿ ಇಲ್ಲದಾಗ ಹೋಗಿ ಬರುವ ಪರಿಪಾಠವನ್ನಿಟ್ಟಳು. ಒಮ್ಮೊಮ್ಮೆ ಸಿಕ್ಕಳೆಂದರೆ ಹೊಡೆತ ತಿನ್ನುತ್ತಿದ್ದಳು. ಇಂದು ಅದು ವಿಕೋಪಕ್ಕೇ ಮುಟ್ಟಿತ್ತು.

ಆವತ್ತು ದೇವಕ್ಕನಿಗೆ ಎಚ್ಚರವಾದಾಗ ಆದೇ ಬೆಳಗು ಹರಿದಿರಬೇಕು. ಹಾಸಿಗೆಯ ಮೇಲೆ ಎದ್ದು ಕುಳಿತು ಆಕೆ ಈ ಎಲ್ಲ ಮಾತುಗಳನ್ನು ಹಿಂದು ಮುಂದಾಗಿ ಮೆಲಕುಹಾಕುತ್ತಿದ್ದಳು. ಕಾಕಾನ ಮನೆಯ ಈ ನೆಚ್ಚು ಕ್ರಮ ವಾಗಿ ಬೆಳೆದು, ಇವತ್ತು ಅದು ಒಂದು ಕೊನೆಯ ಮಟ್ಟಕ್ಕೆ ಬಂದಂತಾಗಿ ಇನ್ನು ತನ್ನ ಮಗಳು ತನ್ನ ಮನೆಗಾದರೂ ಬರುತ್ತಾಳೋ ಇಲ್ಲವೊ ಎಂಬ

ಸಂಶಯ ಮೂಡಿತು. ಮಗಳ ಮೈತುಂಬ ಬಾಪುಗಳಿದ್ದು ರಕ್ತ ಹಸಿರುಗ ಟ್ಟಿದೆಯೆನ್ನುತ್ತಿದ್ದ ಮಾತು ಲಕ್ಷ್ಯಕ್ಕೆ ಬಂದಿತು. ' ಇನ್ನೆಂದೂ ಯಾವ ಕಾರಣದಿಂದಲೂ ಆಕೆಯನ್ನು ನಾ ಹೊಡೆಯುವದಿಲ್ಲ. ಈಗ ಅವಳನ್ನು ಕರೆತರುತ್ತೇನೆ. ' ಎಂದು ಚಟ್ಟನೆ ಎದ್ದಳು.

ಮುಖತೊಳೆದುಕೊಂಡು ಬಾಗಿಲಿಗೆ ಒಂದು ನಿಮಿಷ ತಡೆದು ನಿಂತಳು. ಎಲ್ಲಿಂದಲೊ ಸಂಕೋಚ ಬಂದು ಅವಳನ್ನು ಮುತ್ತಿತು. ' ನನ್ನ ಹೊಡೆತ ಗಳಿಂದ ಗಾಯಗೊಂಡಿದ್ದ ಮಗಳನ್ನು ಯಾವ ಕಕ್ಕುಲಾತಿಯಿಂದ ಮನೆಗೆ ಬಾಎಂದು ಕರೆಯಲಿ ? ಮನೆಯಲ್ಲಿಯ ಜನ ನನ್ನನ್ನು ಹಂಗಿಸಲಿಕ್ಕಿಲ್ಲವೆ ? '

' ಅದು ಏನೇ ಇದ್ದರೂ ತಾಯಿಯಾದವಳು ಮಗಳನ್ನು ಕರೆಯಲು ಸಂಕೋಚ ಎಷ್ಟೂ ಬೇಡ. '

' ಆದರೂ ನಾನು ಮಗಳಿಗೆ ಅನ್ಯಾಯ ಮಾಡಿದ್ದೇನೆ '

' ಮಾಡಿದ್ದರೂ ಚಿಂತೆಯಿಲ್ಲ ಆಕೆಗೇನಾದರೂ ಆದರೆ ಅದಕ್ಕೆ ನಾನು ಉಪಚರಿಸಬೇಕು. ಪರದೇಶಿಯ ಹಾಗೆ ಮಂದಿಯ ಮನೆಯಲ್ಲಿ ಉಳಿಯ ಬೇಕೆ ? '

ಈ ಪಟ್ಟು ಹೊರಟೇ ಬಿಟ್ಟಳು. ಆದರೆ ಯಾವುದೊ ಒಂದು ತೊಪ್ಪ ಲಿನ ಔಷಧವನ್ನು ಪಾರೋತಿಯು ಗಾಯಗಳಿಗೆ ಹಚ್ಚುತ್ತಿದ್ದುದರಿಂದ ಆಕೆ ' ಹಾ....ಅವ್ವಾ ' ಎಂದು ಎಳೆದೆಳೆದ ಉಸಿರಿನಲ್ಲಿ ನರಳುತ್ತಿದ್ದಳು.

ಹೊರಟಿದ್ದ ದೇವಕ್ಕ ಥಟ್ಟನೆ ಹಿಂದಿರುಗಿ ಮನೆಗೆ ಬಂದಳು. ಐದು ನಿಮಿಷ ಏನು ಮಾಡಬೇಕೊ ಸುತಾಯಿಸಲಿಲ್ಲ. ಅಷ್ಟರಲ್ಲಿ ಜೊತೆಯ ಕೂಲಿ ಯಾಳು ಬಂದು, 'ದ್ಯಾವಕ್ಕಾ ಬದುಕಿಗೆ ಬರ್ತೀಯಾನ ? ' ಎಂದು ಕರೆಯ ಬಂದಳು. ದೇವಕ್ಕನಿಗೆ ಇಂಥದೇನಾದರೂ ಬೇಕಾಗಿತ್ತು. 'ಬರ್ತೀನಿ ನಿಲ್ಲು' ಎಂದು ಒಳಗೆ ಹೋದಳು.

ದಿನವೂ ಹೊಲಕ್ಕೆ ಹೋಗುವಾಗ ರೊಟ್ಟಿ ಒಯ್ಯುವ ರೂಢಿ ಆಯಿತು. ನಿನ್ನೆ ಮಗಳು ಮಾಡಿಯಿಟ್ಟಿದ್ದವುಗಳನ್ನೇ ಒಯ್ಯುವ ಎಂದು ಒಲೆಯ ಕಡೆಗೆ ನಡೆದಾಗ ನಾಲ್ಕು ರೊಟ್ಟಿಗಳನ್ನು ಕಟ್ಟದೇ ಇಟ್ಟಿದ್ದ ಅರಿವೆಯ ಗಂಟು ಕಾಣಿಸಿತು. ತಲೆ ಹಿಡಿದುಕೊಂಡು ಸ್ವಸ್ಥ ಕುಳಿತಳು. ಮಗಳನ್ನು ಕರತರುವ

ವಿಚಾರ ಮತ್ತೊಮ್ಮೆ ಬಂತು. ಆದರೆ ಅಲ್ಲಿಗೇನುಹೋಗಲಿಲ್ಲ. ಬಡಬಡ ರೊಟ್ಟಿಯನ್ನು ಕಟ್ಟಿಕೊಂಡು ಹೊಲಕ್ಕೆ ನಡೆದಳು.

ದೇವಕ್ಕ ದಾರಿಯಲ್ಲಿ ಮಾತನಾಡಲಿಲ್ಲ. ವಿಚಾರದಲ್ಲಿದ್ದಳು. 'ನೋವು ಸ್ವಲ್ಪ ಗುಣವಾಗಿ ಮಗಳು ಓಡಾಡುವಂತಾಗಲಿ, ಕರತಂದು ಬಿಡುವೆ. ಆದರೆ ಎರಡು ದಿನಕ್ಕಿಂತ ಹೆಚ್ಚು ಬಿಡಲಾರೆ. ಇವತ್ತು ಯಾವಾರ? ಶನಿವಾರ. ನಾಳೆ ಬೇಡ, ಸೋಮವಾರ ಮುಂಜಾನೆ........'

"ಗೌಡಪ್ಪನವರ ಮನೀತಾವ ಹೋಗಿದ್ದೇನು ?" ಎಂದು ಜೊತೆಗಿದ್ದವಳು ಮಾತಿಗೆ ಮೊದಲು ಮಾಡಿದಳು.

"ಇಲ್ಲಾ, ಹೋಗಿಲ್ಲ ಯಾಕಂತ ?"

"ಅದ್ಕ ನಿನ್ಹೆ ನೀ ಹೊಲದಾಗ ಯಾಡ್ಡ ತಾಸು ಹ್ವಾರೆಮಾಡಿ ಹೋದಾಕಿ ಬರಲೇ ಇಲ್ಲಾ, ನಿನ್ನೀ ನಿನ್ನ ಕೂಲಿ ಲೆಕ್ಕಕ್ಕ ಹಿಡದಿಲ್ಲಂತ"

"ಕೇಳ್ಯಾರು. ಬದಕಿಗೆ ಬಂದದ್ದು ಸುಳ್ಳೇನು? ಯಾಡ್ಡತಾಸು ಹೆಂಗಂತ? ಈಟೊತ್ತಿನವಟಾ ಹೊಲದಾಗ್ಲ ಇದ್ದೀನಿ. ಒವ್ಪೊತ್ತಿನ ಕೂಲಿಅರೆ ಹಿಡ್ಯಾಕಬೇಕು" ಎಂದಳು ದೇವಕ್ಕ.

"ಅಲ್ಲs ಅದೇನs ನಿನ್ನೆ ಬಾಳ ರಂಬಾಟಮಾಡಿ ಮಗಳ್ನ ಹೊಡೆದಂತ್ಯೆಲ್ಲ? ಕಬ್ಬೇರಗೇರಿ ತುಂಬೆಲ್ಲಾ ಸುದ್ದಿ ಹಬ್ಬೇತಿ, ನಿನ್ ನೆಗೆಣ್ಣಿ ಎಲ್ಲಾರ ಮುಂದೂ ಹೇಳಕೊಂತ ಹೊಂಟಾಳಲ್ಲ, ಆದ್ದರೆ ಏನು ?"

"ಆ ಹೊಲಿಮುಂಡೀನs ಎಲ್ಲಾಮಾಡಿದಾಕಿ, ನನಗೇನು ಮಗಳು ಬ್ಯಾಡಾಗ್ಯಾಳೇನು ?"

"ಆದರೆ ಏನು ಒಂದೀಟು ಹೇಳಲಾ."

"ಅದನ್ನು ತೊಗೊಂಡು ಏನ್ ಸುಡತೀ. ಈ ಪಾರಿ ಕಾಕಾನ ಮನಿ ಕಾಕಾನ ಮನಿ ಅಂತ ಎಲ್ಲಾದಕೂ ಬಡಕೊಂಡ್ರ ನಾ ಏನ ಸಾಯಬೇಕು ಹೇಳು. ನಿನ್ನೆ ಓಟ ಸಿಟ್ಟನ್ಯಾಗಿದ್ದೆ, ಹೊಟತಾತಿಂದ್ಲು" ತನ್ನದು ತಪ್ಪು ಎನಿಸಿದ್ದರೂ, ದೇವಕ್ಕನ ಅಭಿಮಾನ ಅದನ್ನು ಬೈಲಿಗಿಡಲು ಅಷ್ಟು ಒಪ್ಪಲಿಲ್ಲ.

ಹೊಲಬದುಕನ್ನು ಮುಗಿಸಿಕೊಂಡು ದೇವಕ್ಕ ಮನೆಗೆ ಬರುವಾಗ ಆಗಲೆ ಕತ್ತಲಾಗತೊಡಗಿತು. ಬಾಗಿಲು ತೆರೆದಾಗ, ಮಗಳಿಲ್ಲದ ಮನೆ ಒಮ್ಮೆಲೆ ಎದ್ದು ಬಂದಂತೆನಿಸಿತು. ಮಗಳನ್ನು ಮನೆಗೆ ತರುವ ವಿಚಾರ

ರಭಸದಿಂದ ಮತ್ತೆ ನುಗ್ಗಿತು. ನಾಡದು ಕರತರಬೇಕು ಎಂದುಕೊಂಡಳಲ್ಲ, ನಾಳೆಗೇ ಹೋಗಬೇಕು ಎಂದು ಗೊತ್ತುಪಡಿಸಿಕೊಂಡಾಗಲೆ ಮನಸ್ಸು ತುಸು ಹಗುರಾಯಿತು.

ನಾಳೆಗೆ ಹಿಟ್ಟಿರಲಿಲ್ಲ, ಜೋಳ ಬೀಸಬೇಕಾಗಿತ್ತು. ದಿನವೂ ಮಗಳು ಬೀಸಲಿಕ್ಕೆ ಹಿಡಿಯುತ್ತಿದ್ದಳು. ಮಗಳಿಗೆ ತಾನು ಹಾಡು ಕಲಿಸುತ್ತ ಬೀಸುವುದನ್ನು ಶ್ರಮವೆನಿಸಿಕೊಳ್ಳದಂತೆ ಮುಗಿಸುತ್ತಿದ್ದಳು. ಇವತ್ತು ಭಾರವಾದ ಮನಸ್ಸಿನೊಡನೆ ತಿರುಗುವ ಕಲ್ಲೂ ಭಾರವಾಯಿತು.

ಕೈಗಳು ಮುನ್ನೋಡಿ ತಮ್ಮ ಕೆಲಸ ಮಾಡುತ್ತಿದ್ದವು. ಮನಸ್ಸು ಮಗಳನ್ನು ನೆನೆಯುತ್ತಿತ್ತು. 'ಪಾರು ಈಗ ನನ್ನ ಬಗ್ಗೆ ಏನೆಂದು ವಿಚಾರಿಸುತ್ತಿರಬೇಕು ? ನನ್ನ ಅವ್ವ ಎಷ್ಟು ಕೆಟ್ಟವಳು ! ಹೀಗೇಕೆ ಹೊಡೆಯುತ್ತಾಳೆ ? ನನ್ನದೇನು ಅಂತಹ ತಪ್ಪು ? ಕಾಕಾನ ಮನೆಯವರು ಎಷ್ಟು ಒಳ್ಳೆಯವರು, ಎಂದು ಅಂದುಕೊಳ್ಳುತ್ತಿರಬಹುದೆ ?.... ... ನಿಜವಾಗಿಯೂ ನಾ ದುಷ್ಟೆಯೆ ? ಅಲ್ಲ. ಎಷ್ಟುಸಲ ಪಾರೋತಿಯನ್ನು ಕಕುಲಾತಿಯಿಂದ ಕಂಡಿಲ್ಲ, ಆರೈಕೆ ಮಾಡಿಲ್ಲ. ಎಷ್ಟೆಂದರೂ ನಾನು ತಾಯಿಯಲ್ಲವೆ ? ಇಷ್ಟೆ, ಸಿಟ್ಟುಬಂದಾಗ ನನಗೆ ತಡೆಯಲಾಗುವದಿಲ್ಲ. ಅದನ್ನೀಕೆ ಸಹಿಸಬಾರದೇನು ? .... ಅಯ್ಯೋ ಹುಚ್ಚುತನವೇ ! ಸಹಿಸಬೇಕಂತೆ. ಇನ್ನೂ ಚಿಕ್ಕ ಕಂದಮ್ಮ ಅಂತಹ ತಾಳ್ಮೆ ನನಗೇ ಇಲ್ಲ.

'ಕಂದಮ್ಮ ಹೆಂಗಾದಳು? ಹತ್ತುಹನ್ನೊಂದು ವರ್ಷದಾಕೆಯಾಗಿದ್ದಾಳೆ. ತಿಳಿಯಬಾರದೇನು ಈಕೆಗೆ ? ನನಗೂ ಆ ಮನೆಯವರಿಗೂ ಆಗುವುದಿಲ್ಲ ಎನ್ನುವುದು ? ಮತ್ತೂ ಅಲ್ಲೀ ಏಕೆ ಹೋಗಬೇಕು ? ತಾಯಿಯ ಕರುಳನ್ನು ಮರೆತು, ಅವರಿಗೆ ಅಂಟಿಕೊಳ್ಳುವುದು ಇದೆಲ್ಲಿಯ ನ್ಯಾಯ ? ಲೋಕದಲ್ಲಿ ಎಂದಾದರೂ ಹೀಗೆ ನಡೆಯುವುದೆ ? ಊಹು. ನನ್ನದೇನು ಅಂತಹ ತಪ್ಪಿಲ್ಲ.

ಜೋಳ ಮುಗಿಯುತ್ತ ಬಂದಾಗ ಲಕ್ಷ್ಯ ಇತ್ತ ತಿರುಗಿತು. 'ಅದೆಲ್ಲ ಇಲ್ಲ. ಮಗಳನ್ನು ನಾಳೆ ಕರೆತರಲಿಕ್ಕೇಬೇಕು. ಮಂದಿಯೊಳಗೆ ಎಷ್ಟು ಅಸಹ್ಯ ! ನನ್ನ ಮಗಳು ನನ್ನ ಮನೆಯಲ್ಲೇ ಇರಬೇಕು, ನಾಳೆಗೇ ಕರತರುವೆ'

ಎನ್ನುವ ಉದ್ಯೋಗದಲ್ಲಿ ಕೊನೆಯ ಮುಕ್ಕಿನೊಂದಿಗೆ ಜೋರಾಗಿ ಒಮ್ಮೆ ತಿರುವಿ ಮುಗಿಸಿದಳು.

ಊಟ ಮಾಡುವಾಗ ಅವಳ ಮನಸ್ಸು ಸಂಭ್ರಮಗೊಂಡಿತ್ತು. 'ನಾಳೆ ಅಡಿಗೆ ಮಾಡಿಟ್ಟೇ ಕರತರಬೇಕು. ಬಂದಕೂಡಲೇ ಊಟಕ್ಕೆ ಕೂಡ್ರಿಸುವೆ. ಈ ಮಜ್ಜಿಗೆಯನ್ನು ನಾನು ಹಾಕಿಕೊಳ್ಳುವುದು ಬೇಡ. ನಾಳೆ ಅವಳ ಗಂಜಿಗಾಗಿ ಇರಲಿ. ಮುಂಜಾನೆ ಎದ್ದ ಕೂಡಲೇ ಸೋಮಣ್ಣನ ಮನೆಯಿಂದ ಹಾಲು ತರುತ್ತೇನೆ. ನಾಳೆ ಯಾವಾರ? ಆದಿತ್ಯವಾರ. ಅನಾಯಾಸ ಡಾಕ್ಟರರೂ ಗುತ್ತಲದಿಂದ ಬರುತ್ತಾರೆ. ಅವರನ್ನು ಕರೆದು ತೋರಿಸುವೆ.'

ದೇವಕ್ಕನಿಗಾಗಿ ಬೆಳಕು ಹರಿಯಿತು. ವಾತಾವರಣ ನಿರಭ್ರವಾದಂತೆ ಎನಿಸಿತು. ಅಡುಗೆ ಮುಗಿಸಿಕೊಂಡು, ಮುಖತೊಳೆದುಕೊಂಡು ಬಾಗಿಲಿಗೆ ಬಂದಳು. ಏನೋ ನೆನಪಾಯಿತು. ಮಗಳು ಬಂದಕೂಡಲೇ ಮಲಗಲಿಕ್ಕೆ ಬೇಡವೆ? ಒಳಗೆ ಬಂದು ಗೊಂಗಡಿ ಹಾಸಿ, ಮೇಲೊಂದು ದುಪ್ಪಟಿಯನ್ನು ಹಾಕಿ, ಹೊದ್ದುಕೊಳ್ಳಲು ತನ್ನದೊಂದು ಸೀರೆಯನ್ನು ಮಡಿಚಿಟ್ಟು ನಡೆದಳು. ತನ್ನ ಕೈಯಾರೆ ಮಗಳನ್ನು ಹೊಡೆದು, ಅದೇ ಕೈಯಿಂದ ಉಪಚರಿಸಬೇಕಾಯಿತಲ್ಲ ಎಂದು ಬೇಗುದಿಗೊಂಡಳು. ಆದರೂ ಅದನ್ನು ತಡೆದುಕೊಂಡು ಹೊರನಡೆದಳು.

ಎದುರಿಗಿನ ಮನೆಯ ಮುಂದೆ ಬಂದು ನಿಂತಾಗ ಯಾರನ್ನು ಕರೆಯಬೇಕೊ ದೇವಕ್ಕಗೆ ತಿಳಿಯಲಿಲ್ಲ. ಒಮ್ಮೆಲೆ ಒಳಗೆ ಹೋಗುವುದೂ ಬೇಡವಾಯಿತವಳಿಗೆ. ಆಪ್ತರಾದರೂ ತನಗಾಗದವರ ಮನೆಯಲ್ಲವೆ? ಕಡೆಗೆ ಮಗಳ ಹೆಸರಿನಿಂದಲೆ ಕೂಗಿದಳು. 'ಪಾರೂ' ಎಂದು ಒದರಿದಾಗ ಯಾರೂ ಉತ್ತರ ಕೊಡಲಿಲ್ಲ ಆದರೆ ಹಿಟ್ಟಿನಗೈಯಿಂದ ಕೆಂಚವ್ವ ಹೊರಬಂದಳು. ಇಬ್ಬರೂ ಒಂದು ನಿಮಿಷ ಒಬ್ಬರನ್ನೊಬ್ಬರು ನೋಡಿದರು. ಕೆಂಚವ್ವ ಕೊಂಕಿನಿಂದ ನುಡಿದಳು. 'ಪಾರೂ, ಹೊರ್‍ಯಾಕೆ ಬಾರವಾ. ನಿಮ್ಮ ಅಬ್ಬರತೀಂದ ಕರ್‍ಯಾಕ ಬಂದಾಳು. ಹೋಗಬಾ. ಯಾಡ್ಡು ದಿವಸ ಮಗಳು ಇದ್ದದ್ದೂ ಬಿಟ್ಟದ್ದೂ ಏನೊ ಖಬರಿಲ್ಲ. ಹೊಡದು ಚುರುಚುರು ಅಂದ ಕೈ, ಈಗ ಆರೇತಿ, ಅದಕ್ಕs'

ಬೆಂದು ಬೆಂದು ಹೆಣ್ಣಾದ ಅಂತಃಕರಣಕ್ಕೆ ಕೊಳಕುಮುಳ್ಳನ್ನು ಚುಚ್ಚಿ

ತಿಮವಂತೆ ಆಡಿದ ಮಾತುಗಳವು! ದೇವಕ್ಕನ ಪ್ರಜ್ಞೆ ಹಿಡಿತದಲ್ಲುಳಿಯಲಿಲ್ಲ. ಮಾತು ಮುಗಿಯುವ ಮುನ್ನವೇ 'ನಿನಗ್ಯಾಕ್ಸ ಸೆಟವೀ, ಇಲ್ಲದ ಕಾರಭಾರಾ?' ಎಂದೆನ್ನುತ್ತ ಆಕೆಗೆ ಎರಡೇಟು ಕೊಟ್ಟಳು. ತಡವಿಲ್ಲದೆ ಬೆಂಕಿ ಹೊತ್ತಿತು. ದೇವಕ್ಕನ ಕೂದಲನ್ನು ಹಿಡಿದು ಕೆಂಚವ್ವ ಎಳೆದಳು. ದೇವಕ್ಕ ಅವಳ ಕುತ್ತಿಗೆಗೆ ಕೈ ಹಾಕಿದಳು.

ಇಬ್ಬರ ಚೀರಾಟ ಕೇಳಿ ಹನುಮಪ್ಪನು ಧಾವಿಸಿದ. ಅವರಿಬ್ಬರನ್ನು ಬಿಡಿಸಲು ಅವನಿಗೆ ತಡಹಿಡಿಯಲಿಲ್ಲ. ಆವೇಶದಿಂದ ದೂಡಿಸಿಕೊಂಡವಳಾಗಿ ದೇವಕ್ಕ ನಡುಬೀದಿಯಲ್ಲಿ ನಿಂತು ಆಕ್ರೋಶಗೈದಳು. "ನನ್ನ ಮಗಳ್ನ ಕಳಸ್ರಿ ಕರಕೊಂಡು ಹೋಗಾಕ ಬಂದೀನಿ" ಎಂದಳು. ಆದರೆ ನಡೆದ ಪ್ರಸಂಗ ಬೇರೆ ದಾರಿ ಹಿಡಿದು, ದೇವಕ್ಕನ ಹತೋಟಿಯನ್ನು ಮೀರಿತ್ತು.

ಗಡಸು ದನಿಯಲ್ಲಿ ಹನುಮನು "ನಿನ್ನ ಮಗಳ್ನ ಕಳಸೂದಿಲ್ಲ" ಎಂದನು.

"ನನ್ನ ಮಗಳು ನನಗ ಬೇಕು. ಹೆಂಗಕಳಸೂದಿಲ್ಲ ನೋಡತೇನಿ" ಎಂದು ದೇವಕ್ಕ ಮನೆಯೊಳಗೆ ಹೋಗಲೆತ್ನಿಸಿದಳು. ಹನುಮನು ಭೀಮಕಾಯನಾಗಿ ಬಾಗಿಲಿಗೆ ಇದ್ದನು. ಇತ್ತ ಕೆಂಚವ್ವನೂ ಒದರಾಡಿದಳು. ಪರಿಸ್ಥಿತಿ ವಿಕೋಪಕ್ಕೇ ಹೋಯಿತು. ಅರ್ಧ ಆಕ್ರೋಶ, ಅರ್ಧ ಅಳುವಿನಲ್ಲಿ ದೇವಕ್ಕ "ಪಾರೂ, ನಾ ಬಂದೀನಿ ಹೊರ್ಯಾಕ ಬಾ, ಈ ಚಂಡಾಲ್ರು ನನ್ನ ಬಿಡವಲ್ರು" ಎಂದು ಚೀರಿದಳು. ಆದರೆ ಪಾರೂ ಎದ್ದುಬರುವ ಸ್ಥಿತಿಯಲ್ಲಿ ರಲಿಲ್ಲ.

ದೇವಕ್ಕ ನಡುಬೀದಿಯಲ್ಲಿ ನಿಂತು ಹಣೆಹಣೆಗಟ್ಟಿಸಿಕೊಂಡಳು. ಲಟಿಕೆ ಮುರಿದಳು, ಅವರ ಮನೆಬಾಗಿಲಿಗೆ ತುಸು ಮಣ್ಣು ತೂರಿದಳು, ಕಣ್ಣೀರು ಕರೆದಳು, ಮಂದಿ ನೆರೆಯಿತು. ಕೆಲವರ್ು ಅವಳ ಮಗಳನ್ನು ಅವಳಿಗೆ ಕೊಟ್ಟು ಬಿಡಿರಿ. ನೀವೆಷ್ಟರವರು?" ಎಂದರು. ಅಂತವರಿಗೆಲ್ಲ ಕೆಂಚವ್ವ ತನ್ನ ಕಪಾಳವನ್ನು ತೋರಿಸಿದಳು. ದೇವಕ್ಕ ಅಸಹಾಯಳಾಗಿ ಗೌಡಪ್ಪನವರ ಮನೆಗೋಡಿದಳು.

ದೇವಕ್ಕ ಹೋದುದನ್ನು ಕಂಡು ಹನುಮನು ಸರಿಯಾದುದನ್ನೇ ಆಲೋಚಿಸಿದ. ಗೌಡಪ್ಪನವರು ಬಂದಮೇಲೆ ಏನುಮಾಡಬೇಕು ಎಂದು

ಯೋಚಿಸುತ್ತಿದ್ದ. ಅವನಾದರೂ ಇಷ್ಟು ಹಟತೊಡುತ್ತಲೆ ಇರಲಿಲ್ಲ. ಮರು ದಿನವೇ ಅವಳ ಮನೆಗೆ ಪಾರುವನ್ನು ಕಳುಹೋಣ ಎಂದುಕೊಂಡಿದ್ದ. ಇಡೀ ಎರಡು ದಿನ ದೇವಕ್ಕ ಮನೆಕಡೆಗೆ ಹಾಯದಿದ್ದುದನ್ನು ಕಂಡು ಅವನಿಗೆ ಸಿಟ್ಟು ಬಂತು. ಕೋಮಲ ಶರೀರದ ಪಾರುವನ್ನು ಕಂಡು ಅದು ಇಮ್ಮಡಿಸಿತು. ಅಣ್ಣನ ನೆನಪೂ ಆಯಿತು. ಕೆಂಚವ್ವನು ಬೇರೊಂದು ರೀತಿಯಲ್ಲಿ ಅವನನ್ನು ಈ ವಿಷಯದಲ್ಲಿ ಗಟ್ಟಿಮಾಡಿ, ತನ್ನ ದ್ವೇಷಸಾಧಿಸಿಕೊಂಡಳು. ಪಾರೂ ತನ್ನ ಮನೆಯಲ್ಲಿರುವ ಅಪೇಕ್ಷೆಗಿಂತ ತನ್ನ ವೈರಿ ದ್ಯಾವಕ್ಕನಿಗೆ ಮುಯ್ಯಿ ಮುಟ್ಟಲಿ ಎಂದುಕೊಂಡಳಾಕೆ. ಮುದುಕಿಯಂತೂ ನಿನ್ನೆಯಿಂದ 'ಪಾರೂ ಇಲ್ಲೇ ಇರಲಿ' ಎಂಬ ಜಪ ಪ್ರಾರಂಭ ಮಾಡಿತ್ತು.

ಗೌಡಪ್ಪನವರು ದೇವಕ್ಕನೊಂದಿಗೆ ಬಂದವರೇ ಹನುಮನ ಮನೆಗೆ ನುಗ್ಗಿದರು. ತಮ್ಮ ಕರ್ಕಶವಾದ ಮತ್ತು ಬೀಸಾದ ದನಿಯಲ್ಲಿ "ಏನೊ ಹನುಮಾ, ಏನಪಾ ಇದು? ಹೆಂಗಸ-ಹೆಂಗ್ಸರ ನ್ಯಾಯಾ. ನೀ ಯಾಕ ಕೈಹಾಕತೀಯೊ? ಆಕಿ ಮಗಳ್ನ ಆಕಿಗೆ ಕಳಿಸಬೇಕಪಾ ಹೊಡದರೇನು ಬಿಟ್ಟ ರೇನು? ಆಕಿ ಮಗಳು ಆಕಿಯ ಪಾಲಿಗೆ" ಎಂದರು.

ಹನುಮನು ಗೊಂಗಡಿಹಾಸುತ್ತ "ಯಪಾ, ಊರಿಗೆ ನೀವು ಹಿರೇರು. ನೀವು ಹೇಳಿದ್ಹಂಗ ಕೇಳತೀವಿ. ಆದ್ರ, ಆಕಿ ಆಡೋಮಾತ, ಮಂದೀ ಬಾಯಿಂದನs ಕೇಳಿಕೊಳ್ರಿ. ಹೋಗ್ಲಿ ಅದು. ಮೊದ್ಲ ಆ ಹುಡುಗಿನ್ನ ನೋಡಬರ್ರಿ ಒಂದೀಟು. ಮ್ಯಾಕಯೋಳಾಕ ಬರವಲ್ತು, ಹಂಗ ಹೊಡದಾಳ. ಸಂಕಟ ಆಗಾಕಿಲ್ಲ?"

ಕೆಂಚವ್ವನು ತನ್ನ ಕುತ್ತಿಗೆಗೆ ಕೈಹಾಕಿ, ದೇವಕ್ಕ ಚೂರಿಕೊಂಡು ದನ್ನೂ ತೋರಿಸಹೋದಳು. ಗೌಡಪ್ಪನವರು ಮೊನ್ನೆ ಮತ್ತು ಇವತ್ತು ನಡೆದ ಸಂಗತಿಯಾದರೂ ಏನೆಂದು ತಿಳಿದುಕೊಳ್ಳಲೆಂದರು. ಕೆಂಚವ್ವನು ನಡುನಡುವೆ ತಿದ್ದಹೋದಳು. ಮುಗಿದಮೇಲೆ ಗೌಡಪ್ಪನವರು ದೇವಕ್ಕನ ಕಡೆಗೊಮ್ಮೆ ನೋಡಿ ಹನುಮನಿಗೆ ಹೇಳಿದರು. "ಏನs ಆಗ್ಲಿ ನೀ ಮಾಡೋದು ಗೈರಪಾ ಹನುಮಾ. ಆ-ಕಿ ಹಾಳಗುಂಡೀ ಬೀಳವಳ್ಳಾಕ. ನೀ ಎಷ್ಟರವನೊ? ತನ್ನ ಮಗಳ್ನ ತಾ ಹೊಡೆದು ಕೊಂದ್ರ, ಆಕಿ ಮ್ಯಾಲ್ಯ ಕ್ರಿಮಿ ನಲ ಆಗ್ತೃದ, ಸುಮ್ನ ಕಳಿಸಿಬಿಡು. ನ್ಯಾಯಬ್ಯಾಡಾ" ದೇವಕ್ಕನ ಆಸೆಗಣ್ಣಿನ

ಮುಖವನ್ನು ಕಂಡು ಅವರು ತಮ್ಮ ಹೇಳಿಕೆಯನ್ನು ಮುಂದುವರಿಸಿದರು. "ಯಾರಾದರ ತಾಯಂದಿರಿಗೆ ಮಕ್ಕಳು ಬ್ಯಾಡಾಗಿರ್ತಾವೇನೊ? ಲೋಕದ ವಿರುದ್ಧನೇ ಆಡ್ತೀಯಲ್ಲಾ?....ನಡಿ, ಎಲ್ಲಿದ್ದಾಳ ಪಾರೋತಿ? ಆಕಿ ಕರ ಕೊಂಡು ಹೋಗ್ಲಿ"

"ನೀವು ಹೇಳೋದೆಲ್ಲ ಕರೇವ್ರಿ ಯಪ್ಪಾ. ಆದ್ರ ಈಕಿ ಎಲ್ಲಾರಂತಾ ತಾಯಿ ಅಲ್ಲಾ. ಇರೋತನಕಾ ನಾವಿಬ್ರು ಅಣ್ಣಾ ತಮ್ಮಾ ಕ್ರಿಯಾದಿಂದಾ ನಡಕೊಂಡ್ವಿ. ಪಾರೂ ಇಬ್ರಿಗೂ ಮಗಳು ಅಂತ, ನೋಡಿಕೋತ ಬಂದ್ವಿ. ಆಕಿ ಅಂತಾ ಉತಾವಳಿ ಹುಡುಗಿ ಎಂದೂ ಅಲ್ಲಾ. ಅಂತಾಕಿನ್ನ ವ್ಯೆಹುಳಿ ಹೊಡದ್ರ, ಹೊಟ್ಯಾಗ ಸಂಕಟ ಆಗಾಕಿಲ್ಲೇನ್ರಿ? ಯಾತಕ್ಕ ಬಂದೀತು ಕೂಸು? ನೋಡ್ಯರೆ ನೋಡಬರ್ರಿ, ಹೆಂಗ ಮಗ್ಗಲು ಮಡಚೋ ಹಂಗ ಹೊಡದಾಳು."

"ಇರ್ಲಿ ನಡಿ, ಸ್ವಲ್ಪ ಸಮಾಧಾನ ಮಾಡಿಕೊ. ಸಿಟ್ಟಿನ ಭರದಾಗ ಹೊಡದಾಳ, ದಿನಾ ಹೊಡಿತಾಳೇನು ಹಿಂಗ? ನಾನೆಲ್ಲಾ ಆಕಿಗೆ ತಾಕೀದ ಮಾಡತೇನಿ. ಆಕಿ ಹೊಡಿಯೋದ ಯಾಕ? ನಿಮ್ಮ ಮನಿಗೆ ಹೋಗಿ ಬರೋದು ಮಾಡತಾಳ ಅಂತ ಹೌದಲ್ಲೊ, ಬೇಕಾದ್ಹಂಗ ಆಕಿಗೆ ಎರಡೂ ಮನಿ ವಹಿವಾಟ ಇರಲಿ. ಇನ್ನಮ್ಯಾಲ ದ್ಯಾವಕ್ಕ ಏನೇನೂ ಅಡ್ಡೀಮಾಡ ದ್ಹಂಗ ನೋಡಿಕೋತೇನಿ. ಆತಿಲ್ಲೊ. ಹುಂ. ಕರಕೊಂಡು ಹೋಗಬಾ ದ್ಯಾವಕ್ಕಾ" ಎಂದರು.

ಕೆಂಚವ್ವನು ಸಾರಿದಳು "ಆಕಿಗೆ ಮಗಳು ಬ್ಯಾಡಾಗ್ಯಾಳ್ರಿ. ಯಾಕ ಸುಮ್ನ ಆ ಹುಡುಗಿನ್ನ ಆಕಿ ಕ್ಯೆಯ್ಯಾಗ ಕೊಟ್ಟು ಕೊಲ್ಲತೀರಿ?"

ದೇವಕ್ಕನ ಪಾಲಿಗೆ ಇದು ಎಂತಹ ಕ್ರೂರ ಆರೋಪ! ಮಾತನ್ನೇ ಆಡಗೊಡದಷ್ಟು ದನಿ ಆರ್ದ್ರವಾಯಿತು. ಗೌಡಪ್ಪನವರು ಆಗ ಕೆಂಚವ್ವನ ಮೇಲೆ ಸಿಟ್ಟುಮಾಡಿದರು.

ಎಲ್ಲರೂ ಈಗ ಪಾರೋತಿ ಮಲಗಿದಲ್ಲಿಗೆ ಬಂದರು. ದೇವಕ್ಕ ಮಗಳ ಹತ್ತಿರ ನಿಂತಳು ಬಾ ಎಂದು ಕೈಮಾಡಿದಳು.

ಆಶ್ಚರ್ಯ! ಪಾರೂ ತನ್ನ ಬಾಡಿದ ಮುಖವನ್ನು ಕಿವುಚಿಕೊಂಡಳು; "ಒಲ್ಲೆ" ಎಂದು ಸಣ್ಣದನಿಯಲ್ಲಿ ಅಂದು, ಗೋಣುಹಾಕಿದಳು. ಕಣ್ಣಲ್ಲಿ ಹೆದರಿಕೆ ಮೂಡಿತ್ತು ಎರಡು ಹನಿ ನೀರೂ ನಿಂತಿತ್ತು.

ಅದೇ, ಕ್ಷಣ ಅಕ್ಕರತೆಯಿಂದ ಕರೆಯಹೋದರೂ ಬರುವದಿಲ್ಲವೆಂದ ಮಗಳ ಚಿತ್ರ ಕಣ್ಣುಕಟ್ಟಿತು. 'ಕೆಲದಿನ ಹೋಗಲಿ ತಾನೇ ಸರಿಯಾಗುವದು' ಎಂದೆನೊ ಗೌಡಪ್ಪ ಹೇಳಿದ್ದರು. 'ಆದರೆ ಇದು ಏನು? ಪಾರೋತಿ ಒಲ್ಲೆಯನ್ನಲು, ನಾಯೇನು ಅವಳಿಗೆ ಅಂತಹ ದೊಡ್ಡ ಅನ್ಯಾಯ ಮಾಡಿದ್ದು? ಇಷ್ಟು ನನ್ನ ಮೇಲೆ ದ್ವೇಷ ಸಾಧಿಸುವಳೇ ನನ್ನ ಮಗಳು! ನೀಚ ಪಾರೀ! ಇಷ್ಟು ದಿನವೂ ನಿನ್ನನ್ನು ಹೆತ್ತು, ಹೊತ್ತು ಸಲಹಿದ್ದಕ್ಕೆ ಇದೇ ಏನು ನಿನ್ನ ಪ್ರತಿಫಲ? ನಾಲ್ಕೂಕಡೆಯಿಂದ ನನಗೆ ಅಪಮಾನವಾಗುವಂತೆ ಮಾಡಿದಿಯಾ?

'ಸುಳ್ಳೀ ಆ ಮಗುವನ್ನು ಬೈಯ್ಯುತ್ತೇನೆ. ಎಂದು ತಾನೆ ಆಕೆ ಹಾಗೆ ಮಾಡಿದ್ದು? ಇವರೇ ದುಷ್ಟರು. ಕೂಡಿ, ಆಕೆಯ ಮನಸ್ಸನ್ನು ಕೆಡಿಸುತ್ತಿದ್ದಾರೆ. ಏನೇನೊ ತುಂಬಿಕೊಟ್ಟಿದ್ದಾರೆ. ಇವರ ಮನೆ ಹಾಳಾಗಿ ಹೋಗ. ಇವರ ವಂಶ ನಿರ್ವಂಶವಾಗಲಿ....ಆಯಿತು, ಗೌಡಪ್ಪನವರು 'ಕಳಿಸದೇ ಹೋದರೆ ಅವರ ಮೇಲೆ ಕಟ್ಲೆ ಹಾಕೋಣ' ಅಂತ ಹೇಳಿಯಾರಲ್ಲ. ದೇವರು ಖರೇತನಕ್ಕೆ ಬೆಂಬಲಕೊಡದೇ ಇರಲಾರ. ಕೋರ್ಟಿನಲ್ಲಿ ಒಬ್ಬೊಬ್ಬರಿಗೆ ಇಪ್ಪಿಪ್ಪತ್ತು ವರ್ಷ ಶಿಕ್ಷೆಯಾಗುವಂತೆ ಮಾಡುತ್ತೇನೆ... ಉಳದೆಲ್ಲಾ ಯಾಕ ನನಗ? ಗೌಡಪ್ಪನವರು ಕಟ್ಲೇಕ್ಕ ಓಡ್ಯಾಡತಾರು. ದುಡ್ಡು ಹಾಕತೇವಿ ಅಂತ ಹೇಳ್ಯಾರು.'....ಆದರೆ ಕೊನೆಯ ಮಾತುಗಳು ಕೊಳೆತ ಮುಳ್ಳಿನಂತೆ ಅಳುಕಿದವು. ಮತ್ತೆ ಮತ್ತೆ ಅವರ ಹೆಡಿಗೆ ರುಮಾಲಿನ ಮೂರ್ತಿ ಮುಂದೆ ಬಂದು ನಿಂತಿತು.

ಗೌಡಪ್ಪನವರ ಹೊಲದ ಹತ್ತೀಬಿಡಿಸುವಬದುಕು ಮುಗಿದಿರಲಿಲ್ಲ. ಎರಡು ಬೀಡು ಬಿಡಿಸಿದಮೇಲೆ ಹೊಲಗಳಲ್ಲಿ ಉಳಿದಿದ್ದ ಹತ್ತಿಯನ್ನು ಆರಿಸುವ ಕೆಲಸವನ್ನು ದೇವಕ್ಕನಿಗೆ ಗುತ್ತಿಗೆಯ ಮೇಲೆ ಕೊಟ್ಟಿದ್ದರು. ಬಂದುದರಲ್ಲಿ ಅರ್ಧ ಅವಳಿಗೆ, ಅರ್ಧ ಅವರಿಗೆ. ದೂರಿನ ಹೊಲಗಳಾದುದರಿಂದ, ಆಕೆ ನಸುಕಿನಲ್ಲಿ ಹೋಗುತ್ತಿದ್ದಳು. ಸಂಜೆಯ ಮುಂದೆ ಹೊರೆಹೊತ್ತುಕೊಂಡು ಬರುತ್ತಿದ್ದಳು. ಆಕೆ ಇದರಲ್ಲೇ ವರ್ಷಕ್ಕಾಗುವ ಅರಿವೆ ಸೀರೆಗಳನ್ನು ಬಂದ ಹಣದಿಂದ ಕೊಳ್ಳಬೇಕು. ಗೌಡಪ್ಪನವರು ಅನೇಕ ಇಂತಹ ಸಣ್ಣಪುಟ್ಟ ವಿಷಯಗಳಿಗೂ ಗಮನಕೊಟ್ಟು ತಮ್ಮ ಕೆಲಸವನ್ನು ನಿರಾತಂಕವಾಗಿ ಮಾಡಿಕೊಳ್ಳಲೆಳಸಿದರು.

ಒಂದು ದಿನ ನಸುಕಿನಲ್ಲಿ ದೇವಕ್ಕ ರೊಟ್ಟಿಬುತ್ತಿಯ ಗಂಟನ್ನು ಕಟ್ಟಿಕೊಂಡು, ಹೊರಗೆ ಬಂದು ತನ್ನ ತಟ್ಟಿಯ ಬಾಗಿಲನ್ನು ಮುಂದೆಮಾಡಿ ಸಹಜವಾಗಿ ಎದುರಿನ ಮನೆಯಲ್ಲಿ ನೋಡುತ್ತಾಳೆ. ಪಾರೋತಿ! ತನ್ನನ್ನೇ ನೋಡುತ್ತಿರುವಂತೆ ಕಂಡಿತು. ಒಂದೇ ನಿಮಿಷ ಆಕೆ ಅಲ್ಲಿ ನಿಂತಿದ್ದರೂ, ದೇವಕ್ಕನು ಅವಳನ್ನು ತನ್ನ ಕಣ್ಣಿನಿಂದ ಒಂದೇ ತುತ್ತುಮಾಡಿ ನುಂಗುವಂತೆ ನೋಡಿದಳು. ಪಾರುವಿಗೆ ನಿನ್ನೆ ರಾತ್ರಿ ಎಣ್ಣೆಹೂಸಿ ಎರೆದಂತಿತ್ತು. ಅವಳ ಹಸಿಗೂದಲನ್ನು ಒಂದು ಅರಿವೆಯಿಂದ ಕಟ್ಟಿದ್ದರು. ಮುಂಗೈಗೆ ನೋವಾದ ಗಾಯಕ್ಕೆಂದು ಒಂದು ಅರಿವೆಯನ್ನು ಇನ್ನೂ ಕಟ್ಟಲಾಗಿತ್ತು. ಅವಳು ಉಟ್ಟುಕೊಂಡ ಹಸಿರು ಸೀರೆ ತನ್ನ ನೆಗೆಣ್ಣಿಯದೆಂಬುದನ್ನೂ ದೇವಕ್ಕ ಗುರುತಿಸಿದಳು. ಮುಂದೇನು ಮಾಡಬೇಕು ಎಂದು ಗೊತ್ತುಪಡಿಸುವದಕ್ಕೆ ಮುಂಚೆಯೇ ಪಾರೂ ಒಳಗೆ ಹೋಗಿದ್ದಳು

ದೇವಕ್ಕ ಹೊಲದ ಕಡೆಗೆ ನಡೆಯುತ್ತ, 'ಈಗ ಹೊಲಕ್ಕೆ ಗೌಡಪ್ಪನವರು ಬಂದೇ ಬರುವರಲ್ಲ, ಒಮ್ಮೆ ಇದನ್ನೆಲ್ಲ ಬಗೆಹರಿಸಿ, ಮಗಳನ್ನು ಮನೆಗೆ ಕರತರಬೇಕು' ಎಂದು ನಿಶ್ಚಯಿಸಿಕೊಂಡಳು. ಆದರೆ ಒಗೆದ ಸೀರೆ, ಎರೆದುಕೊಂಡದ್ದು ಇದೆಲ್ಲ ಈಗೇಕೆ ಎಂಬುದು ಸಮಸ್ಯೆಯಾಯಿತು. 'ಇವತ್ತು ಯಾವುದಾದರೂ ಹಬ್ಬವೆ? ಎಲ್ಲಿಯ ಹಬ್ಬ?........ಬಹುಶಃ ಸಮೀಪದಲ್ಲಿ ಎರೆದಿಲ್ಲನೆಂದೂ, ಇರಬಹುದೆ? ದೇವಕ್ಕನಿಗೆ ತನ್ನ ಮಗಳ ಮೇಲಿನ ಕಕ್ಕುಲಾತಿಯನ್ನು ಆಕೆಯ ಎದುರೇ ಕಸಿದುಕೊಂಡು, ತಾವು ಸ್ವೇಚ್ಛೆಯಾಗಿ ಬಳಸುತ್ತಿರುವಂತಾಗಿ, ಅವಳ ಕರುಳು ಕಿವುಚಿತು. ತನ್ನ ವೈರಿಯಾದವರನ್ನು ಹೆಸರುಗೊಂಡು ನೆನೆದು ಒಟಗುಟ್ಟುತ್ತ ಅವರ ಹೆಸರಿನಲ್ಲಿ ಅಲ್ಲೇ ಲಟಿಕೆ ಮುರಿದಳು.

ಇವಳು ಹೋದ ಅರ್ಧತಾಸಿಗೇ ಗೌಡಪ್ಪನವರು ಕುದುರೆಯನ್ನೇರಿ ಬಂದರು. ದೇವಕ್ಕ ತನ್ನ ಅಳಲನ್ನು ತೋಡಿಕೊಂಡಳು. ಇವತ್ತು ಹನುಮನನ್ನು ಕರೆಯಿಸಿ ಹೇಳುವುದಾಗಿ ವಚನಕೊಟ್ಟರು. ಹೊಲದಲ್ಲಿರುವ ಇಡೀ ವೇಳೆಯನ್ನು ಇದೇ ಸಮಾಧಾನದಲ್ಲಿ ಆಕೆ ಕಳೆದಳು. ಬೇಗನೇ ಮನೆಗೆ ಹೋದಳು. ಬರಬರುತ್ತಲೇ ಓಣಿಯಲ್ಲೆ ಎದುರಿನ ಮನೆಯ ಕಡೆಗೆ ನೋಡಿದಳು. ಇನ್ನೊಮ್ಮೆ ಮಗಳ ಮುಖ ಕಾಣುವೆನೆಂದುಕೊಂಡಿದ್ದಳೋ

ಏನ್ನೋ. ಆದರೆ ಅವರ ಬಾಗಿಲಿಗೆ ಕೀಲಿ ಹಾಕಿದೆ! ದೇವಕ್ಕ ದಂಗುಬಡಿದಳು. 'ಎಲ್ಲಿ ಹೋಗಿದ್ದಾರೆ ಎಲ್ಲರೂ ? ಕೊನೆಯ ಪಕ್ಷ ಮುದುಕಿಯಾದರೂ ಮನೆಯಲ್ಲಿರಬೇಕು, ಯಾರೂ ಇಲ್ಲವೆಂದರೆ; ' ತೆಳಗೆ ನೋಡಿದಾಗ ಚಕ್ಕಡಿಯ ಗಾಲಿಗಳ ಗುರುತೂ, ಎತ್ತಿಗೆ ತಿನ್ನಿಸಿದ ಸೊಪ್ಪಿಯ ಅವಶೇಷವೂ ಅಲ್ಲಿ ಇತ್ತು. ಊರಿಗೆ ಹೋಗಿರಬೇಕೆಂದು ಥಟ್ಟನೆ ಹೊಳೆಯಿತು. ಗಾಬರಿಯಿಂದ ನಡುಗಿದಳು. ಮುಗ್ಗಲು ಮನೆಗೆ ವಿವರಗಳನ್ನು ತಿಳಿಯಲು ಓಡಿದಳು.

ದೇವಕ್ಕನ ದುರ್ವಿಧಿಯೆ ಎನ್ನಬೇಕು. ಎಲ್ಲರೂ ಆವತ್ತು ಮುಂಜಾನೆ ಹನುಮನ ಹೆಂಡತಿಯ ಊರಾದ ನೆಗಳೂರಿಗೆ ಹೊರಟುಹೋಗಿದ್ದರು. ಅಲ್ಲಿ ಕೆಂಚವ್ವನ ಅಕ್ಕನ ಮಗನ ಮದುವೆ. ದೇವಕ್ಕನಿಗೆ ಔತಣವಿಲ್ಲ, ಅದರ ಸುದ್ದಿ ಕೂಡ ಅವಳಿಗೆ ತಿಳಿದಿರಲಿಲ್ಲ. ಮದುವಣಿಗನ ತಂದೆ ಅವರ ಮನೆಗೆ ಬಂದುದನ್ನು ಹಿಂದಿನ ಸಂಜೆಯೇ ಗುರುತಿಸಿದ್ದಳು, ಕಾರಣ ತಿಳಿದಿರಲಿಲ್ಲ. ತಿಳಿದಿದ್ದರೆ ಒಂದು ರೀತಿಯಲ್ಲಿ ಫರಾರಿ ಮಾಡಿಸಿದಂತಾಗಿದ್ದ ಮಗಳನ್ನು ಇಲ್ಲಿಯೇ ಉಳಿಸಿಕೊಳ್ಳಲು ಅವಳು ಹೆಣಗದೆ ಇರುತ್ತಿರಲಿಲ್ಲ. ಇಷ್ಟಕ್ಕೂ ಅದೇ ನಿರ್ಧಾರದಿಂದಲೆ ಇಂದು ಮನೆಯೊಳಗೆ ಕಾಲಿರಿಸಿದ್ದಳಲ್ಲವೆ ?

ಮನೆಗೆ ಬಂದವಳೇ ದಿಕ್ಕುಗಾಣದವರಂತೆ ಮಂಕಾಗಿ ಕುಳಿತಳು. ಸಿಟ್ಟು ತನ್ನ ಜಡೆ ಎತ್ತಿ ನೆಲಕ್ಕೆ ಅಪ್ಪಳಿಸುವಂತಾಗಿತ್ತು. ಮೈದುನನ, ಮೈದುನನ ಹೆಂಡತಿ, ಮುದುಕಿ ಎಲ್ಲರೂ ತನ್ನ ಳವಿನಲ್ಲಿದ್ದಿದ್ದರೆ, ಕಚಪಚನೆ ಹರಿದು ತುಳಿಯುವಷ್ಟು ತಪ್ತಳಾಗಿ ಹೋಗಿದ್ದಳು. ಅನೇಕ ಬಗೆಯಲ್ಲಿ ಅವರನ್ನು ಶಪಿಸಿದಳು. ದಾರಿಯಲ್ಲೇ ಅವರ ಚಕ್ಕಡಿ ಹಳ್ಳಕೂಡಿ ಹೋಗಲಿ ಎಂದುಕೊಂಡಳು.

ಇನ್ನು ತನ್ನ ಮಗಳು ಕೈ ಬಿಟ್ಟಳು, ಎಂದು ಖಚಿತವಾಯಿತು. ಅವಳಿಗೆ 'ಶಿವನೇ ನಾನೇನರ ತಪ್ಪು ಮಾಡೀನಿ ಅಂಟು ತಿಳಿಸಿಕೊಡು. ನಿನ್ನ ಕಾಲು ಬೀಳ್ತೀನಿ' ಎಂದು ಗೋಗರೆದಳು. ಮಗಳನ್ನೂ ಮನಸ್ವಿಯಾಗಿ ಬೈದಳು. 'ಎಷ್ಟು ವಿಚಿತ್ರವಾದ ನಡತೆ ಈಕೆಯದು, ತನಗೆ ತಾಯಿ ಬೇಡ ಎನ್ನುತ್ತಾಳಲ್ಲ! ನಮ್ಮ ಊರಲ್ಲಿ ಅನೇಕ ಆಶ್ಚರ್ಯದ ಘಟನೆಗಳನ್ನು ಹೇಳುತ್ತಾರೆ. ಇದಕ್ಕಿಂತ ಹೆಚ್ಚು ಅದ್ಭುತವಾದ ಯಾವುದಾದರೂ ಇದೆಯೆ?" ಎಂಬುದಾಗಿ ಇನ್ನೂ ಹತ್ತೆಂಟು ಬಗೆಯ ವಿಚಾರ ಬಂದು, ಬಳಲಿದಳು.

ತನ್ನ ಹತ್ತಿರ ಬರಲು ಒಲ್ಲೆನೆಂದ ಅವತ್ತಿನ ಚಿತ್ರ, ಕೊನೆಯ ಸಲ ಭೆಟ್ಟಿ ಕೊಟ್ಟಿರುವವರಂತಿದ್ದ ಇವತ್ತಿನ ಚಿತ್ರ, ಎರಡೂ ಸುಳಿದವು. ಮಗಳ ಮೇಲೆ ಮನಸ್ಸು ಅತ್ಯಂತ ಕಟುವಾಯಿತು. 'ಪಾರೂ, ನನಗೆ ಯಾವುದಾದರೂ ರೋಗಗೀಗ ಬಂದು ಸತ್ತುಹೋಗಿದ್ದರೂ ನಾನಿಷ್ಟು ದುಃಖಿಸುತ್ತಿರಲಿಲ್ಲ. ಶಿವನಾಟ ಎನ್ನುತ್ತಿದ್ದೆ. ಹೀಗೆ ನನ್ನನ್ನು ಹುರಿದು ಮುಕ್ಕಬೇಡ' ಎಂದು ಹೊರೆಯಾಗಿ ಕಣ್ಣೀರು ಸುರಿಸಿದಳು.

ಅತ್ತು ಅತ್ತು ಬಹಳಷ್ಟು ದಣಿವೆಯಾಯಿತು. ಹೊರಗಿನ ಬಾಗಿಲು ಇನ್ನೂ ತೆರೆದಿತ್ತು. ಅಲ್ಲಿಂದ ಗಾಳಿಯು ನುಗ್ಗಿ, ಹೊಗೆಯಾಡಿಸುತ್ತಿದ್ದ ಮಬ್ಬು ಬೆಳಕು ಚಿಮಣಿದೀಪವನ್ನು ಆರಿಸಿಬಿಟ್ಟಿತ್ತು. ದೇವಕ್ಕ ಹಾಗೇ ಒರಗಿಕೊಂಡಳು. ಅವಳು ಒಂದು ವಿಚಿತ್ರ ಕನಸನ್ನು ಕಂಡಳು.

ಕನಸಿನಲ್ಲಿ ಅವಳಿಗೆ ಒಬ್ಬ ಕೆಂಪನ್ನ ದುಂಡುಮೊಗದ ಸುಂದರವಾದ ಗಂಡಸುಮಗನು ಹುಟ್ಟಿದ್ದನು. ಒಮ್ಮೆಲೆ ೧೮-೧೯ ವರ್ಷದವನಾಗಿದ್ದ. ಒಂದಿನ ಅವನು ಗೌಡಪ್ಪನವರ ಮನೆಗೆ ಊಟಕ್ಕೆ ಹೋಗಿದ್ದನು. ಬಹಳ ಹೊತ್ತಾದರೂ ಬರಲಿಲ್ಲವೆಂದು ದೇವಕ್ಕ ಅವರ ಮನೆಯ ಒಳಕ್ಕೆ ಬಂದಾಗ, ಅವನು ಅವಳ ಕೂದಲನ್ನು ಹಿಡಿದು ದರದರ ಎಳೆದು ಹೊಸ್ತಿಲದ ಹೊರಕ್ಕೆ ಬಿಟ್ಟು 'ಮುಂದೆ ತೊಲಗಿಲ್ಲಿಂದ ನೀ. ನನ್ನ ತಾಯಿ ಇದೊ ಇಲ್ಲಿದ್ದಾಳೆ" ಎಂದು ಗೌಡಪ್ಪನವರ ಹೆಂಡತಿಯ ಕಡೆ ಕೈಮಾಡಿ ತೋರಿಸಿದನು. ಯಥಾಪ್ರಕಾರ ದೇವಕ್ಕನು ಗೌಡಪ್ಪನವರ ಹೆಂಡತಿಯ ಮೇಲೆ ಏರಿಹೋಗಿ 'ನಾ ಇವನ ಒಂಬತ್ತು ತಿಂಗಳು ಹೊತ್ತು ಹಡೆದು, ಜೋಪಾನ ಮಾಡಿದಾಕೆ, ನೀಯಾರು?' ಎಂದು ಗುದ್ದಾಡ ಹೋಗಲು, ಅವಳ ಮಗನು ಒಮ್ಮೆಲೆ ಅಡ್ಡಬಂದು, ದೇವಕ್ಕನನ್ನು ಎಳೆದು ಹೊರಜಗುಲಿಯ ಮೇಲೆ ಕೆಡವಿ ''ಹಾ-ಗಿತ್ತಿ ಇದ್ದೀ ನೀ. ನಮ್ಮನ್ಯಾಗ ಇನ್ನೊಮ್ಮೆ ಕಾಲಿಡು ನೋಡ್ತೀನಿ" ಎಂದು ಕುತ್ತಿಗೆಗೆ ಕೈಹಾಕಿದಾಗ—

ಫಕ್ಕನೆ ಎಚ್ಚರವಾಯಿತು. ಕಣ್ಣುತೆರೆದಳು. ಸುತ್ತಲೂ ಕತ್ತಲೆ. ಭಯಗೊಂಡು ತಾನು ಜೋರಾಗಿ ಉಸಿರಾಡಿಸುತ್ತಿರುವದು ಭಾಸವಾಯಿತು. ಅದರ ಜೊತೆಗೆ, ತನ್ನ ಹತ್ತಿರವೇ ಕುಳಿತು ತಾನು ಎದೆಯ ಮೇಲಿಟ್ಟು ಕೊಂಡಿದ್ದ ಕೈಗಳನ್ನು ಯಾರೊ ಎತ್ತಿತೆಗೆದಿರುಸುವಂತೆಯೂ ಅನಿಸಿತು.

ಕೆಲವು ಕ್ಷಣ ಕನಸಿನ ಉಬ್ಬಳಿಕೆ ನಡೆದಿತ್ತು. ಆದರೆ ಹತ್ತಿರ ಗೌಡಪ್ಪನ ವರನ್ನು ಕಂಡು ಎದ್ದು ಕುಳಿತಳು. "ಅಯ್ಯೋ ಇವರ ಭಂಡತನವೆ, ಮುಂಜಾನೆ ತಪ್ಪಿಸಿಕೊಂಡಿದ್ದೆ ಎಂದು ಬಾವುಗನ ಹಾಗೆ ಮತ್ತೆ ಬೆನ್ನು ಹತ್ತಿ ಬಂದಿರಾ?" ಎಂದುಕೊಂಡು ಅವರ ಕಡೆಗೊಮ್ಮೆ ನೋಡಿದಳು.

ಆಕ್ಷಣ ದೇವಕ್ಕನು ಇನ್ನು ಇವರ ಸಹಾಯವನ್ನೆ ಅಪೇಕ್ಷಿಸುವದು ಬೇಡ ಎಂದುಕೊಳ್ಳುವಷ್ಟು ಜುಗುಪ್ಸೆಯನ್ನು ತಳೆದಿದ್ದಳು. ಆದರೆ ಅವರೇ ಪಾರುವಿನ ಸಂಬಂಧವಾಗಿ ಮಾತು ತೆಗೆದರು. ಮುಂಜಾನೆ ಹನುಮನನ್ನು ಕರೆಯಿಸಿದ್ದುದಾಗಿಯೂ, 'ಪಾರುವನ್ನು ಇವಳಲ್ಲಿಗೆ ಕಳಿಸುವುದು ಶಕ್ಯವಿಲ್ಲ ವಾಗಿಯೂ, ಈಗೂ ಕೂಡ ಪಾರೂ ಒಲ್ಲೆನ್ನುವದಾಗಿಯೂ' ಅವನು ಹೇಳಿದು ದನ್ನು ಅಂದರು. ಗೌಡಪ್ಪನವರು ಅವನನ್ನು ಒಳಿತಾಗಿ ಗದರಿಸಿದರಂತೆ ಆದರೆ ಆ ಕೂಡಲೇ ಅವನು ಊರಲ್ಲಿ ಇವರ ಪ್ರತಿಕಕ್ಷಿಗಳಾದ ನಾನಪ್ಪ ನಾಯಕರಲ್ಲಿ ಹೋಗಿ, 'ನಿನಗೇನೂ ಆಗಗೊಡುವದಿಲ್ಲ. ಗೌಡಪ್ಪನಿಂದ ಏನಾದರೂ ಸಂಭವಿಸಿದರೆ ನಾನೆಲ್ಲ ಇದ್ದೇನೆ. ಕಾಳಜಿಬೇಡ. ಬೇಕಾದ ಹಾಗೆ ಆ ಹುಡುಗಿನ್ನ ಕರಕೊಂಡು ಹೋಗು' ಎಂಬುದಾಗಿ ಆಶ್ವಾಸನ ಪಡೆದು ಕೊಂಡು ಬಂದುದೂ, ಗೌಡಪ್ಪನವರ ಕಿವಿಗೆ ತಲುಪಿತ್ತು. ಆದರೆ ತಮ್ಮ ಮಾತಿನಿಂದ ಅವರು ಅವಳ ತಾತ್ಸಾರ ಭಾವವನ್ನು ಪೂರ್ಣವಾಗಿ ಹೋಗಲಾ ಡಿಸಿದರು. ಅವರ ಮೇಲೆ ಖಟ್ಲೆ ಹಾಕಿಯೇಬಿಡೋಣ ಎಂದು ಹುರಿದುಂಬಿ ಸಿದರು.

ಸರಿ; ಏನೂ ಇಲ್ಲದ ಜಗಳ ಕ್ರಿಮಿನಲ ಕೇಸಾಗಿ ಮಾರ್ಪಟ್ಟಿತು. ಮಗ ಳನ್ನು ಕೇಳಹೋಗಿ, ಮೈತುಂಬ ಗಾಯವಾಗುವಂತೆ ದೇವಕ್ಕ ಹೊಡಿಸಿ ಕೊಂಡು, ದವಾಖಾನೆಯಲ್ಲಿ ಕೆಲದಿನ ಶೂಶ್ರೂಷೆ ಹೊಂದಿದಳೆಂದೂ ಫಿರ್ಯಾದು ಕೊಡಲಾಯಿತು. ಅದಕ್ಕೆಂದು ಡಾಕ್ಟರರ ಸರ್ಟಿಫಿಕೇಟು ತಡವಿಲ್ಲದೆ ನಿರ್ಮಾಣವಾಯಿತು; ಮುಗ್ಗಲು ಊರಿನಲ್ಲಿದ್ದ ಪೋಲಿಸಠಾಣೆ ಯಿಂದ ಫೌಜದಾರರು, 'ಮಾರಾಮಾರಿ'ಯಾದ ಜಾಗಕ್ಕೆ ಬಂದು ದೇವಕ್ಕನ ಮತ್ತು ಇತರರ ಜವಾಬವನ್ನೂ ತಗೊಂಡರು. ದೇವಕ್ಕನಿಗೆ ಬಲವತ್ತರ ಗಾಯಗಳಾಗಿದ್ದುದನ್ನು ಕಣ್ಣಾರೆ ಕಂಡೆನಾಗಿ ಕೆಲವರು ಸಾಕ್ಷಿಹೇಳಿದರು. ಅವರಲ್ಲಿ ಗೌಡಪ್ಪನವರ ಕಮತಿಗನೂ ಒಬ್ಬ. ದೇವಕ್ಕನ ಹೇಳಿಕೆಯ ಸಾರ

ಇಷ್ಟು: 'ಮಗಳು ಒಂದಿನ ತಪ್ಪುಮಾಡಿದಾಗ ತುಸು ಹೊಡೆದೆ. ಅದನ್ನೇ ಒಂದು ನೆವಮಾಡಿಕೊಂಡು, ಹನುಮನು ಅವಳನ್ನು ಬಲವಂತದಿಂದ ಕರೆದುಕೊಂಡು ಹೋದ. ಹಿಂದೆಯೂ ಕೆಲಸಲ ಇಂತಹ ಪ್ರಯತ್ನಗಳನ್ನು ಮಾಡಿದ್ದ, ಆದರೆ ಸಾಧ್ಯವಾಗಿರಲಿಲ್ಲ. ಮರುದಿನ ಕರೆದುಕೊಂಡು ಬರಲೆಂದು ಹೋದಾಗ, ಹುಡುಗಿ ಬರುವೆನೆಂದರೂ, ಅವರ ಮನೆಯವರೆಲ್ಲ ಕೂಡಿ ತನ್ನ ಕಣ್ಣಲ್ಲಿ ಖಾರಪುಡಿ ಉಗ್ಗಿ, ಮೈಮೇಲೆ ಬಾರುಮೂಡುವಂತೆ ನನಗೆ ಹೊಡೆದು ಕಳುಹಿದರು. ನಾನು ತಿರುಗಿ ತ್ರಾಸಕೊಟ್ಟೇನೆಂದು, ಹುಡುಗಿಯನ್ನು ಕರೆದುಕೊಂಡು ಯಾರಿಗೂ ಹೇಳದೇ ನೆಗಳೂರಿಗೆ ಹೋಗಿರುವರು. ಇಷ್ಟೆಲ್ಲ ದಕ್ಕೂ ಅವರ ಉದ್ದೇಶವೇನೆಂದರೆ ಹುಡುಗಿಗೆ ಬರುವ ತೆರವನ್ನು ಎತ್ತಿ ಹಾಕುವದಿದೆ.'

ಅವತ್ತೇ ಹನುಮನು ಗಾಬರಿಗೊಂಡು ಊರಿಗೆ ಬಂದನು. ನಾನಪ್ಪ ನವರ ಹೇಳಿಕೆಯಂತೆ ಒಬ್ಬರನ್ನು ಜಾಮೀನುಕೊಟ್ಟು ಬಂದನು. ಮತ್ತು ಆರೋಪಿಗಳ ಪರವಾಗಿ, ಪೋಲೀಸ ಠಾಣೆಗೆಹೋಗಿ ತನ್ನ ಹೇಳಿಕೆಯನ್ನು ಕೊಟ್ಟು ಬಂದನು. 'ದೇವಕ್ಕ ಹೇಳಿದ್ದೆಲ್ಲ ಸುಳ್ಳು, ಮಗಳೇ ಹೋಗಲು ಒಲ್ಲೆನ್ನುತ್ತಾಳೆ' ಎಂದು. ದೇವಕ್ಕ ಹೇಳಿದ ಆರೋಪಿಗಳ ಸಾಲಿನಲ್ಲಿ ಇಷ್ಟರ ವರೆಗೆ ಪಾರೋತಿಯಿರಲಿಲ್ಲ. ಈಗ ಅವಳೂ ಬರಬೇಕಾಯಿತು! ಪಾರೋತಿಯ ಹೇಳಿಕೆಯ ಮೇಲೆ ಈಗೆಲ್ಲವೂ ಅವಲಂಬಿಸಿತು. ಹನುಮನು ಅವಳನ್ನು ಕರತರಲು ನೆಗಳೂರಿಗೆ ಹೋದನು.

ಅಂದು ಗೌಡಪ್ಪನವರು ಗುತ್ತಲದಲ್ಲೇ ಇಡೀ ದಿನ ಇದ್ದರು. ಪಾರೋತಿಯ ಸಾಕ್ಷ್ಯದ ಮೇಲೆಯೇ ಅವರ ಮನಸ್ಸು ನೆಟ್ಟಿತ್ತು. ತನ್ನ ತಾಯಿಯ ಹತ್ತಿರಹೋಗಿ ಇರಲು ನಾನೊಲ್ಲೆ ಎಂದು ಆಕೆ ಈಗಲೂ ಹೇಳಿಬಿಟ್ಟರೆ, ದೇವಕ್ಕನ ಅವಸ್ಥೆ ಮುಗಿದಂತೆಯೇ. ಆದ್ದರಿಂದ ಅದನ್ನು ತಿರುಗಿಸುವ ಪ್ರಯತ್ನ ನಡಸಿದ್ದರು. ಏನಿದ್ದರೂ ಹೊಡೆದು ಗಾಯಗೊಳಿಸಿದ್ದರ ಸಂಬಂಧ ವಾದರೂ, ಅವರಿಗೆ ಶಿಕ್ಷೆ-ದಂಡವಾಗಲೇಬೇಕು ಎಂದು ಅವರು ನಿರ್ಧರಿಸಿ ದಂತಿತ್ತು.

ಸಂಜೆ ತನ್ನ ಮನೆಯಲ್ಲಿ ಕುಳಿತು ದೇವಕ್ಕನು, ಗುತ್ತಲದಿಂದ ಗೌಡಪ್ಪ ನವರು ಬರುವುದನ್ನೇ ನಿರೀಕ್ಷಿಸುತ್ತಿದ್ದಳು. ಕಾದು ಕಾದು ಬಹಳ ಬೇಸರ

ಬಂದಿತು. ಇಲ್ಲಿಗೆ ಬಂದು ಎಲ್ಲಹಕೀಕತ್ತು ತಿಳಿಸೇ ಹೋಗುವೆ ಎಂದು ಹಿಂದಿನ ರಾತ್ರಿಬಂದಾಗ ಹೇಳಿಹೋಗಿದ್ದರು. ಓಣಿಯಲ್ಲಿ ಕ್ರಮವಾಗಿ ಗದ್ದಲ ಕಡಿಮೆಯಾಗುತಲಿತ್ತು. ಮಕ್ಕಳನ್ನು ಜೋಗುಳಹಾಡಿ ಮಲಗಿಸು ವುದು ಕೇಳಬರುತ್ತಿತ್ತು. ಅದಕ್ಕೂ ಕಡಿಮೆಯ ಸ್ವರದಲ್ಲಿ, ಇನ್ನೊಂದು ಮನೆಯೊಳಗಿನ ಬೀಸುವುದು ಕೇಳಬರುತ್ತಿತ್ತು. ಸುಮ್ಮನೆ ಕೂತು ಕೂತು ತೀರ ಬೇಜಾರವಾಯಿತು. ಇನ್ನೇನು ಬರಲಿಕ್ಕಿಲ್ಲ ಎಂದು ನಿರ್ಧರಿಸಿ, ಊಟಕ್ಕೆ ಕುಳಿತುಕೊಳ್ಳ ಹೋಗುತ್ತಲೂ, ಗೌಡಪ್ಪನವರ ಸವಾರಿ ಬಂದಿತು.

ದೇವಕ್ಕ ಮಗಳ ಜವಾಬೊಂದನ್ನು ಕೇಳಲು ಆತುರಳಾಗಿದ್ದರೆ, ಗೌಡಪ್ಪನವರು ಪೋಲೀಸ ಕಚೇರಿಯಲ್ಲಿ ತಾವು ತೋರಿಸಿದ ವ್ಯವಹಾರ ಕೌಶಲ್ಯವನ್ನು ಬಣ್ಣಿಸುತ್ತಿದ್ದರು. ಕೊನೆಗೆ ಸುತ್ತುಸುತ್ತಾಗಿ ಆ ಮಾತಿಗೆ ಬಂದರು. ಪಾರೋತಿ ಆಗೂ ತನ್ನ ತಾಯಿಯ ಹತ್ತಿರ ಹೋಗಲು ಒಲ್ಲೆ ಎಂದಳಂತೆ. "ಪಾರೋತಿ ಅಲ್ಲಿಯತನಕ ಬಂದಿದ್ದರೂ, ಅವಳಿಂದ ಹೇಳಿಕೆ ಯನ್ನು ತಗೊಳ್ಳುವಾಗ ನಮ್ಮನ್ನು ಒಳಗೆ ಬಿಡಲಿಲ್ಲ. ಬಹುಶಃ ಆಕೆ ಒಲ್ಲೆ ಎಂದು ಹೇಳಿರಲಿಕ್ಕೇ ಇಲ್ಲ. ಫೌಜದಾರರು ಕೈಬಿಸಿಮಾಡಿಸಿಕೊಂಡಿರಬೇಕು. ಮುಂದೆ ನಮಗೆ ಇದೊಂದು ಒಳ್ಳೆಯ ಪಾಯಿಂಟ ಸಿಕ್ಕಿತು," ಎಂದು ಗೌಡಪ್ಪ ನುಡಿದರು. ಆದರೆ 'ಮಾರಾ ಮಾರಿ' ಕಲಮಿನ ಮಟ್ಟಿಗೆ, ನಿಶ್ಚಯವಾಗಿ ಅವರಿಗೆ ದಂಡ-ಶಿಕ್ಷೆಯಾಗುವದರಲ್ಲಿ ಸಂದೇಹವಿಲ್ಲ ಎಂದರು. ಮುಂದಿನ ಮಂಗಳವಾರ ಕೋರ್ಟಿನಲ್ಲಿ ಮುದ್ದತಿದೆ ಎಂದೂ ತಿಳಿಸಿ, ತುಸುಹೊತ್ತಿನ ಮೇಲೆ ಹೊರಟು ಹೋದರು.

ದೇವಕ್ಕ ನಿರ್ವಿಣ್ಣಳಾಗಿ, ಹಾಗೇ ಮಲಗಿದ್ದಳು. ಉಣಲೆಂದಿದ್ದ ರೊಟ್ಟಿ ಒಳಗೇ ಇತ್ತು. ಯಾವುದಕ್ಕೂ ಮನಸ್ಸಿರಲಿಲ್ಲ. ತನ್ನ ಮುಂದಿನ ಬಾಳು ವ್ಯರ್ಥ ಎಂದು ಹಳಿದುಕೊಂಡಳು. 'ತನ್ನ ಹೊಟ್ಟೆಯಲ್ಲಿ ಹುಟ್ಟಿ ಇಷ್ಟುದಿನಗಳ ವರೆಗೂ ದೊಡ್ಡವಳಾಗಿ ಈಗ ಒಂದು ಸಣ್ಣಕಾರಣದಿಂದ ಆಕೆ ತನ್ನ ತಾಯಿಗೆ 'ನೀನು ನನ್ನ ವೈರಿ' ಎಂದು ಹೇಳುವ ಪ್ರಸಂಗ ಬಂತಲ್ಲವೆ? ತಾಯಿ ಸತ್ತಮೇಲೆ ತಂದೆ ಸೋದರ ಮಾವ ಎಂದು ಹೇಳುತ್ತಾರೆ. ಈಗ ತಂದೆಸತ್ತ ಮೇಲೆ, ತಾಯಿ ಭಾಗಾದಿ ಎನಿಸಿಕೊಳ್ಳ ಬೇಕಾಯಿತಲ್ಲ! ನನ್ನಲ್ಲಿ ಏನು ಅಂತಹ ಕೆಟ್ಟಗುಣವಿದೆ? ತಾನು ತಾಯಿಯ ಹತ್ತಿರ ಇರಲೊಲ್ಲೆ

ಎನ್ನುವುದಕ್ಕೆ ಪೋಲೀಸರೆದುರು ಮಗಳುಕೊಟ್ಟ ಮುಖ್ಯಕಾರಣಗಳನ್ನು ನೆನಪಿಗೆ ತಂದುಕೊಂಡಳು. ಒಂದು ತಾನು ದಿನವೂ ಆಕೆಯನ್ನು ಹೊಡೆದು ಬಡೆದು ಗೋಳುಹೊಯ್ಯುತ್ತೇನೆ ಎಂದು. ಇದು ನಿಜವೇ? ಒಂದು ದಿನ ಹೊಡೆದರೆ ಇಷ್ಟು ರಂಭಾಟವೆ? ಇನ್ನೊಂದು, ತನ್ನ ಮನೆಗೆ ಕುಡುಕರು ಬಂದು, ಧಾಂದಲೆ ಹಾಕುತ್ತಾರೆ. ಅದರಿಂದ ತನಗೆ ಹೆದರಿಕೆ ಬರುವುದು ಎಂದು. ಇದನ್ನು ನೆನಸಿಕೊಂಡು ದೇವಕ್ಕಗೆ ಭೀಕರ ಬರೆಕೊಟ್ಟಂತಾಯಿತು. ಈ ಮಾತನ್ನು ಅವಳೆದುರು ಎಷ್ಟೊ ನಾಚಿಕೆ-ಸಂಕೋಚಗಳಿಲ್ಲದೆ, ಹೇಳಿದ ಗೌಡಪ್ಪನವರು ನೆನಪಾದರು. 'ಮಗುವಿನ ಮನಸ್ಸು, ದೇವರ ಮನಸ್ಸಿದ್ದಂತೆ, ನಿರ್ಮಲವಾದುದಂತೆ. ನನ್ನ ಒಳನಡತೆಯನ್ನು ದೇವರೇ ಇವಳ ಬಾಯಿಂದ ಅನ್ನಿಸಿದನೆ? ನನ್ನ ಗಂಡ! ಅವನಿಗೆ ಬಹಳ ಕೇಡು ಬಗೆಯುತ್ತಿದ್ದೇನೆ. ಈಗ ಅವನೇನಾದರೂ ಜೀವಂತ ಇದ್ದಿದ್ದರೆ, ಇಂತಹ ಪ್ರಸಂಗ ಬರುತ್ತಿತ್ತೆ? ಅಥವಾ ಜಗಳವೇ ಹುಟ್ಟುತ್ತಿರಲಿಲ್ಲವೇನೊ. ಇಲ್ಲವೆ ಈಗ ನನ್ನ ಈ ದುರ್ನಡತೆ ಅವನಿಗೆ ತಿಳಿದು, ಅವನೇನಾದರೂ ಮಾಡುವಹಾಗಿದ್ದರೆ ನನ್ನನ್ನು ನುಚ್ಚುನೂರು ಮಾಡದೆ ಇರುತ್ತಿರಲಿಲ್ಲ.'

ಆದರೂ ತನ್ನ ಮಗಳು ಇಷ್ಟೆಲ್ಲ ಹೇಳುವುದು ಸಾಧ್ಯವಾದರೂ ಇದೆಯೆ ಎಂದು ಯೋಚಿಸಿದಳು. ಎರಡನೆಯ ಕಾರಣವಂತೂ ನಿಶ್ಚಯವಾಗಿ ಎರಡನೆಯವರು ಹೇಳಿಕೊಟ್ಟದ್ದೆಂಬುದು ತೀರ ನಿಚ್ಚಳವಾದ ಮಾತಾಗಿದೆ. ಹಾಗೆಂದರೆ ಮೊದಲನೆಯದನ್ನು ಕೂಡ ಹೇಳಿಕೊಟ್ಟಿರಬೇಕು. ಅಥವಾ ಗೌಡಪ್ಪ ಹೇಳಿದಹಾಗೆ ಆಕೆಯ ಜವಾಬೇ ಆಗಿರಲಿಕ್ಕಿಲ್ಲ ಎಂದುಕೊಂಡಳು. ಎಲ್ಲಿಂದಲೊ ಅವಳಲ್ಲಿ ಸಮಾಧಾನದ ಗಾಳಿ ತೀಡಿತು. ಆದರೆ ಇನ್ನೊಂದು ಗಳಿಗೆಗೆ ಅವಳ ಹೊಟ್ಟೆಯುರಿ ಮತ್ತೆ ಭುಗಿಲೆಂದು ತನ್ನ ಮೈದುನನ ಮೇಲೆ ಏಕೀಕೃತವಾಯಿತು. ಅವರೆಲ್ಲರ ಮೇಲೂ ಕರಕರನೆ ಹಲ್ಲು ಕಡಿದಳು ಇಪ್ಪತ್ತು ವರ್ಷವಾದರೂ ಶಿಕ್ಷೆಯಾಗ ಬೇಕು. ಎಂದು ತನ್ನನ್ನೇ ಸಂತಯಿಸಿಕೊಂಡಳು.

ಮಂಗಳವಾರದಿನ ಮಾಮಲೇದಾರ ಕಚೇರಿಯಲ್ಲಿ ಒಮ್ಮೆ ಮಗಳ ಭೆಟ್ಟಿಯಾದರೆ ಏನೆಲ್ಲವನ್ನೂ ತಿಳಿದುಕೊಳ್ಳಬೇಕು, ಎಂದು ದೇವಕ್ಕ ಯೋಚಿಸುತ್ತಿದ್ದಳು. ಆದರೆ ಮಗಳು 'ತಾಯಿಯೆಡೆಗೆ ಬರುವುದೇ ಇಲ್ಲ' ಎಂದು

ಬಿಟ್ಟದ್ದರಿಂದ, ಬರಿಯೆ ಮಾರಾಮಾರಿಯು ವಿಚಾರಣೆಯಷ್ಟೆ ನಡೆಯಿತು. ಮತ್ತು ಪಾರೋತಿಯು ವಿಷಯದಲ್ಲಿ ಹೆಚ್ಚಿಗೆ ಸಂಬಂಧ ತರುವದು ಅವರ ಫಿರ್ಯಾದಿಗೆ ಧಕ್ಕೆ ತರುವಂತಿತ್ತು. ಕಾರಣ ಈಗ ಕ್ರಿಮಿನಲ್ಲಿನದೊಂದು ಮಾತನ್ನೇ ಗೌಡಪ್ಪನವರು ಮುಂದುಮಾಡಿದರು.

೨-೩ ತಾಸಿನಲ್ಲಿ ಎಲ್ಲ ಮುಗಿದುಹೋಯಿತು. ಕೆಲದಿನಗಳಲ್ಲೇ ತೀರ್ಪು ಹೊರಬಿದ್ದಿತು. 'ಹಲ್ಕಿಮಾರಾಮಾರಿ' ಎಂದು ಅದಕ್ಕೆ ನಾಮಕರಣವಾಗಿ ಕೆಂಚವ್ವನು ನಿರ್ದೋಷಿಯಾಗಿದ್ದಳು. ಹನುಮನಿಗೆ ಮಾತ್ರ ೨೫ರೂ. ದಂಡವಾಯಿತು. 'ಖಟ್ಲೆ ನಮ್ಮಂತೆಯಾಯಿತು' ಎಂದು ಗೌಡಪ್ಪನವರು ಹಾವೇರಿಯಿಂದ ಮರಳಿ ಬರುವಾಗ, ಮೋಟರಿನಲ್ಲಿ ಕುಳಿತೇ ಊರಲ್ಲಿ ಸಾರಿದರು.

ದೇವಕ್ಕನಿಗೆ ಕೂಡಲೇ ಈ ಸುದ್ದಿ ತಿಳಿಯಿತು. ಮಧ್ಯಾಹ್ನಕ್ಕೇ ಬಂದುದರಿಂದ, ಗೌಡಪ್ಪನವರ ಭೆಟ್ಟಿ ರಾತ್ರಿಯತನಕವೂ ಆಗಲಿಕ್ಕಿಲ್ಲ ಎಂದುಕೊಂಡು ಅವರ ಮನೆಗೇ ದೇವಕ್ಕ ಹೋದಳು. ಅದೇ ಊಟಮುಗಿಸಿ ಅವರು ಕುಳಿತಿದ್ದರು. ಈಕೆ ಹೋಗುತ್ತಲೂ ತಾಂಬೂಲದ ಬಾಯಿಂದ ಬರಮಾಡಿಕೊಳ್ಳುತ್ತ "ಬಾರವಾ, ದ್ಯಾವಕ್ಕಾ. ಇನ್ನೇನು ಖಟ್ಲೇಗೆದ್ದೀದಿ ನಮಗೇನರೆ ಶೀ' ಮಾಡಸಲ್ಲ." ಎಂದರು.

"ಖಟ್ಲೆ ಗೆದ್ದವರು ನೀವ್ರಿ, ನಾನಲ್ಲ. ನನ್ನ ಮಗಳು ನನಗ ಸಿಕ್ಕಿದ್ರ ನಮ್ಮಂತೆ ಆತು ಅಂತ ತಿಳೀತಿದ್ದೆ" ಎಂದು ಕಟುವಾಗಿ ಉತ್ತರಕೊಟ್ಟಳು.

"ನಾಯೇನು ಮಾಡ್ಲಿ. ನಿನ್ನ ಮಗಳs ಬರಲಿಕ್ಕೆ ಒಲ್ಲೆಅಂದ್ರು. ನಿನ್ನ ಮೈದುನಗ ದಂಡಾಶಿಕ್ಷೆ ಆಗಬೇಕಂತಿದ್ದೆಲ್ಲ ಅಷ್ಟು ಆತಿಲ್ಲೊ"

"ಅದೇನ ದಂಡರಿ? ಇಪ್ಪತ್ತೈಯ್ದು ರೂಪಾಯಿ. ಜೇಲಿಗೆ ಹೋಗಬೇಕಾಗಿತ್ರಿ ಅವರೆಲ್ಲಾ ಇಪ್ಪಿಪ್ಪತ್ತು ವರ್ಸರೆ" ದೇವಕ್ಕನ ಮುಖದಲ್ಲಿ ದುಃಖದ ಸಿಟ್ಟು ಒತ್ತಾಗಿ ಬಂದಿತ್ತು.

ಗೌಡಪ್ಪನವರು ಬಿರುಸಾಗಿಯೆ ಉತ್ತರ ಕೊಡಬೇಕೆಂದಿದ್ದರು. ಅವಳ ಈ ಮನಸ್ಥಿತಿ ಅವರಿಗೂ ಹೊಳೆಯಿತು.

"ಅದ್ಹೆಂಗ ಇಷ್ಟು ಲಗೂ ಸಾಧ್ಯದ ದ್ಯಾವಕ್ಕಾ? ನೋಡು ಸುಳ್ಳಸುಳ್ಳs ನಿನಗ ಹೊಡದಾರ ಅಂತ ಫಿರ್ಯಾದಿ ಕೊಟ್ಟಿದ್ದಕ್ಕs ಇಷ್ಟು ದಂಡ ಆತು.

ಇನ್ನ ನಿನ್ನ ಮಗಳ ಸಂಬಂಧಿ ಬಂತಂದ್ರ ಅವರು ಜೇಲಿಗೆ ಹೋಗಲಿಕ್ಕೇ ಬೇಕು. ಈಗೇನು ಇದು ಇಲ್ಲಿಗೇ ಮುಗಿತಂತ ತಿಳಿದೇನು. ಇದು ಕ್ರಿಮಿನಲ ಕೇಸ ಏನವಾ, ಅದಕ್ಕನ ಮಾಮಲೇದಾರ ಕಚೇರ್‍ಯಾಗ ನಡೀತು. ಇನ್ನ ನಿನ್ನ ಮಗಳ್ನ ನಿನಗ ಕೊಡಸೋಸಂಬಂಧಿ ಮುನಸೂಫ ಕೋರ್ಟಿನ್ಯಾಗ ಖಟ್ಲೆ ನಡಸಬೇಕಾಗತ್ವದ. ಇವತ್ತ ವಕೀಲರ ಸಂಗತೀ ಅದನ್ನೂ ಮಾತಾಡಿ ಬಂದೇನಿ" ಎಂದು ಹೇಳಿದರು ಗೌಡಪ್ಪನವರು. ಮತ್ತೆ ತಮ್ಮ ಬಡಾಯಿ ಸುರುವು ಮಾಡಿದರು. ದೇವಕ್ಕ ಏನೂ ಮಾತಾಡಲಿಲ್ಲ. ಅದು ಮುಗಿದೊಡನೆ ಎದ್ದು ಹೋದಳು.

ಆಕೆಯ ಮನಸ್ಸು ಅಸ್ವಸ್ಥಗೊಂಡಿದೆಯೆಂಬುದನ್ನು ಗೌಡಪ್ಪನವರು ಕಂಡುಕೊಂಡೇ ೪-೫ದಿನ ಅವಳ ಸುದ್ದಿಗೇ ಹೋಗಿರಲಿಲ್ಲ. ಈಗ ಕೋರ್ಟಿನಿಂದ ಸಮನ್ಸು ಬಂದಿತ್ತು. ಕೋರ್ಟ ಫೀ ಇತ್ಯಾದಿಗಳಿಗಾಗಿ ರೊಕ್ಕದಪ್ರಶ್ನೆ ಇದ್ದುದರಿಂದ ಗೌಡಪ್ಪನವರು ಒಂದಿನ ಬಂದರು. ರೊಕ್ಕದ ಬೇಡಿಕೆಗಳಿಗೆ ದೇವಕ್ಕ ಸರಳವಾಗಿ ಹೇಳಿದಳು. "ನಾನೆಲ್ಲಿಂದ ತರಲಿ ?"

"ಅಂದ್ರ ? ನನ್ನ ಕಡಿಂದ ಇನ್ನ ಆಗದು. ಈಗೇ ನೂರುರೂಪಾಯಿ ಸನೇಕ ಖರ್ಚು ಆಗ್ಯಾವ, ನೀ ಇನ್ನೂವರೆಗೆ ಒಂದು ದಂಬಡೀನೂ ಕೊಟ್ಟಿಲ್ಲಾ, ಗೊತ್ತದನು ?" ಗಟ್ಟಿಸ್ವರದಲ್ಲಿ ಗೌಡರು ಕೇಳಿದರು.

"ಗೊತ್ತಾಗೋದೇನೈತಿ ಇದರಾಗ. ನಿಮ್ಮಾಕ್ಯಲೆ ಕೈಯೂರೇ ಈಟೆಲ್ಲಾ ನಾ ಮಾಡಿದ್ದಲ್ಲ ? ನೀವು ಮಾಡಂತ ಹೇಳಿದ್ರಿ, ಮತ್ತ ನೀವs ನಡಿಸಿದ್ರಿ. ನನ್ನಿಂದ ಇನ್ನೇನರೆ ಬೇಕೂ. ತಂತೀರಿ ?"

ಗೌಡಪ್ಪ ರೇಗಿದ್ದರು. "ಹಿಂಗೆಲ್ಲಾ ಹಾರಿಸಿಕೊಂಡು ಹುಚ್ಚುಚ್ಚರ ಮಾತಾಡಿದ್ರ ? ಖಟ್ಲೆ ಗೆದಿಯೋದು ನನಗ ಬೇಕಾಗಿತ್ತೊ ನಿನಗ ಬೇಕಾಗಿತ್ತೊ? ನಿನ್ನ ಮಗಳು ನಿನಗ ಪರತ ಸಿಗಬೇಕಾದ್ರ ಖಟ್ಲೇ ಮುಂದ ಸಾಗಬೇಕಾಗತ್ವದ ಅದಕ್ಕ 'ಹೂಂ' ಅನ್ನೋಕಿ ದುಡ್ಡಿನ ಸಾರಣಿ ಇಲ್ದ ಕೈ ಜಾಡಿಸಿದ್ರ ಕೇಳೀನೇನು ? ಊರಾಗ ನನ್ನ ಮರ್ಯಾದಿ ತಗದೀ ಎಲ್ಲ್ಯರೆ. ಗಡಾ ವ್ಯವಸ್ಥಾ ಮಾಡಲಿಕ್ಕೇ ಬೇಕು."

"ಹಂಗರ ನನಗಿನ್ನೇನರೆ ಮಾಡುತೀರಿ ? ನನ್ನsಕೊಟ್ಟಿ ನಿಮಗ —

ಮಗಳು ಮನಿಗೆ ಬರ್ಲಿ ಅಂತ. ನನ್ನಕಡೀ ಅಂತೂ ವ್ಯವಸ್ಥಾ ಮಾಡಾಕ ದಾರೀನಽ ಇಲ್ಲಾ"

ಗೌಡಪ್ಪನವರ ಸಿಟ್ಟು ಈ ಮಾತಿನೆದುರು ಸೋಲಬೇಕಾಯಿತು. ತುಸು ರಮಿಸುವ ದನಿಯಲ್ಲಿ, "ನನಗೂ ತಿಳೀತ್ಯದ. ದ್ಯಾವ್ರೂ, ಒಂದು ಉಪಾಯ ಹೇಳ್ತೇನಿ. ಅದರಂತ ನಡದ್ರ ನಿನಗೂ ಹಿತಾ, ನನಗೂ ಹಿತಾ"

"ಏನದು?"

"ನಿನ್ನ ಖಣದ ಜಾಗಾ ಅದ ಅಲ್ಲಾ, ಅದನ್ನ ಒತ್ತೀ ಹಾಕು" ಈ ಮೊದಲೇ ದೇವಕ್ಕ ಅದನ್ನು ಊಹಿಸಿದ್ದಳೇನೊ. "ಊಂಹು ಸಾಧ್ಯಿಲ್ಲಾ. ಬೇಕಾರ ನೀವು ಖಟ್ಲಿ ಹಿಂತಕ್ಕೊಳ್ರಿ. ನನ್ನ ಮಗಳು ಇನ್ನ ನನಗ ಬೇಕಾಗಿಲ್ಲ" ಎಂದಳು.

"ನಿನಗೇನರೆ ಅಕ್ಕಲ ಐತೇನು? ಊರೊಳಗನ ನನ್ನ ಮರ್ಯಾದೀ ತಗೀಬೇಕಂತ ಮಾಡೀಯೇನು? ಕೋರ್ಟಿಗೆ ಹೋಗಲಿಕ್ಕಽಬೇಕು"

"ಹಂಗಾದರ ನೀವು ರೊಕ್ಕಾ ಹಾಕ್ರಿ. ನಾ ಹೇಳ್ತಿಲ್ಲಽ, ಖಟ್ಲಿ ನನಗೊಬ್ಬಾಕಿಗೇ ಬೇಕಾಗಿಲ್ಲಾ ಅಂತ"

ಮತ್ತೆ ರೇಗಿಗೆದ್ದದ್ದೇ ತಪ್ಪಾಯಿತೆಂದು ಗೌಡಪ್ಪನವರು ದನಿ ಇಳಿಸಿದರು "ಹಿಂಗ್ಯಾಕ ಮಾಡತೀ ದೇವ್ರೂ, ನಾಯೇನ ರೊಕ್ಕಾಕೊಡಲಿಕ್ಕೆ ಒಲ್ಲೆ ಅಂತೀನ್ಯಽ? ನೀ ಹೇಳದನ ನಾನಿಷ್ಟು ಖರ್ಚ ಮಾಡಿಲ್ಲಾ? ಈಗೇನರೆ ನಿನಗ ಅದನ್ನು ಕೊಡು ಅಂದೆನೇನು? ಖರ್ಚಮಾಡಿದ್ದರೆ ಒಪ್ಪತೀಯಿಲ್ಲೊ? ನನ್ನ ಮ್ಯಾಲ ಅಷ್ಟು ವಿಶ್ವಾಸವಿಲ್ಲಾ? ಈಗ ನೋಡು ನಾ ಹಿಂಗಽ ರೊಕ್ಕಾ ಹಕ್ಕೋತಽ ಹೋದ್ರ, ಊರೊಳಗ ನಮ್ಮ ವಿಷಯಕ್ಕ ಎಷ್ಟು ಬಬ್ಬಾಟ ಆಗತ್ಯದ ಅನ್ನೋದು ವಿಚಾರಮಾಡು. ನಾಕಮುಂದಿಗೆ ಗೊತ್ತಾಗೋಹಂಗ ಆ ಜಾಗಾ ನಾನಽ ಬರಿಸಿಕೊಂಡು ಬಿಡ್ತೇನಿ. ಒಂದೆರಡು ವರ್ಷ ಆದಮ್ಯಾಲೆ ಹಣಾ ಮುಟ್ಟಿಸ್ಯಾಳ ಅಂತ ಹೇಳಿ, ಅದನ್ನ ನಿನಗಽ ಬಿಟ್ಟು ಕೊಡತೀನಲ್ಲಾ? ನಿನ್ನ ಗೇಣುಜಾಗಾದ ಮ್ಯಾಲೆ ನನಗ ಆಶಾ ಅದ ಅಂತ ತಿಳದೀಯೇನು? ಮುಂದಿಗೆ ಕೊಟ್ರ ನಿನಗರೊಕ್ಕ ಬಾಳಷ್ಟು ಬರೂದಿಲ್ಲಾ. ಮತ್ತ ಎರಡನೇ ದವರಾದ್ರ ಕೈಯಾಗ ಹಣಾಕೊಡದ ಹೊರ್ತು ಅವರ್‍ಯಾಕ ಬಿಟ್ಟುಕೊಟ್ಟಾರು?

ಎಲ್ಲಾನೂ ಸ್ವಲ್ಪ ವಿಚಾರಮಾಡು. ನಿನ್ನ ಸುಖಕ್ಕs ಈ ಮಾತು ಹೇಳ್ತೇನಿ. ನನ್ನ ಮ್ಯಾಲೂ ಅವಿಶ್ವಾಸಮಾಡಿದರ ಹೆಂಗ?''

ಮೌನ ಬಲೆಗೆ ಇಳಿಯಿತು. ''ಎಂಥಾ ಗುಣವಂತೆಯೇ ನೀನು?'' ಎಂದು ಗೌಡಪ್ಪನವರು ನೆಟ್ಟನೋಟದಿಂದ ಅವಳನ್ನು ಹೊಗಳಿದರು.

ದೇವಕ್ಕನ ಮುಖದ ಮೇಲೆ ಈಗ ಕಳೆಯೆಂಬುದಿಲ್ಲ. ಯಾರೊಂದಿಗೂ ವಿಶೇಷ ಮಾತನಾಡುತ್ತಿರಲಿಲ್ಲ. ತಾನಾಯಿತು ತನ್ನ ಕೂಲಿಯು ಕೆಲಸವಾಯಿತು. ತನ್ನ ಮಗಳ ವಿಷಯ ಬಂತೆಂದರೆ ಮಾತ್ರ, ಅವಳ ವಿಚಾರವನ್ನೇ ಬಿಟ್ಟು, ತನಗೆ ಆಗದ ಹನುಮ ಕೆಂಚವ್ವ ಮುಂತಾದವರ ಬಗ್ಗೆ ಬಹಳಷ್ಟು ಬಿರುಸಿನ ಮಾತುಗಳನ್ನಾಡುವಳು. ಒಂದೊಂದಾಗಿ ಅವರು ತನಗೆ ಮಾಡಿದ ಅನ್ಯಾಯಗಳನ್ನು ಮನದುಂಬಿ ವಿವರಿಸುವಳು. ಕೇಳುವವರು ಬೇಸತ್ತು ಹೊರಟು ನಿಂತಿದ್ದರೂ, ಅದನ್ನು ಗಣಿಸದೆ, ಮತ್ತೆ ಅವರನ್ನು ನಿಲ್ಲಿಸಿಕೊಂಡು ಹೇಳುವಳು. "ಈ ಕಚೇರಿಯವರು ದಡ್ಡರು, ಅದಕ್ಕೇ ಅವರಿಗೆ ಬರಿ ಇಪ್ಪತ್ತೈದು ರೂಪಾಯಿ ದಂಡಕಟ್ಟಿದರು. ಅವರಿಗೆ ತಕ್ಕ ಶಿಕ್ಷೆಯಾಗುವದಕ್ಕೋಸ್ಕರ, ಬೇರೆ ಕಚೇರಿಗೆ ಗೌಡಪ್ಪನವರು ಅರ್ಜಿಮಾಡಿರುವದಾಗಿ" ಹೇಳುವಳು.

ಮುದ್ದತಿನ ದಿನ ಬಂದಿತು. ಹಿಂದಿನ ರಾತ್ರಿ ಗೌಡಪ್ಪನವರು ಮನೆಗೆ ಕರಸಿ ಆಕೆಯ ಕೈಯಲ್ಲಿ ಇಪ್ಪತ್ತು ರೂಪಾಯಿಕೊಟ್ಟು, ಅವಳೇ ಕೈಯೆತ್ತಿ ಮೋಟರಿನ ಖರ್ಚು ಮತ್ತು ಇತರ ವೆಚ್ಚಗಳಿಗಾಗಿ ಕೊಡಬೇಕು ಎಂದು ಹೇಳಿದರು. ಆದರೆ ದೇವಕ್ಕನು ನಾಳೆ ಮಗಳ ಮುಖವನ್ನು ಕೋರ್ಟಿನಲ್ಲಿ ಕಂಡೇನೆಯೆ ಎಂದು ತವಕಪಡುತ್ತಿದ್ದಳು. ಈಗಾದರೂ ಮಗಳನ್ನು ಮಾತನಾಡಿಸಿ ನೋಡುವೆ. ಇದೊಂದು ಕೊನೆಯ ಆಸೆ. ''ಅವ್ವಾ, ಎಂದು ಆಕೆ ಓಡಿ ನನ್ನ ಹತ್ತಿರ ಬಂದಾಳೆಯೇ, ಆ ಭಾಗ್ಯ ನನಗಿದೆಯೆ?" ಎಂದು ಗೌಡಪ್ಪನವರ ಹೆಂಡತಿಯೆದುರು ಕುಳಿತು ಮುಳು ಮುಳು ಅತ್ತಳು.

ಆದರೆ ಅವಳ ಆಸೆ ನೆರವೇರಲಿಲ್ಲ. ಮಗಳು ಬಂದಿರಲೇ ಇಲ್ಲ. ಪ್ರತಿವಾದಿಯ ಕಡೆಯವರು, ತಮ್ಮ ತಯಾರಿ ಆಗಿಲ್ಲವೆಂದು ಮುದ್ದತು ಕೇಳಿದ್ದರು. ಅದಕ್ಕೆ ಪರವಾನಿಗೆ ದೊರೆವುದೆಂದು ಅವರಿಗೆ ಖಾತ್ರಿಯಿತ್ತು; ಹಾರೂ 'ಬಂದಿರಲಿಲ್ಲ.

ಅಂದು ಸಂಜೆ ವಕೀಲರು—ದೇವಕ್ಕ, ಗೌಡಪ್ಪನವರ ಎದುರು ತಮ್ಮ

ಬೇಡಿಕೆ ಮುಂದಿಟ್ಟರು. ಗೌಡರು ಅರ್ಧ ಅವಳಪರವಾಗಿ, ಅರ್ಧ ವಕೀಲರ ಪರವಾಗಿ ವಾದಿಸಿದರು. ದೇವಕ್ಕ ಸ್ವತಃ ಇರುವ ಜಾಗವನ್ನು ವಕೀಲರ ಹೆಸರಿನಲ್ಲಿ ಮಾಡಬೇಕೆಂಬ ವಿಚಾರ, 'ಸಂತೆಯ ಮರೆ'ಯಾಗಿ ನಡೆಯಿತು. ಗೌಡಪ್ಪನವರು ಮೊದಲಿಗೇ ಸಾಕಷ್ಟು 'ಸಮಜೂತ' ಹೇಳಿದ್ದರೂ, ದೇವಕ್ಕ ರೇಗಿಗೇಳದೇ ಇರಲಿಲ್ಲ.

"ನಿನ್ನ ಖಟ್ಲೆ ಏನು ಫುಕ್ಕಟ ನಡೆಸಬೇಕೂ ಅಂತೀಯೇನು? ಇದರಿಂದs ನನ್ನ ಹೊಟ್ಟೆ ತುಂಬೋದು. ಧಂದಕ್ಕ ಬೋರ್ಡ ಹಾಕಿಲ್ಲ" ಎಂದು ವಕೀಲರು ಗದರಿಸಿದರು.

"ನಿಮಗ ಫುಕ್ಕಟ ಮಾಡ ಅಂತ ಹೇಳಲಿಲ್ರಿ. ಗೌಡಪ್ನೋರಿಗೇ ರೊಕ್ಕಾ ಹಾಕಾಕ ಹೇಳಿದ್ನಿ. ಮನೀನೂ ಕೊಟ್ಟಬಿಟ್ರೆ ಮಗಳ್ನ ಎಲ್ಲಿ ಕುಂಡಲಸಲಿರಿ?" ಎಂದಳು.

ಈ ಹೆಣ್ಣು ನನ್ನ ಮರ್ಯಾದೆಯನ್ನೂ ತೆಗೆಯುತ್ತದಲ್ಲ, ಎಂದು ಗೌಡಪ್ಪನವರು ಒಳಗೊಳಗೆ ಕುದಿದರು. ಆದರೂ ವಕೀಲರ ಕಡೆಯಿಂದ ಅವಳಿಗೆ ಹೇಳಿಸಿದರು. "ನ್ಯಾಯ ನಿನ್ನ ಕಡೇನs ಐತಿ. ಖಟ್ಲೆ ನಿನ್ನಂತನs ಆಗ್ತsದ ಕಾಳಜಿ ಬ್ಯಾಡಾ. ಕೋರ್ಟಿನವರು ಅವರ ಕಡಿಂದನs ನಿಂದೆಲ್ಲಾ ಖರ್ಚು ಕೊಡಸ್ತಾರ. ಮತ್ತ ಇದಲ್ಲದ ಅವರಿಗೆ ಶಿಕ್ಷಾ ದಂಡಾ ಎಲ್ಲಾ ಆಗ್ತದ." 'ನಾನು ವಿರೋಧಿಸಲೇಬಾರದಿತ್ತು' ಎಂದುಕೊಂಡು ದೇವಕ್ಕ 'ಹೂಂ' ಎಂದಳು.

ರಾತ್ರಿ ಮೋಟರಿನಿಂದಿಳಿದು ಮನೆಯ ಕದನೂಕಿದಳು. ನಿರಾಶೆ ಅವಳ ಮನವನ್ನು ಅತಿಯಾಗಿ ಆವರಿಸಿತು. 'ಇಂದು ನನ್ನ ಜೀವವೇ ಹೋಗಿಬಿಟ್ಟರೆ ಎಷ್ಟು ಸುಖ!' ಎಂದುಕೊಳ್ಳುತ್ತ ಎಡಗೈ ಹೆಬ್ಬಟ್ಟಿಗೆ ಹತ್ತಿದ ಮಸಿಯನ್ನು ತೊಳೆದುಕೊಂಡಳು.

ರಾತ್ರಿಯೆಲ್ಲ, ಒಂದಿಲ್ಲೊಂದು ಬಗೆಯಿಂದ ದೇವಕ್ಕ 'ಮಗಳು ಮಗಳು' ಎಂದು ಬಡಬಡಿಸಿದಳು. 'ಮಗಳ ವಿಷಯದಲ್ಲಿ ನಾ ತಪ್ಪು ಮಾಡೇನಿ. ಆದರೆ ತನ್ನ ಮೈದುನ, ಅವನ ಹೆಂಡತಿ ಏನೂ ಕಾರಣವಿಲ್ಲದೆ ನನ್ನ ಗೋಳು ಹೊಯಿದುಕೊಂಡಾರೆ. ಮನೆಯಲ್ಲಿ ನನಗೆ ಗಂಡಸರೆಂಬುವರಿಲ್ಲ. ಅವನಿದ್ದರೆ, ಅವರ ಪಕ್ಷಪಾತಿಯಾದ ಅವನು ನನ್ನ ಕಾಲುಬಿಗಿದು, ಹೆಡಮುರಿಗೆ ಕಟ್ಟಿ,

ಮೈದುನನಿಗೆ ನಮಸ್ಕಾರ ಮಾಡಿಸುತ್ತಿದ್ದನೇನೋ ಏನರಿಮಾಡಲಿ, ಆ ನೀಚರಿಗೆ....ಹೋಗಿ ಈಗ ಅವರ ಮನೆಗೆ ಬೆಂಕಿಹಚ್ಚಿ ಬಂದು ಬಿಡಲೇ ? ನಾನೂ ಅದರಲ್ಲೇ ಬಿದ್ದು ಸತ್ತುಬಿಡುವೆ.....ಪಾರೀ ಯಾಕೆ ಹೀಗೆ ನನ್ನ ಜೀವಂತ ಕೊಲ್ತೀಯೇ ?' ಎಂದು ಗೋಗರೆದಳು.

ಬೆಳಕು ಹರಿಯಿತಾದರೂ ದೇವಕ್ಕ ಎದ್ದಿರಲಿಲ್ಲ. ಆದರೆ ಬಜಂತ್ರಿಯ ಸಪ್ಪಳ ಅವಳ ಕಿವಿಯಲ್ಲಿ ನಿನದಿಸಿತು. ಯಾರಮದುವೆ ಇದೆ ಎಂಬುದನ್ನು ತಿಳಿದುಕೊಳ್ಳುವ ಗೊಡವೆಗೇ ಹೋಗಿರಲಿಲ್ಲ. ಆಕೆ ಎದ್ದುಬಂದು ಮುಂದತ್ತ ಹೋಗಿ ನೋಡಿಕೊಂಡು ಬಂದಳು. ತಮ್ಮ ಓಣಿಯಲ್ಲೇ ಭರಮನ ಮಗಳು ಸಾಂವಿಯ ಲಗ್ನ. ಚಪ್ಪರಹಾಕಿ ತಕ್ಕಷ್ಟು ಶಿಸ್ತುಮಾಡಿದ್ದರು. ವಧೂವರರು ಕುಳಿತಿದ್ದರು 'ಎಂತಹ ಮಾಟನ್ನ ಜೋಡಿ! ಆ ಎಳೆಯ ದಂಪತಿಗಳು ಅನುಕ್ರಮವಾಗಿ ಹನ್ನೆರಡು ಮತ್ತು ಎಂಟುವರ್ಷದವರು.' ದೇವಕ್ಕನಿಗೆ ಬಹಳ ಹೊತ್ತು ಅಲ್ಲಿನಿಂತು ನೋಡುವುದಕ್ಕೆ ಮನಸ್ಸಾಗಲಿಲ್ಲ.

ಅಡಿಗೆ ಮುಗಿಸಿದಳು. ಮನೆಯಲ್ಲಿ ರೊಟ್ಟಿತಿನ್ನದೇ, ಗೌಡಪ್ಪನವರ ತೋಟಕ್ಕೆಯೆ ಕಟ್ಟಿಕೊಂಡು ಹೋದಳು. ಅಲ್ಲಿ ಮುಳುಗಾಯಿಗಳನ್ನು ಹರಿಯಲು ೪-೫ ಹೆಣ್ಣಾಳುಗಳನ್ನು ಹಚ್ಚಿದ್ದರು. ಉತ್ತೇಜಿತಳಾಗಿ ದೇವಕ್ಕ ಸಾಗಿದ್ದಳು. 'ನನ್ನ ಮಗಳು ಇದ್ದಿದ್ದರೆ, ಈಗ ನಾನೂ ಮದುವೆಮಾಡಿಬಿಡುತ್ತಿದ್ದೆನಲ್ಲ! ಎಷ್ಟೊಂದು ಹಣವನ್ನು ಆಕೆ ತೆರದ ರೂಪದಿಂದ ತರಬಹುದಾಗಿತ್ತು! ಅಷ್ಟು ಚೆಲುವಿ ಆಕೆ! ತಪ್ಪಿ ನನ್ನಂತಹ ಬಡವೆಯ ಹೊಟ್ಟೆಯಲ್ಲಿ ಹುಟ್ಟಿದಳು. ಈ ವರ್ಷ ಪಾರೂನ ಮದುವೆ ಮಾಡೇಬಿಡುತ್ತಿದ್ದೆ.೭-೮ವರ್ಷದ ಸಾಂವಿಯ ಮದುವೆ ನಡೆದಿದೆ ನನ್ನ ಮಗಳು ಇಷ್ಟು ದೊಡ್ಡವಳಾಗಿದ್ದಾಳೆ. ಆಕೆಯ ಮದುವೆಯಾದ ಮೇಲೆ, ಅಳಿಯನನ್ನು ಮನೆಯಲ್ಲೇ ಇಟ್ಟುಕೊಳ್ಳುತ್ತಿದ್ದೆ. ಅವರಿಬ್ಬರೂ ದುಡಿದು ತರುತ್ತಿದ್ದರು; ನಾನು ಪಾರುವಿನ, ಅವಳಷ್ಟೇ ಮುದ್ದಿನ ಮಕ್ಕಳನ್ನು ಆಡಿಸುತ್ತ ಮನೆಯಲ್ಲಿರುತ್ತಿದ್ದೆ. ಪಾರೂ, ಹೇಗಾದರೂ ಮಾಡಿ, ಈ ಕ್ಷಣ ನೀ ನನ್ನ ಮುಂದೆ ಬಂದು ನಿಂತುಬಿಟ್ಟರೆ! ಆಂ.... ಆಂ! ಬರ್ತೀಯಾ! ಇಲ್ಲ. ನನ್ನ ದೈವ ಖೊಟ್ಟಿ ಅದ. ಆಕೆಯಿನ್ನು ನನಗೆ ದೊರೆಯಲಾರಳು.....ಛೀ ಅಂತಹ ಅಭದ್ರ ಮಾತೇಕೆ ? ಕೋರ್ಟು ಅವಳನ್ನು ನನಗೆ ಕೊಡಿಸದೆ ಇರದು. ಈ ವರ್ಷವೇ ಮದುವೆ ಮಾಡತೇನಿ.'

ತೋಟ ಸಮೀಪಿಸಿತು. ಅಲ್ಲಿಂದಲೆ ತುಂಗಭದ್ರೆ ಕಾಣಿಸುತ್ತಿದ್ದಳು. ಆಕೆಯು ಹಾಲ್ನೊರೆಯನ್ನು ಹೀರಿ, ಗಿಡ ಬಳ್ಳಿಗಳು ಬಿಮ್ಮನೆ ಬೀಗುತ್ತಿದ್ದವು. ಸಹಜವಾಗಿ ದೇವಕ್ಕ ಮೋರೆಯೆತ್ತಿದಾಗ ಸ್ವಲ್ಪ ದೂರದಲ್ಲಿ ಒಬ್ಬ ಹುಡಿಗೆ ಕೈಯಲ್ಲಿ ಮಾವಿನ ಪಾಡೊಂದನ್ನು ತಿನ್ನುತ್ತ, ಇನ್ನೊಂದು ಕೈಯಲ್ಲಿ ಜೊತೆಗಿದ್ದ ಆಡಿನ ಮರಿಗೆ ಕಟ್ಟಿದ ಹಗ್ಗವನ್ನು ಹಿಡಿದುಕೊಂಡು ಸೊಬಗಿನಿಂದ ಸಾಗಿದ್ದುದನ್ನು ಕಂಡಳು. ಅವಳ ಎತ್ತರ, ಮೈಕಟ್ಟು ಎಲ್ಲವೂ ದೇವಕ್ಕನ ಕಣ್ಣಿಗೆ ಪಾರುವಿನ ಹಾಗೆ ಕಂಡವು. ಮೊನ್ನೆ ಮೊನ್ನಿನ ವರೆಗೂ ತಮ್ಮ ಸ್ವಂತದ ಆಡನ್ನು ಪಾರೋತಿಯೂ ಹೀಗೆ ಮೇಯಿಸುತ್ತಿದ್ದಳು. ಎಲ್ಲವೂ ಒಟ್ಟಿಗೆ ಮನಸ್ಸನ್ನು ಮುತ್ತಲು, ದೇವಕ್ಕ 'ಪಾರೂ' ಎಂದು ಕೂಗಿ ಆ ಹುಡುಗಿಯ ಕಡೆ ಧಾವಿಸಿದಳು. ಆ ಮಗು ತನ್ನ ಮನೆಯವರ ಬಾಯಿಂದ. 'ದೇವಕ್ಕನಿಗೆ ಹುಚ್ಚು ಹಿಡಿಯುತ್ತಿದೆ.' ಎಂದು ಆಡುವದನ್ನು ಕೇಳಿದ್ದಳು. ಗಾಬರಿಯಾಗಿ ಕೈಯಲ್ಲಿನ ಹಣ್ಣನ್ನು ಒಗೆದು ಓಡತೊಡಗಿದಳು. "ಮುತ್ತೂ ನನ್ನ ಮಗಳು ನನ್ನಿಂದ ತಪ್ಪಿಸಿಕೊಳ್ಳುತ್ತಾಳಲ್ಲ" ಎಂದು ಬೆನ್ನು ಹತ್ತಿದಳು. ಹುಡುಗಿ ಆಡಿನ ಮರಿಯ ಕೈಬಿಟ್ಟು, ಚೀರುತ್ತ ಸಿಕ್ಕಕಡೆ ಓಡತೊಡಗಿದಳು. ದೇವಕ್ಕನೂ ರಭಸದಿಂದ ನುಗ್ಗುತ್ತಿರುವಷ್ಟರಲ್ಲಿ, ಅಡ್ಡಲಾಗಿ ಹಾದಿದ್ದ ಮಾವಿನಮರದ ಹರಿಯೊಂದು, ಅವಳ ಹಣೆಗೆ ಬಲವಾಗಿ ತಾಗಿತು. ಮೂಗು ಜಜ್ಜಿತು. ಹಣೆಗೆ ಬಲವಾದ ಬುಗುಟೆ ಬಂದಿತು. ಆಗ ತಿಳಿವು ಮೂಡಲು ದೇವಕ್ಕ ನೆಲಕ್ಕೆ ಕುಸಿದು ಕೂತಳು.

ಆದರೆ ಆಕೆ ಬಲುಬೇಗ ಚೇತರಿಸಿಕೊಂಡು ಬದುಕಿಗೆ ಅಣಿಯಾದಳು. ಮುನ್ನೋಡಿ ತನ್ನ ಕೆಲಸಮಾಡುತ್ತಿದ್ದಳು. ಅವರು ಊಟಕ್ಕೆ ಕುಳಿತಾಗ ತಾನೂ ತನ್ನ ಗಂಟನ್ನು ಉಚ್ಚಿದಳು. ಒಬ್ಬ ಆಳು, ಜೊತೆಗೆ ತನ್ನ, ವರ್ಷದ ಕೂಸನ್ನು ಕರತಂದಿದ್ದಳು. 'ನನ್ನ ಕೂಸು ಇಷ್ಟೊತ್ತನಕಾ ಕೈಬಿಟ್ಟು ಆಡೇತಿಲ್ಲ' ಎಂದು ಅಚ್ಚೆಯಿಂದ ಕರೆದುಕೊಂಡು, ಅದಕ್ಕೆ ಮೊಲೆಯುಣಿಸ ತೊಡಗಿದಳು. ದೇವಕ್ಕ ಸುಮ್ಮನೆ ಕೂತುನೋಡುತ್ತಿದ್ದಳು. 'ಆಕೆ ತನ್ನ ಕೂಸಿಗೆ ಹೊಟ್ಟೆಕೊಡುತ್ತಿದ್ದರೆ, ನನಗೇಕೆ ಸಂಕಟವಾಗಬೇಕು ? ತಾಯ್ತನದ ಹಂಬಲಿಕೆಯೆ ಎಂದು ಕೇಳಿಕೊಂಡಳು. ಗೌಡಪ್ಪನವರ ಮೂರ್ತಿ ಒಮ್ಮೆ ಝುಕ್ಕನೆ ಸುಳಿದುಹೋಯಿತು.

ಮೇ ಸೂಟೆಯೊಂದು ಬಂದು, ದೇವಕ್ಕನಿಗೆ ತುಂಬ ತೊಂದರೆ ಕೊಟ್ಟಿತು. 'ಇಲ್ಲವಾದರೆ ಈಗೇ ಖಟ್ಲೆ ಮುಗಿದು, ನನ್ನ ಮಗಳು ನನ್ನ ಮನೆಗೆ ಬರುತ್ತಿದ್ದಳು. ಈಗ ಮದುವೆಮಾಡಿ ಬಿಡುತ್ತಿದ್ದೆ. ಈ ವರ್ಷ ಸಾಧ್ಯವಿಲ್ಲ' ಎಂಬ ವಿಚಾರ ಬಂದಾಗ ಆ ಕೂಡಲೇ ಶಿವರಾಮಭಟ್ಟರ ಮನೆಗೆ ಹೋಗಿ ಅವರನ್ನು ಕೇಳಿದಳು. ಮುಂದಿನ ತಿಂಗಳೂ ಮದುವೆ ಮಾಡಬಹುದು ಎಂಬುದಾಗಿ ಅವರಿಂದ ತಿಳಿದುಕೊಂಡು ಮನಸ್ಸು ತೃಪ್ತಿಪಟ್ಟಿತು. ಆದರೆ ಹನುಮ, ಉಳಿದವರಿಗೆ ಆಗಬೇಕಾದ ಶಿಕ್ಷೆ ಮುಂದೆಹೋಯಿತಲ್ಲ ಎಂದು ನೊಂದನಗೆ ನಕ್ಕಳು. 'ಆಗಲಿ, ಅವರಿಗೆ ಜೇಲು, ನನ್ನ ಮಗಳಿಗೆ ಅಕ್ಕಿಕಾಳು ಎರಡೂ ಕೂಡಿಯೆ ಆಗಲಿ' ಎಂದುಕೊಂಡಳು.

ಈ ಮಧ್ಯೆಕೋರ್ಟಿಗೆ ಸ್ವಲ್ಪ ಹಣ ತುಂಬಬೇಕಾಗಿ ಬಂತು. ಗೌಡಪ್ಪನವರು ತಮ್ಮ ಮಗನ ಮದುವೆಯ ಗಡಿಬಿಡಿಯಲ್ಲಿದ್ದರು. ಆದರೂ ಅದರಲ್ಲೇ ಬಿಡುವು ಮಾಡಿಕೊಂಡು, ಅವಳ ಮನೆಗೆ ಬಂದರು. ಅವರು ಕೇಳಿದಾಕ್ಷಣ ದೇವಕ್ಕ ತನ್ನಲ್ಲಿದ್ದ ಬೆಳ್ಳಿಯ ಚೂರುಚಾರು ಸಾಮಾನನ್ನು ಒಪ್ಪಿಸಿದಳು. ಎರಡು ವರ್ಷದ ಗೊಬ್ಬರ ಕೂಡಿಬಿದ್ದಿತ್ತು. ಎಂಟು ರೂಪಾಯಿಗೆ ಅದನ್ನು ಮಂದಿಗೆ ಮಾರಿದಳು. ಬಂದಹಣ ಗೌಡರಿಗೆ ಒಪ್ಪಿಸಿದಳು.

ದೇವಕ್ಕ ತಾನಾಗಿ ಮಂದಿಯೊಡನೆ ಮಾತಾಡುವದನ್ನೇ ನಿಲ್ಲಿಸಿಬಿಟ್ಟಳು. ಮನೆಯಲ್ಲೇ ಕುಳಿತು ತನ್ನೊಳಗೇ ಮಾತಾಡಿಕೊಳ್ಳುತ್ತಿದ್ದಳು. ಜನರು ಕೂಡ ಅವಳ ಉಸಾಬರಿಗೆ ಹೋಗುತ್ತಿರಲಿಲ್ಲ. ಗೌಡಪ್ಪನವರ ಹೊಲಬದುಕಿನಲ್ಲಿ ಏನಾದರೂ ಕೆಲಸ ಇದ್ದೇ ಇರುತ್ತಿತ್ತು. ಅವರಲ್ಲಿ ದೇವಕ್ಕ ಕಾಯಂ ಕೂಲಿಯಾಳಾಗಿದ್ದಳು. ಹೊಟ್ಟೆಯ ಪ್ರಶ್ನೆಯಿರಲಿಲ್ಲ. ಊಟ, ಕೆಲಸ ಎರಡಾಯಿತೆಂದರೆ ಉಳಿದ ವೇಳೆಯ ಬಹುಭಾಗವನ್ನು ಮಗಳ ಮದುವೆ ಹೇಗೆ ಹೇಗೆ ಮಾಡಬೇಕು ಎಂಬುದನ್ನು ಕುರಿತು ವಿಚಾರಿಸುತ್ತಿದ್ದಳು. ಈ ಹೊಸ ಉದ್ಯೋಗದಿಂದ ಉಳಿದ ಹೊತ್ತು ಬಹಳ ಸರಾಗವಾಗಿ ಹೋಗುತ್ತಿತ್ತು. ಈ ಮಧ್ಯೆ ನೆಗಳೂರಿನಿಂದ ತನ್ನ ಮಗಳ ಸುದ್ದಿಯೇನಾದರೂ ತಿಳಿಯುವುದೆ ಎಂದು ಆಗಾಗ ಬಾಯ್ದೆರೆದು ಅಪೇಕ್ಷಿಸುವಳು. ಒಂದುದಿನ ನೆಗಳೂರಿನವಳೊಬ್ಬಳು ಇಲ್ಲಿಗೆ ಬಂದುದನ್ನು ಹೇಗೋ ತಿಳಿದು ತನ್ನ ಮಗಳ ವಿಷಯ ಕೇಳಿದಳು. 'ಪಾಡಾಗಿ ಅದಾಳು' ಎಂದಿಷ್ಟೇ ಅವನು ಹೇಳಿದ. "ಮಗಳು

ನನ್ನನ್ನು ನೆನಸುತ್ತಿದ್ದಳೆ ? ನೀ ಬರುವಮುಂದೆ ಭೆಟ್ಟಿಯಾಗಿದ್ದೆಯೆ ? ಊರಕಡೆ ಬರ್ತೇನಿ. ನನ್ನೂ ಕರಕೊಂಡು ಹೋಗು ಅಂತ ಅನಲಿಲ್ಲವೇ ?" ಎಂದು ಹತ್ತಾರು ಪ್ರಶ್ನೆ ಕೇಳಿದಳು. ಅವನೇನು ಹೇಳಬೇಕು ? "ನನಗೆ ಆಕೆ ಭೆಟ್ಟಿಯೇ ಆಗಿಲ್ಲ" ಎಂದು ಅಲ್ಲಿಂದ ಜಾರಿಕೊಂಡ.

ಮಗನ ಮದುವೆ ಮುಗಿಯುವದಕ್ಕೂ, ಗೌಡಪ್ಪನವರು ಅದರಿಂದ ಬಿಡುವಾಗಿ ಖಟ್ಲೆಯ ಕೆಲಸಕ್ಕೆ ಮತ್ತೆ ಅಣಿಯಾಗಲು ಕೋರ್ಟುಸುರುವಾಗುವ ದಕ್ಕೂ ಸಮವಾಯಿತು. ಶನಿವಾರ ಮುದ್ದತು ಇರುವಾಗ ಅದಕ್ಕೂ ಎರಡು ದಿನ ಮುಂಚೆ ಗೌಡಪ್ಪನವರು ಆಕೆಯ ಮನೆಯನ್ನು ಪ್ರವೇಶಿಸಿದರು. ನಾಡದಿಗೆ ಹಣ ಬೇಕಲ್ಲ. ಅವಳ ಹುಮ್ಮಸಿನಲ್ಲಿ ಸುರುವಾತಿಗೆ ಸಾಕಷ್ಟು ಹಣ ಖರ್ಚುಮಾಡಿದ್ದಾಗಿದೆ. ಈಗ ಒಂದು ಪೈಯನ್ನೂ ಸ್ವಂತ ವೆಚ್ಚಮಾಡ ಬಾರದೆಂದು ಅವರು ನಿರ್ಧರಿಸಿದಂತಿತ್ತು. ಅವರ ರೊಕ್ಕದಮಾತಿಗೆ ದೇವಕ್ಕನು "ನನ್ನನ್ನು ಯಾರಾದರೂ ಮಾರಲಿಕ್ಕೆ ತಗೊಳ್ಳುತ್ತಾರೇನು?"ಎಂದು ನೇರವಾಗಿ ಕೇಳಿದಳು ಗೌಡಪ್ಪನವರು " ಈಗಾಗಲೇ ನಾನು ನಿನ್ನನ್ನು ಕೊಂಡು, ಅವರ ಹಣಕೂಡಸಲ್ಲಿಸಿಯಾಯಿತು" ಎಂದುಕೊಂಡಿರಬೇಕು ಮನಸ್ಸಿನಲ್ಲಿ. ಆದರೂ ಅವಳನ್ನು ರಮಿಸಿದರು, ಒಲಿಸಿದರು.

ದೇವಕ್ಕನಲ್ಲಿ ಇನ್ನುಳಿದ ಆಸ್ತಿಯೆಂದರೆ, ಹತ್ತಿಯ ಸುಗ್ಗಿಯಲ್ಲಿ ಸಂಪಾ ದಿಸಿದ ಹತ್ತಿ. ವರ್ಷವೂ ಅದನ್ನು ಮಾರಿಬಂದ ಹಣದಲ್ಲಿ ತನಗೂ ಮಗಳಿಗೂ ಸೀರೆ ತಗೊಳ್ಳುವ ವಾಡಿಕೆಯಷ್ಟೆ. ಸುತ್ತುವರಿದು ಬಂದು ಗೌಡಪ್ಪನವರು ಅದರ ಮಾತು ತೆಗೆದರು.

"ಹತ್ತಿ ಮಾರಬೇಕೂ ಅಂತೀರಿ ? ನಾಳೆ ಮಗಳು ಬರತಾಳು, ಆಕಿ ಗೊಂದು ಸೀರಿ ಪೂರ್ತೇಕ ಹತ್ತಿ ಇಟ್ಟು ಉಳಿದದ್ದನ್ನು ಒಯ್ರಿ" ಎಂದಳು.

"ಆಕಿ ಅರಿವಿ ಕಾಳಜಿ ಯಾಕಮಾಡ್ತೀದಿ ? ನನ್ನ ಮಗನ ಮದುವಿ ಉಡುಗೊರಿ ಹೆಂಗಿದ್ರೂ ಆಕಿಗೆ ಕೊಡಬೇಕಾಗೇದಲ್ಲಾ" ಎಂದರು. ಹಾಗೂ ನಾಡದಿಗೆ ತಗಲಬಹುದಾದ ವೆಚ್ಚದ ದೊಡ್ಡ ಪಟ್ಟಿಯನ್ನೇ ಮುಂದಿಟ್ಟರು. ಅದರಪ್ರಕಾರ ಹತ್ತಿಯಹಣ ಅದರ ಅರ್ಧಕೂಡಾ ಆಗುತ್ತಿರಲಿಲ್ಲ. ಮನೆಯಲ್ಲಿ ಹಳೆಯ ಕಾಲದ ತಾಮ್ರದ ನೀರ ಹಂಡೆಯೊಂದು ಇತ್ತು. ದೇವಕ್ಕ ತಾನಾಗಿ ಅದನ್ನು ಒತ್ತೀಯಿಡಲು ಸೂಚಿಸಿದಳು ! ಗೌಡಪ್ಪನವರ ಮನಸ್ಸಿಗೆ ಇದು

ಬಹಳಷ್ಟು ನಾಟಿತು. ಆದರೂ ನಿರ್ವಾಹವಿದ್ದಿಲ್ಲ. ನಿನ್ನೆಯಿನ್ನೂ ಲೆಕ್ಕಮಾಡಿದ್ದಾರೆ— ನಲವತ್ತೆಡುರೂಪಾಯಿ ಮೇಲಿಷ್ಟು ಚಿಲ್ಲರೆ ಹಣ, ಆಕೆಗಾಗಿ ಖರ್ಚುಮಾಡಿಬಿಟ್ಟಿದ್ದಾರೆ. ಅಂತು ಆ ಹಂಡೆಗೆ ತಮ್ಮ ಸೋದರಳಿಯನಿಂದ ಹತ್ತಲ್ಲ ಹದಿನೈದು ರೂಪಾಯಿ ಕೊಡಿಸುವುದಾಗಿ ಹೇಳಿದರು. 'ಏನಡ್ಡಿಯಿಲ್ಲಾ. ಆದ್ರ ನೀರುತುಂಬಾಕ ಏನೂ ಇಲ್ದಂಗ ಆಗ್ತೈತೆ, ಅದರಾಗಿಂದ ಬಂದ ಹನ್ನೆರಡು ಆಣೆ ರೂಕ್ಕಾ ಉಳಿಸಿಕೊಡ್ರಿ, ಮಣ್ಣಿನ ಹರವಿ ತಗೋಳಿಕ್ಕೆ" ಎಂದು ಕೇಳಿದಳು.

ಮಗಳನ್ನು ಕಾಣದೆ ಎರಡೂವರೆ ತಿಂಗಳಾಗಿತ್ತು. ನಾಳೆಗೆ ಹೋಗಬೇಕೆನ್ನುವುದರ ಹಿಂದಿನದಿನವೆಲ್ಲ ಕೂತು ತನ್ನ ಹರಿದ ಸೀರೆಯನ್ನು ಅಂಥದೇ ದಾರ ಇಸಕೊಂಡು ತಂದು ಹೊಲಿದುಕೊಂಡಳು. ಕತ್ತಲೆಯಾಗುತಲಿದ್ದರೂ ಹೊಳೆಗೆಹೋಗಿ ಅದನ್ನು ಒಗೆದು, ಒಣಗಿಸಿಕೊಂಡೇ ಮನೆಗೆ ಮರಳಿದಳು.

ಕೋರ್ಟಿನ ಆವಾರದಲ್ಲಿಯ ಒಂದು ಗಿಡದ ಬುಡದಲ್ಲಿ ದೇವಕ್ಕನು ಒಬ್ಬಳೇ ಕುಳಿತಿದ್ದಳು. ತನ್ನವರೆನ್ನುವವರು ಯಾರೂ ಇಲ್ಲವೆಂದು ಆಕೆಗೆ ಇನ್ನೊಮ್ಮೆ ಅನಿಸಿತು. ಇದ್ದೊಬ್ಬ ಗೌಡಪ್ಪನವರು ಹಗಲಿನಲ್ಲಿ ನಾಲ್ಕುಜನ ದೊಡ್ಡವರ ಬಳಗದಲ್ಲಿಯೆ ಓಡಾಡುತ್ತಿರುವರು. ಎಷ್ಟುಬೇಕೋ ಅಷ್ಟೇ ಇವಳೊಂದಿಗೆ ಮಾತಾಡಿ, ಹೋಗಿಬಿಡುತ್ತಿದ್ದರು. ಆದರೂ ಹನುಮನ ಹೇಳಿಕೆಗೆಂದು ಅವನ ಹೆಸರನ್ನು ಕೂಗಿದಾಗ ಗೌಡಪ್ಪನವರು ದೇವಕ್ಕನು ಅವನ ಜವಾಬನ್ನು ಕೇಳಿದರೆ ನೆಟ್ಟಗೆ ಎಂದೆನಿಸಿ, ಅಲ್ಲಿಯೇ ನಿಂತಿದ್ದ ಒಬ್ಬ ಹಳ್ಳಿಗನಿಂದ ಅವಳಿಗೆ ಹೇಳಿಕಳುಹಿದರು. ಅತ್ತ ಇತ್ತ ಸುತ್ತಾಡಿದಂತೆ ಮಾಡಿ ಐದುನಿಮಿಷ ದಾರಿಕಾದರೂ ಅವಳು ಇವರ ಸಂದೇಶವನ್ನು ಕೇಳಿದ್ದರೂ ಎದ್ದು ಬರಲಿಲ್ಲ. ಆದರೆ ತನ್ನ ಮಗಳು ಎಲ್ಲಿಯಾದರೂ ಬರುತ್ತಾಳೆಯೋ ಎಂಬುದನ್ನು ನೋಡುತ್ತಿದ್ದಳು. ಗೌಡಪ್ಪನವರು ತಾವೇ ಹೋಗಿ ಕರೆಯಬೇಕೆಂದು- ಕೊಂಡರು. 'ಹಾಳಾಗಿ ಹೋಗಲಿ, ಅದಕ್ಕೆ ಬುದ್ಧಿಯಾದರೂ ಎಲ್ಲಿ ಸಮನಾಗಿದೆ ?' ಎಂದು ಸಿಟ್ಟಿನಿಂದ ಒಳಗೆ ಹೋದರು.

ಹಾಗೆಯೆ ಅರ್ಧತಾಸು ಕಳೆದಮೇಲೆ, ಕೋರ್ಟಿನ ಸಿಪಾಯಿಯು ಪಾರೋತಿಯ ಹೆಸರನ್ನು ಹಿಡಿದು ಕೂಗಿದನು. ದೇವಕ್ಕ ಚಟ್ಟನೆ ಎದ್ದಳು. 'ಆಯ್ಯೋ, ಈಟು ತಿಳೀಬಾರ್ದು ? ಅಲ್ಲೇ ಒಳ್ಳಾಕ ಹನುಮನ ಹಂತ್ಯಾಕಿ ಇರತಾಳ ಅಂಬೂದು ?' ಎಂದುಕೊಂಡು ಗಡಬಡಿಸಿ ಎದ್ದಳು.

ಪಾರೂ ಸಾಕ್ಷಿಗರ ಕಟಾಂಜನದಲ್ಲಿ ಬಂದು ನಿಂತಿದ್ದಾಳೆ. ಅವಳ ತಾಯಿ ಎದುರಿನಿಂದಲೇ ಆಕೆಯನ್ನು ನೋಡುನೋಡುತ್ತ ಬಂದಳು. ಒಂದೊಂದು ಹೆಜ್ಜೆ ಮುಂದೆ ಇಟ್ಟಹಾಗೆ ಮಗಳು ಆಕೆಯ ಹತ್ತಿರ ಹತ್ತಿರಕ್ಕೆ ಬರುತ್ತಾಳೆ. ದೇವಕ್ಕ ನ್ಯಾಯಾಧೀಶರ ಕಡೆಗೊಮ್ಮೆ ನೋಡಿದಳು. ವಕೀಲರು ಪ್ರಶ್ನೆ ಕೇಳುತ್ತಿದ್ದರೂ, ಮಗಳು ತನ್ನ ಕಡೆಗೇ ನೋಡುತ್ತಿರುವಳೆಂಬುದನ್ನು ದೇವಕ್ಕ ಗುರುತಿಸಿದಳು. ಅವಳ ಕಣ್ಣಲ್ಲಿ ನೀರು ಚಿಮ್ಮಿ ದೃಷ್ಟಿ ಮಂಜಾಯಿತು. ಆ ಸಂತೋಷದ ವೇದನೆ ಅವಳನ್ನು ಬಿಕ್ಕುವಂತೆ ಮಾಡಿತು. ಎಲ್ಲರಿಗಿಂತ ತಾವು ಮೊದಲು ಹೋಗಿ ಮಗಳನ್ನು ಅಪ್ಪಲೇ ಎನ್ನುವಹಾಗೆ ಕೈಗಳು ಮುಂದಾಗಿದ್ದುವು.

ದೇವಕ್ಕನಿಗೆ ಏನೋ ಸಂಶಯಬಂದು ತನ್ನ ಕಣ್ಣು ಒರಸಿಕೊಂಡು ನೋಡುತ್ತಾಳೆ—ಮಗಳ ಕೊರಳಲ್ಲಿ ಮಂಗಳಸೂತ್ರ! 'ಮಂಗಳಸೂತ್ರ! ನನ್ನ ಮಗಳಿಗೆ ಮದುವೆ! ಇವರೆಲ್ಲ ಕೂಡಿ ಮದುವೆ ಮಾಡಿಬಿಟ್ಟಿದ್ದಾರೆ. ನನ್ನ ಬಿಟ್ಟೇ ನನ್ನ ಮಗಳ ಮದುವೆಯಾಯಿತು! ನೀಚರು!' ದೇವಕ್ಕ ಅಡಿಯಿಂದ ಮುಡಿಯವರೆಗೆ ಮಗಳನ್ನು ಪೂರ್ಣವಾಗಿ ನೋಡಿದಳು. ಮದುವೆ ಮೊನ್ನೆಮೊನ್ನೆ ಆಗಿರಬೇಕು, ಕಾಲಿಗೆ ಹತ್ತಿದ ಅರಿಷಣ ಇನ್ನೂ ಪೂರ್ಣ ಹೋಗಿಲ್ಲ, ಉಟ್ಟಿದ್ದು ಹೊಸ ಕರಿಯಚಂದ್ರಕಾಳಿಯ ಸೀರೆ, ಬೆರಳಿಗಿರುವ ಪಿಲ್ಲೆ, ಕಾಲುಂಗರಗಳನ್ನೂ ಗುರುತಿಸಿದಳು. ಅವಳ ಪುಟ್ಟತೋಳಿಗೆ ಒಂದು ಪುಟ್ಟ ತೋಳಬಂದಿಯೂ ಇದೆ. ಕೊರಳಲ್ಲಿ ಕರಿಮಣಿಯ ಜೊತೆಗೆ ಗೆಜ್ಜೆ ಟೀಕೆಯೂ ಇದೆ. ಅಂಗಾಲಿನ ಕೇದನೆಯ ಬಣ್ಣ, ಮುಖಕ್ಕೂ ತನ್ನ ನೆಳಲನ್ನು ಕೆಡವಿದಂತಾಗಿ ಅದು ಅಪೂರ್ವ ಚೆಲ್ವಿಕೆಯನ್ನು ಪಡೆದಿತ್ತು.

ಸಟ್ಟನೆ ಹನುಮನು ಕುಳಿತಿರುವಲ್ಲಿಗೆ ಮುಖ ಹೊರಳಿಸಿದಳು. ಆ ಗುಂಪಿನಲ್ಲಿ ಅವಳಿಗೆ ತನ್ನ ಅಳಿಯನನ್ನು ಗುರುತಿಸಬೇಕಾಗಿತ್ತು. ಅವನೂ ಅಲ್ಲಿಯೆ ಕುಳಿತಿದ್ದ. ಅರಿಷಣ ಅರಿಷಣವಾಗಿದ್ದ ಅಂಗಿಯನ್ನು ತೊಟ್ಟಿರುವ ಮತ್ತು ಕೆಂಪುಜರದ ರುಮಾಲನ್ನು ಸುತ್ತಿದ ಎಳಮೀಸೆಯ ಆ ದುಡುಗನನ್ನು ತನ್ನ ಅಳಿಯನೆಂದು ಬೇಗ ಗುರುತಿಸಿದಳು.

ದೇವಕ್ಕನ ಮನಸ್ಥಿತಿ ತೀರ ಅಲ್ಲೋಲಕಲ್ಲೋಲವಾಗಿತ್ತು. ವಿವಿಧ ಬಗೆಯ ಭಾವನೆಗಳು, ಅವಳ ತಲೆಯಲ್ಲಿ ಸಮುದ್ರದ ದೊಡ್ಡ ದೊಡ್ಡ ತೆರೆಗೆ

ಳಂತೆ ಶಾಕಲಾಡಿ ಹುಯಿಲೆಬ್ಬಿಸಿದುವು. ದೇವಕ್ಕನ ಪ್ರಜ್ಞೆ ಎಷ್ಟೂ ಅವಳ ಸ್ವಾಧೀನದಲ್ಲಿರಲಿಲ್ಲ. ಎಲ್ಲರಿಗೂ ಕೇಳಿಸುವಂತೆ ಚೀರಿದಳು. "ಅಲ್ಲಿಗೇ ಮುಗಸ್ರಿನ್ನ. ನನಗ ನನ್ನ ಮಗಳು ಬ್ಯಾಡಾ. ಅವರ್ನ ಕರಕೊಂಡು ಹೋಗ್ರಿ. ಆಕಿ ನನ್ನ ಮಗಳ್ನ ಅಲ್ಲಾ. ನಿಮಗೆಲ್ಲಾ ಸುಳ್ಳನ ಈಟದಿನಾ ತರಾಸ ಕೊಟ್ನ. ನನಗ ನನ್ನ ಮಗಳು ಬ್ಯಾಡಾ."

ಕೋರ್ಟಿನಲ್ಲಿ ಹುಯಿಲೆದ್ದಿತು. ಗೌಡಪ್ಪನವರು ಗಾಬರಿಗೊಂಡು, ಗಡಬಡಿಸಿ ತಮ್ಮ ವಕೀಲರ ಕಿವಿಯಲ್ಲಿ ಹೇಳಿದರು. ಅದನ್ನೇ ಎಂದರೆ ಅವ ಳಿಗೆ ಹುಚ್ಚು ಹಿಡಿದಿದೆಯೆಂಬುದನ್ನು ಇಂಗ್ಲೀಶಿನಲ್ಲಿ ವಕೀಲರು ಕೋರ್ಟಿನ ಮುಂದ ಹೇಳುತ್ತಿರಲು, ದೇವಕ್ಕ ಮತ್ತೆ ಕೂಗಿದಳು. "ಯಾಕ ಸುಳ್ಳನ ದಣಕೊಂತಿಯೋ ನನ್ನ ಹಡೆದಪ್ಪಾ? ನನಗ ನನ್ನ ಮಗಳು ಬ್ಯಾಡಾ ಅಂತ ಹೇಳಿಲ್ಲs? ಮತ್ತ ಕೇಳಾಕ ಹೊಂಟಾನ. ನಾಯೇನು ನಿನಗ ಬರದಕೊಟ್ಟ ಮನೀ ಹೊಳ್ಳಿ ಕೇಳೂದಿಲ್ಲೇಳು" ಎಂದಳು. ಆ ಕ್ಷಣವೆ ಗೌಡಪ್ಪನವರು ಎದ್ದುಬಂದು ಅವಳನ್ನು ಹೊರಗೆಕರೆದುಕೊಂಡು ಹೋದರು.

ತಾಯಿಯನ್ನು ಕಂಡು ಮೊದಲೇ 'ಕಮು ಕಮು' ಎನ್ನುತ್ತಿದ್ದ ಪಾರ್ವ ತಿಯ ಸಾಕ್ಷಿ ಅಲ್ಲಿಗೇ ನಿಂತಿತು. ವಾದಿಗೆ ಹುಚ್ಚೇ ಹಿಡಿದಿದೆಯೆಂದು ಎಲ್ಲರೂ ಒಪ್ಪಿ, ಎರಡೂ ಕಡೆಯ ವಕೀಲರು ಕೂಡಿ ಆಗಿಂದಾಗ ರಾಜಿಯ ಕಾಗದಮಾಡಿಸಿದರು. ತೆರದ ಹಣವನ್ನೆಲ್ಲ ದೇವಕ್ಕನಿಗೆ ಕೊಡಬೇಕೆಂದೂ, ಪಾರ್ವತಿಯ ಗಂಡ, ತನ್ನ ಅತ್ತೆಯನ್ನು ತನ್ನ ಮನೆಯಲ್ಲೇ ಇಟ್ಟು ಕೊಂಡು ಸಂರಕ್ಷಣೆ ಮಾಡಬೇಕೆಂದೂ ಗೊತ್ತಾಯಿತು. ತನಗೆ ದಂಡ ವಾಯಿತೆಂಬ ದ್ವೇಷದಿಂದ ಹಟಗೊಂಡು, ತಾಯಿಯನ್ನು ಬಿಟ್ಟೇ ಪಾರುವಿನ ಮದುವೆಯನ್ನು ಮಾಡಿದ್ದಾಗಿ ಹನುಮನು ಒಪ್ಪಿಕೊಂಡನು.

ಮಗಳೊಂದಿಗೆ ಅದೇ ಗಿಡದ ನೆರಳಿಗೆ ಕುಳಿತು ಅಳುತ್ತಿದ್ದ, ದೇವಕ್ಕ ನಿಗೆ ಈ ಮಾತನ್ನೆಲ್ಲ ಕಿವಿಯ ಮೇಲೆ ಹಾಕಿದರು. ಅದಕ್ಕೆ ಅವಳು "ನಂಗೇನೂ ಗೊತ್ತಿಲ್ಲ. ಅವರsss ಅದಾರು" ಎಂದು ಗೌಡಪ್ಪನವರ ಕಡೆ ಕೈಮಾಡಿದಳು. ಒಂದು ನಿಮಿಷತಡೆದು "ಪಾರೀ, ನಿನ್ನ ತೆರದಹಣಾ ನನಗ ಕೊಡತಾರಲ್ಲಾ. ನಮ್ಮೂರಾಗ ನಿನಗ ಇನ್ನೊಮ್ಮೆ ಮದವೀ ಮಾಡ್ತೇನಿ" ಎಂದಳು!

ಗೌಡಪ್ಪನವರು ಹತ್ತಿರದಲ್ಲೇ ಕುಳಿತು, ಹನುಮನೊಂದಿಗೆ,

ದೇವಕ್ಕನು ಈ ಖಟ್ಲೆ ನಡಿಸುವುದಕ್ಕೆಂದು ಸಾಲವಾಗಿ ಒಯ್ದ ರಕಮಿನ ವಿಷಯವಾಗಿ ಮಾತೆತ್ತಿದರು. ಹನುಮನು ತಕರಾರು ಮಾಡುತ್ತಿದ್ದ. ದೇವಕ್ಕನು ನಡುವೆ ಬಾಯಿಹಾಕಿ "ಅಂವಾ ಕೊಡದಿದ್ರ ನಾಕೊಡತೀನಿ ಗೌಡಪ್ಪಾ, ನಿನ್ನ ರೊಕ್ಕಾ ನೀ ತೊಗೊಂಡು ಹೋಗು. ಎಲ್ಲ್ಯರೆ ಕೊಡದೇ ನಾ ಸತ್ರ, ಆಮ್ಯಾಲೂ ನನ್ನ ಬಿಡಾಕಿಲ್ಲ ನೀ" ಎಂದಳು. ಸಿಟ್ಟಿನಿಂದ ತಪ್ತರಾದರೂ, "ಹುಚ್ಚೀಹಿಡಿದವರ ಸಂಗ್ತೀ ಏನು" ಎಂದು ಗಟ್ಟಿಯಾಗಿ ತಮಗೇ ಹೇಳಿಕೊಂಡು ಆ ಜಾಗಬಿಟ್ಟು ಎದ್ದರು.

ಪಾರೋತಿ ತಾಯಿಯ ಕೈಹಿಡಿದು, "ಯವ್ವಾ ನಮ್ಮನಿಗೇ ಹೋಗೋಣು" ಎಂದಳು. "ಹುಚ್ಚೀ, ನಮ್ಮನಿ ಎಲ್ಲೈತಿ? ಗೌಡಪ್ಪನ ಪಾಲಾಗೇತಿ. ಆ ವಕೀಲಾ, ಅಲ್ಲಿ ದೊಡ್ಡದೊಂದು ಬಂಗ್ಲೆ ಕಟ್ಟಿಸಿ, ಇರತಾನಂತ" ಎಂದಳು. ಪಾರೋತಿಯ ಬಟ್ಟಲುಗಣ್ಣಿನಲ್ಲಿ ಮತ್ತೊಮ್ಮೆ ನೀರಾಡಿತು.

ಹನುಮನು ಅಳಿಯನನ್ನು ಕರತಂದು ಅತ್ತೆಗೆ ನಮಸ್ಕಾರ ಮಾಡ ಹೇಳಿದನು; ಅವನನ್ನು ಕಂಡು ದೇವಕ್ಕನು "ಏ ತಮ್ಮಾ, ಮಗಳು ಭಾಳ ಒಳ್ಳೇಕಿ. ನೀ ಏನರೆ ಆಕಿಗೆ ಹೊಡದೂ ಪಡದೂ ಮಾಡಿದೆಂದ್ರ, ನಾನಿನ್ನ ಹೊಡಿಯಾಕಿ. ಹುಶಾರದಿಂದ ಇರು. ನಾ ಭಾಳ ಸಿಟ್ಟಿನಮನಿಶೀಳು" ಎಂದು ನುಡಿದಳು.

ಅಲ್ಲಿಯೆ ಹಾದುಹೋಗುತ್ತಿದ್ದ ಇವರಕಡೆಯ ವಕೀಲರು ಈ ಮಾತನ್ನು ಕೇಳಿ, ಸಂಗಡವಿದ್ದ ಗೌಡಪ್ಪನವರಿಗೆ ಏನಾದರೇನು. ಆಕಿಮಗಳು ಆಕಿಗೇನು ದೊರೀಲಿಲ್ಲ" ಎಂದರು.

"ಹಾಳಾಗಿ ಹೋಗಲಿ" ಎಂದು ಗೌಡಪ್ಪನವರು ಮುಂದೆ ಸಾಗಿದರು.

॥ ಸಿರಿಗನ್ನಡಂ ಗೆಲ್ಗೆ ॥

**ಸುಂದರ ಮುದ್ರಣ,** **ಆಕರ್ಷಕ ಹೊದಿಕೆ,**

**ವಿಚಾರಪೂರ್ಣ ಲೇಖನಗಳಿಂದ ಎಲ್ಲರ ಮೆಚ್ಚುಗೆ ಪಡೆದ**

# ಪರ್ಣಕುಟಿ ಗ್ರಂಥಮಾಲೆ, ಗೋಕರ್ಣ

ಸಂಪಾದಕರು:— **ಗೌರೀಶ ಕಾಯ್ಕಿಣಿ, ವಿ. ಜಿ. ಭಟ್ಟ** ಎಂ. ಎ.

ಪ್ರಾರಂಭ:— ವಿಜಯದಶಮಿ, ೧೯೪೫ ಅಕ್ಟೋಬರ

ವರ್ಷಕ್ಕೆ:– ನೂರು ಪುಟಗಳ ನಾಲ್ಕು ಪ್ರಕಟನೆಗಳು.

ಚಂದಾ:— ೩ ರೂ. ಮಾತ್ರ (ರಜಿಸ್ಟರ ಅಂಚೆಯಿಂದ ೪ ರೂ.)

೧ನೇ ವರ್ಷದಲ್ಲಿ

೧ ಪ್ರಪಂಚದ ಕಥೆ ೦–೧೫–೦

೨ ಶ್ರೀನಾಥ ೦–೧೫–೦

೩-೪ ಕಾಂಚನಮೃಗ
ಭಾಗ ೧ ೨– ೦–೦

೨ನೇ ವರ್ಷದಲ್ಲಿ

೫–೬ ಕಾಂಚನಮೃಗ
ಭಾಗ ೨ ೧–೪–೦

೭ ರಕ್ತಸರೋವರ ೧–೪–೦

೮ ಸಹ್ಯಾದ್ರಿ ೧–೪–೦

೩ನೇ ವರ್ಷದಲ್ಲಿ

೯ ಗಂಡು ಹೆಣ್ಣು ೧–೮–೦

೧೦ ಅವರು ಮತ್ತು ದೇವಕ್ಕ

೧೧ ಉತ್ತರಕನ್ನಡದ ಜೀವನ
ಚಿತ್ರಗಳು (ಅಚ್ಚಿನಲ್ಲಿ)

೧೨ ಹಕ್ಕಿನ ಹೋರಾಟ
(ಅಚ್ಚಿನಲ್ಲಿ)

* **ಬಿಡಿಪುಸ್ತಕಗಳು**

೧ ರೂಢಿ ಹಾಗು ಭಾವಿಕ
ಕಲ್ಪನೆ ೦–೧–೦

೨ ಬೀಸಣಿಕೆ ೦–೪–೦

೩ ಪಲಾಯನ ೧–೪–೦

೪ ರಕ್ತಾಂಜಲಿ ೧–೦–೦

೫ ಬುರುಕಿ ೦–೧೨–೦

೬ ಯಕ್ಷಪ್ರಶ್ನೆ ಅಥವಾ
ಬರಲಿರುವ ಸಮಾಜ೩–೦–೦

೭ ಕಾಲದ ಕರೆ ೧–೦–೦

ವಾಚನಾಲಯಗಳಿಗೂ ವಿದ್ಯಾರ್ಥಿಗಳಿಗೂ ಉಪಯುಕ್ತವುಳ್ಳ ಕಥೆ-ಕಾದಂಬರಿ, ನಾಟಕ, ಚರಿತ್ರೆ, ವಿಚಾರಸಾಹಿತ್ಯ, ಹಾಗು ಶಾಲೋಪಯೋಗಿ ಪುಸ್ತಕಗಳೂ ಹೆಚ್ಚಿನ ಸವಲತ್ತಿನಿಂದ ದೊರೆಯುವವು.

ವಿವರಗಳಿಗೆ:—

**ಕರ್ನಾಟಕ ಪುಸ್ತಕ ಭಾಂಡಾರ ಗೋಕರ್ಣ, ಉತ್ತರ ಕನ್ನಡ,**

* ಇವು ಚಂದಾದ ರಂಗೆ ಮುಕ್ಕಾಲು ಕ್ರಯಕ್ಕೆ ದೊರೆಯುವವು.

# ಕನ್ನಡಿಗರಲ್ಲಿ ಬಿನ್ನಹ

ಗೋಕರ್ಣವು ಕರ್ನಾಟಕದ–ಏಕೆ, ಭಾರತದ ಸಂಸ್ಕೃತಿಯ ಮಹತ್ವದ ಕೇಂದ್ರ. ಈ ಕಾರಣಕ್ಕಾಗಿಯೇ ಪ್ರತಿಯೊಬ್ಬ ಕನ್ನಡಿಗನಿಗೆ ಗೋಕರ್ಣವೆಂದರೆ ಹೆಮ್ಮೆ.

ಗೋಕರ್ಣದ ಈ ಸ್ಥಾನಮಾನಗಳನ್ನು ಉಳಿಸಿಕೊಂಡು, ಬೆಳಸಿಕೊಂಡು ನಾಡ ಏಳ್ಗೆಗೆ ನಮ್ಮ ಅಳಿಲು ಸೇವೆಯನ್ನು ಸಲ್ಲಿಸಲೆಂದು ನಾವು ಕೆಲವು ತರುಣರು ಸೇರಿ ಈ 'ಪರ್ಣಕುಟಿ ಗ್ರಂಥಮಾಲೆ' ಯನ್ನು ಹೊರಡಿಸಿದ್ದೇವೆ.

ಇದರಲ್ಲಿ ನಮ್ಮ ಹಳ್ಳಿಗಳ ಜನಜೀವನದ ಚಿತ್ರಗಳನ್ನೂ ನಮ್ಮ ನಾಡಿನ ಏಳ್ಗೆಗೆ ಅವಶ್ಯವಾದ ವಿಚಾರಪರ ಗ್ರಂಥಗಳನ್ನೂ ಪ್ರಕಟಿಸುವದು ನಮ್ಮ ಗುರಿಯಾಗಿದೆ. ಈಗಾಗಲೇ ೧೦ ಪುಸ್ತಕಗಳು ನಮ್ಮ ಮಾಲೆಯಲ್ಲಿ ಪ್ರಕಟವಾಗಿವೆ.

ನಮ್ಮ ಈ ಕಾರ್ಯವನ್ನು ಉದಾರಿಗಳಿಂದ ಧನಸಹಾಯ ದೊರೆತಂತೆ ಇನ್ನೂ ಹೆಚ್ಚು ವಿಸ್ತರಿಸಬೇಕೆಂದಿದ್ದೇವೆ. ಜಗತ್ತಿನ ವಿವಿಧ ಜ್ಞಾನಶಾಖೆಯ ಮಹತ್ವದ ಗ್ರಂಥಗಳನ್ನು ಪ್ರಸಿದ್ಧಿಸಬೇಕೆಂದಿರುವೆವು. ಆದುದರಿಂದ ಜ್ಞಾನ ಪ್ರಸಾರದ ಈ ಕಾರ್ಯಕ್ಕೆ ಉದಾರಿಗಳಾದ ವಿದ್ಯಾಪ್ರೇಮಿಗಳು ನಮಗೆ ಬಿಡುಗೈಯಿಂದ ನೆರವಾಗಬೇಕಾಗಿ ಬೇಡಿಕೆ.

**ಆಶ್ರಯದಾತರು:**

೧೦೦ ರೂ. ಗಳ ಸಹಾಯಮಾಡುವವರು.

ಇವರಿಗೆ ಮಾಲೆಯ ಪ್ರಕಟನೆಗಳೆಲ್ಲ ಉಚಿತ ದೊರೆಯುತ್ತವೆ.

**ಪೋಷಕರು:**

೫೦ ರೂ. ಗಳ ನೆರವು ನೀಡುವವರು.

ಇವರಿಗೆ ಮಾಲೆಯ ಪ್ರಕಟನೆಗಳನ್ನೆಲ್ಲ ಅರ್ಧ ಕ್ರಯಕ್ಕೆ ಕೊಡಲಾಗುತ್ತದೆ.


**ಸಹಾಯಕರು:**

೨೫ ರೂ. ಕೊಡುವವರು

ಇವರಿಗೆ ಮಾಲೆಯ ಎಲ್ಲ ಪ್ರಕಟನೆಗಳೂ ಮುಕ್ಕಾಲು ಬೆಲೆಗೆ ಸಿಗುವವು.

ಸಂಚಾಲಕರು:

**ಶಾ. ಗ. ಗೋಪಿ**



**ಐರಣಿ ಶ್ರೀನಿವಾಸ :**

ಸಣ್ಣ ಕತೆಗಳಲ್ಲಿ ತಮ್ಮದೇ ಆದ ಒಂದು ಸ್ಥಾನವನ್ನು [illegible] ಶ್ರೀನಿವಾಸರು ಧಾರವಾಡದವರು. [illegible]ಲ್ಲಿ ಶಿಕ್ಷಣ ಪಡೆದು, ಮುಂಬೈ ಯುನಿವರ್ಸಿಟಿ [illegible] ಎ. ಪರೀಕ್ಷೆಯಲ್ಲಿ [illegible]ಗಸೆಯ ವರ್ಗದಲ್ಲಿ ತೇರ್ಗಡೆಹೊಂದಿ, ಸ್ವಾಂಗ್ಲಿ ವಿಲಿಂಗ್ಡನ್ ಕಾಲೇಜಿನಲ್ಲಿ ಒಂದು ವರ್ಷ ಫೆಲೋ ಆಗಿ ಕೆಲಸ ಮಾಡಿ ಗ್ರಂಥಾಲಯ[illegible]ಗಳ ವಿಶೇಷ ಅಭ್ಯಾಸಕ್ಕಾಗಿ ದಿಲ್ಲಿಗೆ ಹೋಗಿದ್ದಾರೆ. ಎರಡು [illegible] ಸೂಕ್ಷ್ಮ ವಿಶ್ಲೇಷಣೆ ನೂಡುವ ಈ ಎರಡು ಕತೆಗಳ ಸಂಗ್ರಹ ಇವರ ಪ್ರಥಮ ಕೃತಿ.